ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 28 ಶುಕ್ರವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 220 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದು ಉಡುಪಿಗೆ ಪ್ರಧಾನಿ ಮೋದಿ ಭೇಟಿ: ಲಕ್ಷ ಕಂಠ ಗೀತಾ ಪಾರಾಯಣಕ್ಕೆ ಸಿದ್ಧತೆ

ಉಡುಪಿ, ನ.27– ಕೃಷ್ಣನ ನಗರಿ ಉಡುಪಿಗೆ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ (ನ.28) ಭೇಟಿ ನೀಡಲಿದ್ದಾರೆ.



ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಶುಕ್ರವಾರ ನಡೆಯಲಿರುವ ಐತಿಹಾಸಿಕ ಲಕ್ಷ ಕಂಠ ಗೀತಾ ಪಾರಾಯಣ – ಒಂದು ಲಕ್ಷ ಭಕ್ತರಿಂದ ಸಾಮೂಹಿಕ ಭಗವದ್ಗೀತೆ ಪಠಣಕ್ಕಾಗಿ ಸಿದ್ಧತೆಗಳು ನಡೆದಿವೆ. ನರೇಂದ್ರ ಮೋದಿ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಗೀತಾ ಪಠಣವು ಮಠದಲ್ಲಿ ಪವಿತ್ರ ಅಲಂಕಾರಗಳ ಅನಾವರಣದೊಂದಿಗೆ ಗರ್ಭಗುಡಿಯ ಮುಂಭಾಗದಲ್ಲಿರುವ ತೀರ್ಥ ಮಂಟಪಕ್ಕೆ ಚಿನ್ನದ ಹೊದಿಕೆ ಮತ್ತು ಕನಕನ ಕಿಂಡಿಗೆ ಚಿನ್ನದ ಹೊದಿಕೆ (ಕನಕ ಕವಚ) ಮಾಡಲಾಗುತ್ತದೆ.

ಸೂಕ್ತ ವ್ಯವಸ್ಥೆ, ಭದ್ರತೆ: ಪ್ರಧಾನಿ ಮೋದಿ ಅವರು ಮಂಗಳೂರು ವಿಮಾನ ನಿಲ್ದಾಣದಲ್ಲಿ ಇಳಿದು ಹೆಲಿಕಾಪ್ಟರ್ ಮೂಲಕ ಉಡುಪಿಗೆ ಆಗಮಿಸಿ, ಮಧ್ಯಾಹ್ನದ ಸುಮಾರಿಗೆ ಮಠವನ್ನು ತಲುಪುತ್ತಾರೆ. ಅವರು ಮೊದಲು ಶ್ರೀ ಕೃಷ್ಣನ ದರ್ಶನ ಮತ್ತು ದೇವಾಲಯದ ಆಚರಣೆಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ನಂತರ ಗೀತಾ ಪಾರಾಯಣ ■ 6ನೇ ಪುಟಕ್ಕೆ

ಯುವಕನ ಇರಿದು ಕೊಂದ ಘಟನೆ ಬೆನ್ನಲ್ಲೇ

ರಾಜೀವ್‌ನಗರದಲ್ಲಿ ವ್ಯಕ್ತಿಗೆ ಚಾಕುವಿನಿಂದ ಇರಿತ

- ಹುಡುಗರ ಗಲಾಟೆ ವಿಚಾರಿಸಲು ಬಂದ ವ್ಯಕ್ತಿಗೆ ಇರಿದು ಪರಾರಿಯಾದ ದುಷ್ಕರ್ಮಿಗಳು
- ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ; ಭಯಭೀತರಾದ ಜನತೆ

ಮೈಸೂರು, ನ.27– ಬುಧವಾರ ಮುಂಜಾನೆ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯ ಶಾಂತಿ ನಗರದಲ್ಲಿ ಯುವಕನನ್ನು ಇರಿದು ಭೀಕರವಾಗಿ ಹತ್ಯೆ ಮಾಡಿದ ಬೆನ್ನಲ್ಲೇ ಇಂದು (ಗುರುವಾರ) ರಾತ್ರಿ ಮೈಸೂರು ದಕ್ಷಿಣ ಠಾಣೆ ವ್ಯಾಪ್ತಿಯ ರಾಜೀವ್‌ನಗರದಲ್ಲಿ ವ್ಯಕ್ತಿಯೋರ್ವನನ್ನು ಚಾಕುವಿನಿಂದ ಇರಿಯಲಾಗಿದೆ.

ಮೈಸೂರಿನ ರಾಜೀವ್‌ನಗರದ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಪ್ರೀಮಿಯಂ ಸರ್ವೀಸ್ ಅಪಾರ್ಟ್‌ಮೆಂಟ್ ಮುಂಭಾಗ ಈ ಘಟನೆ ನಡೆದಿದ್ದು, ಸಾಬೀರ್ (35) ಎಂಬಾತ ತೀವ್ರವಾಗಿ ಗಾಯಗೊಂಡು, ರಿಂಗ್ ರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಪಾರ್ಟ್‌ಮೆಂಟ್ ಮುಂಭಾಗ ಕೆಲ ಹುಡುಗರು ಜಗಳ ಮಾಡಿಕೊಳ್ಳುತ್ತಿದ್ದರು. ಅದರ ಬಗ್ಗೆ ವಿಚಾರಿಸಲು ಹೋದಾಗ ಅಪರಿಚಿತರು ತನಗೆ ಇರಿದು ಪರಾರಿಯಾಗಿದ್ದಾರೆ ಎಂದು ಗಾಯಾಳು ಸಾಬೀರ್ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾನೆ. ಆದರೆ ಅಲ್ಲಿ ನಿಜವಾಗಿ ನಡೆದಿರುವುದು ಏನು ಎಂಬುದು ತನಿಖೆಯಿಂದ ಹೊರ ಬರಬೇಕಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಇರಿತಕ್ಕೊಳಗಾದ ವ್ಯಕ್ತಿಯನ್ನು ದಾಖಲಿಸಿದ್ದ ಆಸ್ಪತ್ರೆ ಮುಂಭಾಗ ನೂರಾರು ಮಂದಿ ಜಮಾಯಿಸಿದ್ದು, ರಿಂಗ್ ರಸ್ತೆಯಲ್ಲಿ ವಾಹನ ಸಂಚಾರಕ್ಕೂ ಅಡಚಣೆ ಉಂಟಾಗಿದೆ. ವಿಷಯ ತಿಳಿಯುತ್ತಿದ್ದಂತೆ ಹೆಚ್ಚಿನ ಸಂಖ್ಯೆಯ ಪೊಲೀಸರು ಆಸ್ಪತ್ರೆ ಬಳಿ ದೌಡಾಯಿಸಿ ಗುಂಪನ್ನು ಚದುರಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ■ 6ನೇ ಪುಟಕ್ಕೆ

ರಾಜ್ಯದಲ್ಲಿ ಅಧಿಕಾರ ಹಸ್ತಾಂತರ ಬಿಕ್ಕಟ್ಟು ಹಿನ್ನೆಲೆ

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ

ಐವರಿಗೆ ವರಿಷ್ಠರ ಬುಲಾವ್

- ■ ಶನಿವಾರ ದೆಹಲಿ ಇಂದಿರಾ ಭವನದಲ್ಲಿ ಮಹತ್ವದ ಸಭೆ
- ■ ವಿದೇಶದಿಂದ ಇಂದು ಸೋನಿಯಾ ಗಾಂಧಿ ವಾಪಸ್

ಬೆಂಗಳೂರು, ನ.27(ಕೆಎಂಶಿ)– ಅಧಿಕಾರ ಹಸ್ತಾಂತರ ಗೊಂದಲ ನಿವಾರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕರ್ನಾಟಕದ ಐವರು ಮುಖಂಡರಿಗೆ ಕಾಂಗ್ರೆಸ್ ವರಿಷ್ಠರು ಶನಿವಾರ ದೆಹಲಿಗೆ ಬರುವಂತೆ ಆಹ್ವಾನಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೆಹಲಿಗೆ ಹಿಂತಿರುಗುತ್ತಿದ್ದಂತೆ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಜೊತೆ ಸಮಾಲೋಚನೆ ನಡೆಸಿ, ನವೆಂಬರ್ 29ಕ್ಕೆ ಸಭೆ ನಿಗದಿ ಮಾಡಿದ್ದಾರೆ. ರಾಹುಲ್ ಜೊತೆ ಚರ್ಚಿಸಿದ ನಂತರ ಖರ್ಗೆ ಅವರು ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಸಭೆ ನಡೆಸುವ ಬಗ್ಗೆ ಮಾಹಿತಿ ನೀಡಿದ್ದಾರೆ.




ಅಧ್ಯಕ್ಷರ ಸಲಹೆಯಂತೆ ಸುರ್ಜೇವಾಲ ಅವರು, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಐವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಇಂದಿರಾ ಭವನದಲ್ಲಿ ನಿಗದಿಯಾಗಿರುವ ಸಭೆಯಲ್ಲಿ ಭಾಗವಹಿಸುವಂತೆ ಸೂಚಿಸಿದ್ದಾರೆ.

ಪಕ್ಷ, ಸರ್ಕಾರ ಇಕ್ಕಟ್ಟಿಗೆ: ಸಿದ್ದರಾಮಯ್ಯ ಆಡಳಿತ ಎರಡೂವರೆ ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಎದ್ದಿರುವ ಅಧಿಕಾರ ಹಸ್ತಾಂತರ ವಿಚಾರ ಪಕ್ಷ ಮತ್ತು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಇಡೀ ರಾಷ್ಟ್ರವ್ಯಾಪಿ, ದಿನವಿಡೀ ಸುದ್ದಿಯಾಗಿ ರಾಷ್ಟ್ರೀಯ ನಾಯಕರಿಗೂ ಮುಜುಗರ ತಂದಿದೆ. ಈ ಗೊಂದಲ ನಿವಾರಣೆಗೆ ವರಿಷ್ಠರು ಕೊನೆಗೂ ಸಮಯ ನಿಗದಿ ಮಾಡಿ ನಾಯಕರಿಗೆ ಆಹ್ವಾನ ನೀಡಿದ್ದಾರೆ. ವಿದೇಶ ಪ್ರವಾಸದಲ್ಲಿರುವ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ನವೆಂಬರ್ 28ಕ್ಕೆ ಭಾರತಕ್ಕೆ ಹಿಂತಿರುಗಲಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ದಿನಾಂಕ ನಿಗದಿಪಡಿಸಲಾಗಿದೆ.

ರಾಜ್ಯ ಪ್ರವಾಸದಲ್ಲಿದ್ದ ಖರ್ಗೆ ಅವರು ದೆಹಲಿಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿ, ಅಧಿಕಾರ ಹಸ್ತಾಂತರ ಗೊಂದಲ ನಿವಾರಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಪಕ್ಷದ ಮೂರ್‍ನಾಲ್ಕು ಪ್ರಮುಖ ನಾಯಕರನ್ನು ದೆಹಲಿಗೆ ಕರೆಸಿ ಚರ್ಚೆ ಮಾಡುವುದಾಗಿ ತಿಳಿಸಿದ್ದರು. ■ 6ನೇ ಪುಟಕ್ಕೆ

ಸಾಮಾಜಿಕ ಜಾಲತಾಣದಲ್ಲಿ ಸಿಎಂ, ಡಿಸಿಎಂ ವಾಗ್ದಾನ ಸದ್ದು!




ಬೆಂಗಳೂರು, ನ.27(ಕೆಎಂಶಿ)– ಅಧಿಕಾರ ಹಸ್ತಾಂತರ ವಿಚಾರ ರೋಚಕತೆ ಪಡೆಯುತ್ತಿರುವ ಹೊತ್ತಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ವಾಗ್ದಾನದ ಪರೋಕ್ಷ ವಾಕ್ಸಮರ ಶುರುವಾದಂತಿದೆ.

'ಕೊಟ್ಟ ಮಾತು ಉಳಿಸಿಕೊಳ್ಳುವುದೇ ವಿಶ್ವದ ದೊಡ್ಡ ಶಕ್ತಿ' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಪೋಸ್ಟ್ ಮಾಡಿದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ 'ನಾವು ಕರ್ನಾಟಕಕ್ಕೆ ಕೊಟ್ಟ ಮಾತು ಕೇವಲ ಘೋಷಣೆ ಅಲ್ಲ, ಅದೇ ನಮಗೆ ಜಗತ್ತು. ಜನರಿಗಾಗಿ ಜಗತ್ತನ್ನು ಉತ್ತಮಗೊಳಿಸದೇ ಹೋದರೆ ಕೊಟ್ಟ ಮಾತು ಶಕ್ತಿ ಆಗುವುದಿಲ್ಲ' ಎಂದು ಪೋಸ್ಟ್ ಮಾಡಿ ಕೌಂಟರ್ ನೀಡಿದ್ದಾರೆ. ಡಿಕೆಶಿ ಪೋಸ್ಟ್‌ನಲ್ಲಿದ್ದ ವರ್ಡ್(WORD) ಹಾಗೂ ವರ್ಲ್ಡ್(WORLD) ಗಳನ್ನೇ ಬಳಸಿ ಸಿದ್ದರಾಮಯ್ಯ ಟಾಂಗ್ ನೀಡಿದ್ದಾರೆ.

ತಮ್ಮ ನಿಲುವನ್ನು ವರಿಷ್ಠರಿಗೆ ಮುಟ್ಟಿಸುವ ಉದ್ದೇಶದಿಂದಲೋ ಏನೋ ಇಬ್ಬರೂ ಇಂಗ್ಲಿಷ್‌ನಲ್ಲೇ ಬರೆದುಕೊಂಡಿದ್ದಾರೆ. ಈ ಮೂಲಕ ರಾಜ್ಯ ಕಾಂಗ್ರೆಸ್‌ನ ಗದ್ದುಗೆ ಗುದ್ದಾಟ ಮತ್ತಷ್ಟು ಕುತೂಹಲ ಹೆಚ್ಚಿಸಿದೆ.

ಡಿಕೆಶಿ ಪೋಸ್ಟ್: ಅಧಿಕಾರ ಹಸ್ತಾಂತರದ ಒಪ್ಪಂದದ ಬಗ್ಗೆ ಬಹಿರಂಗವಾಗಿ ಮಾತನಾಡದ ಡಿಸಿಎಂ ಡಿ.ಕೆ.ಶಿವಕುಮಾರ್, ತಮ್ಮ ಪರವಾದ ಧ್ವನಿ ಗಟ್ಟಿಯಾಗುತ್ತಿರುವ ವೇಳೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ವಾಗ್ದಾನದ ಮಹತ್ವ ತಿಳಿಸಿದ್ದರು. ಬೆಳಗ್ಗೆ 'ವರ್ಡ್ ಪವರ್ ಈಸ್ ವರ್ಲ್ಡ್ ಪವರ್'(Word Power is World Power), ಅಂದರೆ 'ಕೊಟ್ಟ ಮಾತನ್ನು ಉಳಿಸಿಕೊಳ್ಳುವುದು ಜಗತ್ತಿನ ಅತ್ಯಂತ ದೊಡ್ಡ ಶಕ್ತಿ' ಎಂದು ಸೂಚ್ಯವಾಗಿ ತಿಳಿಸಿದ್ದರು. ನ್ಯಾಯಾಧೀಶರಾಗಲೀ, ಅಧ್ಯಕ್ಷರಾಗಲೀ, ನಾನಾಗಲೀ, ಬೇರೆ ಯಾರೇ ಆಗಿರಲಿ, ಎಲ್ಲರೂ ನುಡಿದಂತೆ ನಡೆಯಬೇಕು ■ 6ನೇ ಪುಟಕ್ಕೆ



ಮೈಸೂರಿಗರ ಮಹಾತ್ವಾಕಾಂಕ್ಷೆಯ

'ಗ್ರೇಟರ್ ಮೈಸೂರು' ಯೋಜನೆ ಜಾರಿಗೆ

- ಸಂಪುಟ ಸಭೆ ಸಮ್ಮತಿ
- ಸಾಲಿಗ್ರಾಮ ಪಟ್ಟಣ ಪಂಚಾಯ್ತಿ
- ಕಬಿನಿ ನಾಲೆ ಸುಧಾರಣಾ ಕಾಮಗಾರಿ



ಬೆಂಗಳೂರು, ನ.27– ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸುತ್ತಮುತ್ತಲಿನ ಎಂಟು ಗ್ರಾಮ ಪಂಚಾಯಿತಿ, ನಾಲ್ಕು ಪಟ್ಟಣ ಪಂಚಾಯ್ತಿ, ಒಂದು ನಗರ ಸಭೆ ಸೇರಿಸಿಕೊಂಡು 'ಬೃಹತ್ ಮೈಸೂರು ಮಹಾನಗರ ಪಾಲಿಕೆ' (ಗ್ರೇಟರ್ ಮೈಸೂರು) ಅಸ್ತಿತ್ವಕ್ಕೆ ತರಲು ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇಂದು (ಗುರುವಾರ) ನಡೆದ ಸಚಿವ ಸಂಪುಟ ನಿರ್ಧರಿಸಿದೆ.

ಗ್ರೇಟರ್ ಮೈಸೂರು ಎಂದರೆ ಮೈಸೂರು ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಒಳಗೊಂಡ ಒಂದು ಬೃಹತ್ ಯೋಜಿತ ವಿಸ್ತರಣೆ. ಇದು ಉದ್ಯೋಗ ಸೃಷ್ಟಿ, ಕಸ ವಿಲೇವಾರಿ, ಗೇಟ್‌ವೇ ರಸ್ತೆ ಮೂಲಭೂತ ಸೌಕರ್ಯಗಳು, ಪಾರ್ಕ್‌ಗಳು ಮತ್ತು ಒಳಚರಂಡಿ ವ್ಯವಸ್ಥೆಗಳು ಸೇರಿದಂತೆ ನಗರದ ಭವಿಷ್ಯದ ಬೆಳವಣಿಗೆಗಾಗಿ ಒಂದು ಸಮಗ್ರ ಯೋಜನೆಯನ್ನು ಒಳಗೊಂಡಿದೆ.

ಗ್ರೇಟರ್ ಮೈಸೂರು ಯೋಜನೆಯ ಪ್ರಮುಖ ಉದ್ದೇಶ: ಮುಂದಿನ 15–20 ವರ್ಷಗಳ ಜನಸಂಖ್ಯೆಯ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ವೈಜ್ಞಾನಿಕವಾಗಿ ಯೋಜನೆ ರೂಪಿಸುವುದು. ಉತ್ತಮ ಗುಣಮಟ್ಟದ ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರು, ವಿದ್ಯುತ್ ಮತ್ತು ಪಾರ್ಕ್‌ಗಳು ಎಲ್ಲೆಡೆ ಲಭ್ಯವಿರುವಂತೆ ನೋಡಿಕೊಳ್ಳುವುದು. ಸಾರಿಗೆ ಸಮಸ್ಯೆಗಳನ್ನು ತಡೆಯಲು, ■ 6ನೇ ಪುಟಕ್ಕೆ

ಈ ಹಿಂದೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯಲ್ಲಿ 4 ಪಟ್ಟಣ ಪಂಚಾಯಿತಿ, 1 ನಗರಸಭೆಯನ್ನು ಅಸ್ತಿತ್ವಕ್ಕೆ ತರಲಾಗಿತ್ತು. ಇಂದಿನ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರವು ಅದೇ 4 ಪಟ್ಟಣ ಪಂಚಾಯಿತಿ, 1 ನಗರಸಭೆ ಜೊತೆಗೆ 8 ಗ್ರಾಮ ಪಂಚಾಯಿತಿಗಳು ಒಳಗೊಂಡಂತೆ ಮೈಸೂರು ಮಹಾನಗರ ಪಾಲಿಕೆಯನ್ನು 'ಬೃಹತ್ ಮೈಸೂರು ಮಹಾನಗರ ಪಾಲಿಕೆ'ಯನ್ನಾಗಿ ಮೇಲ್ದರ್ಜೆಗೇರಿಸಲು ತೀರ್ಮಾನಿಸಿರುವುದಕ್ಕೆ ವಿಶೇಷವಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕನಾಗಿ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಮತ್ತು ಸಚಿವ ಸಂಪುಟದ ಎಲ್ಲಾ ಸದಸ್ಯರಿಗೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮೈಸೂರು ನಗರದ ಭವಿಷ್ಯದ ಅಭಿವೃದ್ಧಿ ಹಾಗೂ ಜನರಿಗೆ ಉನ್ನತ ಸೌಕರ್ಯ ಕಲ್ಪಿಸಲು ಇದು ಅನಿವಾರ್ಯವಾಗಿತ್ತು.



–ಜಿ.ಟಿ.ದೇವೇಗೌಡ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರು.

ಡಿಕೆಶಿ ಬೆನ್ನಿಗೆ ಒಕ್ಕಲಿಗರ ಸಂಘ

ಬೆಂಗಳೂರು, ನ.27(ಕೆಎಂಶಿ)– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲು ಕಾಂಗ್ರೆಸ್ ಹೈಕಮಾಂಡ್ ಅವಕಾಶ ಮಾಡಿ ಕೊಡಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್ ಇಂದಿಲ್ಲಿ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಶಿವಕುಮಾರ್ ಹಗಲಿರುಳು ಶ್ರಮಿಸಿದ್ದಾರೆ. ಪಕ್ಷ ಅಧಿಕಾರಕ್ಕೆ ಬರಲು ಅವರ ಶ್ರಮ ಸಾಕಷ್ಟು ಇದೆ. ಅದನ್ನು ಪರಿಗಣಿಸಬೇಕು ಎಂದರು.

ಪಕ್ಷಕ್ಕಾಗಿ ಅವರು ಮಾಡಿರುವ ಕೆಲಸಕ್ಕೆ ಕೂಲಿ ಕೊಡಬೇಕು ಎಂದು ಒತ್ತಾಯಿಸಿದ ಅವರು, ಕಾಂಗ್ರೆಸ್ ನಿಷ್ಠಾವಂತರು, ಪಕ್ಷದ ಕಟ್ಟಾಳು ಶಿವಕುಮಾರ್ ಅವರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗಬಾರದು. ಒಂದು ವೇಳೆ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗದಿದ್ದರೆ, ನಮ್ಮ ಸಮುದಾಯದ ಸ್ವಾಮೀಜಿಗಳ ಮಾರ್ಗ ದರ್ಶನದಲ್ಲಿ ಹೋರಾಟ ಮಾಡುತ್ತೇವೆ.

ನಮ್ಮ ಸಮುದಾಯದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಪ್ರಬಲ ಆಕಾಂಕ್ಷಿಯಾಗಿ ಶಿವಕುಮಾರ್ ಮುಂಚೂಣಿಯಲ್ಲಿದ್ದಾರೆ. ಬೇರೆಯವರ ಪ್ರಸ್ತಾಪ ಬಂದಾಗ ಅದರ ಬಗ್ಗೆ ಪ್ರತಿಕ್ರಿಯಿಸುತ್ತೇವೆ. ಶಿವಕುಮಾರ್ ವಿಧಾನ ಸಭೆ ಚುನಾವಣೆಯಲ್ಲಿ ಕೇಳಿದಂತೆ ನಾಡಿನ ಜನರು ಅವರಿಗೆ ಪೆನ್ನು ಪೇಪರ್ ಕೊಟ್ಟಿದ್ದಾರೆ.



ಎಲ್.ಶ್ರೀನಿವಾಸ್

ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಿಂದೆ ಐದು ವರ್ಷ ಮುಖ್ಯಮಂತ್ರಿ ಆಗಿದ್ದರು. ಈಗ ಎರಡೂವರೆ ವರ್ಷ ಮುಖ್ಯ ಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ಶಿವಕುಮಾರ್ ಅವರಿಗೆ ಮುಖ್ಯ ಮಂತ್ರಿ ಸ್ಥಾನ ಕೊಡುತ್ತಾರೋ ಇಲ್ಲವೋ ಎಂಬ ಅನುಮಾನ ಶುರುವಾಗಿದೆ. ಹಾಗಾಗಿ ಈ ಆಗ್ರಹ ಮಾಡುತ್ತಿದ್ದೇವೆ ಎಂದರು.

ಸಮುದಾಯ ಕಾಂಗ್ರೆಸ್ ಬೆಂಬಲಿಸಿತ್ತು: ಸಂಘದ ಮಾಜಿ ಅಧ್ಯಕ್ಷ ಬಿ.ಕೆಂಚಪ್ಪ ಗೌಡ ಮಾತನಾಡಿ, ಡಿ.ಕೆ.ಶಿವಕುಮಾರ್ ಚುನಾವಣೆಗೂ ಮುನ್ನ ಪೆನ್ನು, ಪೇಪರ್ ಕೊಡಿ ಎಂದು ಕೇಳಿದ್ದರು. ಅದರಂತೆ ನಮ್ಮ ಸಮುದಾಯ ಮೊದಲ ಸ್ಥಾನದಲ್ಲಿ ನಿಂತು ಕಾಂಗ್ರೆಸ್ ಬೆಂಬಲಿಸಿತ್ತು. ಪಕ್ಷ ಅಧಿಕಾರಕ್ಕೆ ಬರಲು ಶಿವಕುಮಾರ್ ಶ್ರಮ ಸಾಕಷ್ಟಿದೆ ಎಂದರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು ಮುಖ್ಯಮಂತ್ರಿ ಆಗುವ ಪರಿಪಾಠವೂ ಇದೆ. ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷದ ನಾಯಕರಾಗಿ, ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಆಗಿದ್ದು ನಮಗೂ ಸಂತೋಷ. ಆದರೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವ ಅವಕಾಶ ತಪ್ಪಬಾರದು.

ಅನ್ಯಾಯವಾದರೆ ಕಾಂಗ್ರೆಸ್‌ಗೆ ಪಾಠ: ಕಷ್ಟಪಟ್ಟು ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಮುಂದೆ ಅಧಿಕಾರಕ್ಕೆ ಕಾಂಗ್ರೆಸ್ ಬರಬೇಕಾದರೆ ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಡಬೇಕು. ಒಂದು ವೇಳೆ ವಂಚನೆಯಾದರೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸುತ್ತೇವೆ ಹಾಗೂ ನ್ಯಾಯಕ್ಕಾಗಿ ಹೋರಾಟವನ್ನು ಮಾಡುತ್ತೇವೆ ಎಂದರು.

ಒಕ್ಕಲಿಗರ ಸಂಘದ ಇತಿಹಾಸದಲ್ಲಿ ಮೊದಲ ಬಾರಿಗೆ ಪದಾಧಿಕಾರಿಗಳ ಆಯ್ಕೆ ಅವಿರೋಧವಾಗಿ ನಡೆದಿದೆ. ಸಂಘದ ಅಭಿವೃದ್ಧಿಗೆ ಎಲ್ಲಾ 35 ನಿರ್ದೇಶಕರು ಒಗ್ಗಟ್ಟಿನಿಂದ ಶ್ರಮಿಸುತ್ತೇವೆ. ಸರ್ವ ಸದಸ್ಯರ ಸಭೆ ನಡೆಸುವುದು, ಬೈಲಾ ತಿದ್ದುಪಡಿ ಮಾಡುವುದು, ಎಲ್ಲಾ ಜಿಲ್ಲೆಗಳಲ್ಲಿ ಹೆಣ್ಣು ■ 6ನೇ ಪುಟಕ್ಕೆ

ಸಿದ್ದರಾಮಯ್ಯ ಹಿಂದಿದೆ ಅಹಿಂದ

ಕಾಂಗ್ರೆಸ್ ವರಿಷ್ಠರಿಗೆ ಎಚ್ಚರಿಕೆ ಪತ್ರ

ಬೆಂಗಳೂರು, ನ.27– ಸಿಎಂ ಬದಲಾವಣೆ ವಿಚಾರ ರಾಜ್ಯ ರಾಜಕೀಯದಲ್ಲೀಗ ಬಿಸಿ ಬಿಸಿ ಚರ್ಚೆಯ ವಸ್ತುವಾಗಿದೆ. ಸಿದ್ದರಾಮಯ್ಯ ತಮ್ಮ ಸಿಎಂ ಸ್ಥಾನವನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಬಿಟ್ಟು ಕೊಡಬೇಕು ಎಂದು ಡಿಕೆಶಿ ಬಣದ ಶಾಸಕರು, ಸಚಿವರು, ನಾಯಕರು ದೆಹಲಿಯವರೆಗೂ ಹೋಗಿ, ಹೈಕಮಾಂಡ್ ಮೇಲೆ ಒತ್ತಡ ಹೇರಲು ಯತ್ನಿಸಿದ್ದರು.



ರಾಮಚಂದ್ರಪ್ಪ

ಮತ್ತೊಂದೆಡೆ ಸಿದ್ದರಾಮಯ್ಯನವರೇ 5 ವರ್ಷ ಸಿಎಂ ಆಗಿ ಮುಂದುವರೆಯುತ್ತಾರೆ ಎಂದು ಅವರ ಬಣದವರು ವಾದಿಸುತ್ತಿದ್ದಾರೆ. ಈ ನಡುವೆ ಅಹಿಂದ ನಾಯಕರೂ ಸಿದ್ದರಾಮಯ್ಯ ಬೆನ್ನಿಗೆ ನಿಂತಿದ್ದು, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಮಲ್ಲಿಕಾರ್ಜುನ್ ಖರ್ಗೆ ಸೇರಿದಂತೆ ಕೇಂದ್ರದ ಕಾಂಗ್ರೆಸ್ ವರಿಷ್ಠರಿಗೆ ಪತ್ರ ಬರೆದಿದ್ದಾರೆ. ಅಹಿಂದ ಒಕ್ಕೂಟ ಚಳುವಳಿಯಿಂದ ಕಾಂಗ್ರೆಸ್ ನಾಯಕರಿಗೆ ಪತ್ರ ಬರೆಯಲಾಗಿದ್ದು, ಕರ್ನಾಟಕದಲ್ಲಿ ಸಿಎಂ ಸ್ಥಾನದಿಂದ ಸಿದ್ದರಾಮಯ್ಯರನ್ನು ಬದಲಾವಣೆ ಮಾಡದಂತೆ ಆಗ್ರಹಿಸಿದ್ದಾರೆ. ರಾಜ್ಯದಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ಮತ ಬ್ಯಾಂಕ್ ಗಟ್ಟಿ ಇದೆ. ಅಹಿಂದ ವೋಟ್ ಬ್ಯಾಂಕ್ ಅನ್ನು ಸಿಎಂ ಸಿದ್ದರಾಮಯ್ಯ ಹಿಡಿದಿದ್ದಾರೆ. ಅವರನ್ನು ಬದಲಾವಣೆ ಮಾಡಿದರೆ ಸಮಸ್ಯೆ ಆಗಲಿದೆ ಎಂದು ಪತ್ರದಲ್ಲಿ ಎಚ್ಚರಿಸಿದ್ದಾರೆ. ಅಹಿಂದ ನಾಯಕರಾದ ಸಿದ್ದರಾಮಯ್ಯ ಅವರನ್ನೇ ಸಿಎಂ ಸ್ಥಾನದಲ್ಲಿ ಮುಂದುವರಿಸಬೇಕೆಂದು ಪತ್ರದಲ್ಲಿ ಆಗ್ರಹಿಸಿದ್ದಾರೆ. ಅಲ್ಪಸಂಖ್ಯಾತರು, ಅತ್ಯಂತ ಹಿಂದುಳಿದ ವರ್ಗಗಳು, ದಲಿತರು ಬಹಳ ಹಿಂದಿನಿಂದಲೂ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಮತದಾರರಾಗಿದ್ದಾರೆ. ಆದರೆ ಲಿಂಗಾಯತರು, ಒಕ್ಕಲಿಗರು, ರೆಡ್ಡಿಗಳು, ಬಂಟರು ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದಾರೆ ಮತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಉಳಿದಿದ್ದಾರೆ. ಅವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಮತದಾರರಲ್ಲ ಎಂದಿದ್ದಾರೆ. ಅಹಿಂದ ಸಮುದಾಯಗಳ ಮತಗಳನ್ನು ಪಡೆಯುವ ಮೂಲಕ ಕಾಂಗ್ರೆಸ್ ಪಕ್ಷದಲ್ಲಿ ಅತೀ ಹೆಚ್ಚು ಕಾಲ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳಾದ ಅನೇಕರು, ಕಾಂಗ್ರೆಸ್‌ನ ಸಾಂಪ್ರದಾಯಿಕ ಬೆಂಬಲಿಗರಲ್ಲದ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳಿಗೆ ಸೇರಿದವರು. ಕಾಂಗ್ರೆಸ್ ಪಕ್ಷವು ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳಿಗೆ ನಿರಂತರವಾಗಿ ಹೆಚ್ಚಿನ ಅವಕಾಶಗಳನ್ನು ಒದಗಿಸಿದೆ. ಆದರೆ ಅಹಿಂದ ಸಮುದಾಯಗಳಿಗೆ ಅಲ್ಲ.

ಆಗಲೂ ಸಹ ಅಹಿಂದ ಸಮುದಾಯಗಳು ಕಾಂಗ್ರೆಸ್ ಪಕ್ಷದ ಜೊತೆ ದೃಢವಾಗಿ ನಿಂತಿವೆ. ಈ ದೃಢ ಬೆಂಬಲವನ್ನು ಕಾಂಗ್ರೆಸ್ ಪಕ್ಷವು ಅಹಿಂದ ಸಮುದಾಯಗಳ ದೌರ್ಬಲ್ಯ ವೆಂದು ಪರಿಗಣಿಸಬಾರದು ಎಂದು ಎಚ್ಚರಿಸಿದ್ದಾರೆ. ದೇವರಾಜ ಅರಸು ಅವರನ್ನು ಅಧಿಕಾರದಿಂದ ಇಳಿಸಿದಾಗ ನಡೆದ ಚುನಾವಣೆ ಯಲ್ಲಿ ಕಾಂಗ್ರೆಸ್ ಸೋತಂತೆ ಸಿದ್ದರಾಮಯ್ಯ ಬದಲಾವಣೆ ಯಿಂದ ಪಕ್ಷ ಈಗ ಸೋತರೆ ಅಹಿಂದ ಸಮುದಾಯಗಳು ಕಾಂಗ್ರೆಸ್‌ನಿಂದ ದೂರ ಸರಿಯುತ್ತವೆ. ಭವಿಷ್ಯದಲ್ಲಿ ಕಾಂಗ್ರೆಸ್ ಪಕ್ಷ ಕರ್ನಾಟಕದ ರಾಜಕೀಯ ಕ್ಷೇತ್ರದಿಂದ ■ 6ನೇ ಪುಟಕ್ಕೆ



ಭಾರೀ ಮಳೆ, ಪ್ರವಾಹದಿಂದ ಬೆಳೆ ಹಾನಿ;

1033.60 ಕೋಟಿ ಪರಿಹಾರ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ರೈತರ ಖಾತೆಗಳಿಗೆ ಪರಿಹಾರದ ಹಣ ನೇರ ಜಮಾ

ಬೆಂಗಳೂರು, ನ.27(ಕೆಎಂಶಿ)– ಮುಂಗಾರು ಅವಧಿಯಲ್ಲಿ ಭಾರೀ ಮಳೆ ಹಾಗೂ ಪ್ರವಾಹದಿಂದ ಬೆಳೆ ಹಾನಿಗೊಳಗಾದ ರೈತರಿಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 1033.60 ಕೋಟಿ ರೂ. ಪರಿಹಾರ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಕಚೇರಿ ಕೃಷ್ಣಾದಲ್ಲಿ ಇಂದು ರೈತರ ಖಾತೆಗಳಿಗೆ ಇನ್‌ಪುಟ್ ಸಬ್ಸಿಡಿ ವಿತರಿಸಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳೆ ಹಾನಿ ಸಂಭವಿಸಿದ 14.24 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ಒಟ್ಟು 1033.60 ಕೋಟಿ ರೂ. ಹೆಚ್ಚುವರಿ ಪರಿಹಾರ ಒದಗಿಸಿದ್ದೇವೆ ಎಂದರು. ರಾಜ್ಯ ಸರ್ಕಾರ ಕೃಷಿಕನ ಪರವಾಗಿದ್ದು, ಬೆಳೆ ಹಾನಿಗೊಳಗಾದ ರೈತರಿಗೆ ಹೆಚ್ಚಿನ ನೆರವು ಒದಗಿಸುವ ಉದ್ದೇಶದಿಂದ ಇನ್ಪುಟ್ ಸಬ್ಸಿಡಿ ದರಗಳನ್ನು ಹೆಚ್ಚಿಸಿದೆ. ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತವಾಗಿ, ಮಳೆಯಾಶ್ರಿತ ಬೆಳೆಗಳಿಗೆ ಹೆಕ್ಟೇರ್ ಒಂದಕ್ಕೆ 8,500 ರಿಂದ 17,000 ರೂ., ನೀರಾವರಿ ಬೆಳೆಗಳಿಗೆ ಹೆಕ್ಟೇರ್ ಒಂದಕ್ಕೆ 17,000 25,500 ರೂ. ಹಾಗೂ ಬಹುವಾರ್ಷಿಕ ಬೆಳೆಗಳಿಗೆ ಹೆಕ್ಟೇರ್ ಒಂದಕ್ಕೆ 22,500ರಿಂದ 31,000 ರೂ.ಗೆ ಹೆಚ್ಚಿಸಲಾಗಿದೆ.



ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು.

ಎಸ್‌ಡಿಆರ್‌ಎಫ್ ಮಾನದಂಡಗಳ ಪ್ರಕಾರ 14.24 ಲಕ್ಷ ರೈತರಿಗೆ ಇನ್ಪುಟ್ ಸಬ್ಸಿಡಿಯಾಗಿ ಈಗಾಗಲೇ 1218.03 ಕೋಟಿ ರೂ. ವಿತರಿಸಿದ್ದು, ಜೊತೆಗೆ ರಾಜ್ಯ ನಿಧಿಯಿಂದ 1033.60 ಕೋಟಿ ರೂ.ಗಳನ್ನು ಟಾಪ್‌ಅಪ್ ರೂಪದಲ್ಲಿ ಹೆಚ್ಚುವರಿಯಾಗಿ ನೀಡಲಾಗುತ್ತಿದೆ. ಒಟ್ಟಾರೆಯಾಗಿ ಪರಿಹಾರ ಪಾವತಿಗಳನ್ನು ಒಳಗೊಂಡಂತೆ 2251.63 ಕೋಟಿ ರೂ. ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಆಗಲಿದೆ.

ಮುಂಗಾರು ಅವಧಿಯಲ್ಲಿ ದಾಖಲೆಯ 82.56 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ಜೂನ್‌ನಿಂದ ಸೆಪ್ಟೆಂಬರ್‌ನಲ್ಲಿ ಅತಿವೃಷ್ಟಿಯಿಂದಾಗಿ 14.58 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಿನ ಪ್ರದೇಶದ ಬೆಳೆ ಹಾನಿಯಾಗಿದ್ದು, ಇದರ ಅಂದಾಜು 10,748 ಕೋಟಿ ರೂ.ಗಳಾಗಿವೆ. ತೊಗರಿ ಬೇಳೆ 5.36 ಲಕ್ಷ ಹೆಕ್ಟೇರ್, ಹೆಸರು ಕಾಳು 2.63 ಲಕ್ಷ ಹೆಕ್ಟೇರ್, ಹತ್ತಿ 2.68 ಲಕ್ಷ ಹೆಕ್ಟೇರ್ ಮತ್ತು ಮೆಕ್ಕೆಜೋಳ 1.21 ಲಕ್ಷ ಹೆಕ್ಟೇರ್‌ನಲ್ಲಿ ಹಾನಿಯಾಗಿದೆ.

ಒಂಭತ್ತು ಜಿಲ್ಲೆಗಳಲ್ಲಿ ಹೆಚ್ಚಿನ ಬೆಳೆ ಹಾನಿ ಉಂಟಾಗಿದೆ. ಮುಖ್ಯವಾಗಿ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬೆಳೆಗಳು ಕೊಯ್ಲಿನ ಹಂತಕ್ಕೆ ಬಂದ ಸಂದರ್ಭದಲ್ಲಿ ಭಾರೀ ಮಳೆಯಿಂದ ಹೆಚ್ಚಿನ ಹಾನಿ ಸಂಭವಿಸಿದೆ.

ಕೃಷ್ಣಾ ಮತ್ತು ಭೀಮ ಜಲಾನಯನ ಪ್ರದೇಶಗಳಲ್ಲಿ ನಿರಂತರ ಒಳಹರಿವು ಹೆಚ್ಚಳದಿಂದ ಕಲಬುರಗಿ, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ತೊಗರಿ ಮತ್ತು ಹತ್ತಿ ಬೆಳೆಗಳಿಗೆ ವ್ಯಾಪಕ ಹಾನಿ ಉಂಟಾಗಿದೆ. ಬೆಳೆಹಾನಿಯನ್ನು ನಿಖರವಾಗಿ ಖಚಿತಪಡಿಸಲು ಜಂಟಿ ಸಮೀಕ್ಷೆ ನಡೆಸಿ ಅಂದಾಜಿಸಲಾಗಿದೆ. ಎಲ್ಲಾ ದತ್ತಾಂಶಗಳನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಲಾಗಿದ್ದು, ಭೂಮಿ ಮತ್ತು ಫ್ರೂಟ್ಸ್ ತಂತ್ರಾಂಶದಲ್ಲಿ ಸಂಯೋಜಿಸಲಾಗಿದೆ. ■ 6ನೇ ಪುಟಕ್ಕೆ

ಬಳಕೆಯನ್ನೇ ಮಾಡದಿದ್ದರೆ ಕನ್ನಡ ಭಾಷೆ ಬೆಳೆಯುವುದಾದರೂ ಹೇಗೆ: ರಾಗೌ ಪ್ರಶ್ನೆ

ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರು, ಮಾಲೀಕರ ಯೋಗಕ್ಷೇಮಾಭಿವೃದ್ಧಿ ಸಂಘದಿಂದ ರಾಜ್ಯೋತ್ಸವ



ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರು ಮತ್ತು ಮಾಲೀಕರ ಯೋಗ ಕ್ಷೇಮಾಭಿವೃದ್ಧಿ ಸಂಘದಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ 2026ನೇ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ನ.27(ಎಂಕೆ)– ಇಂಗ್ಲಿಷ್ ಭಾಷೆಯೇ ಎಲ್ಲಾ ಕಡೆ ಇದೆ ಎಂಬ ಭ್ರಮೆಯಿಂದ ಹೊರಬಂದು, ಕನ್ನಡ ಭಾಷೆಯನ್ನು ಎಲ್ಲಾ ರೀತಿಯಲ್ಲೂ ಬಳಕೆ ಮಾಡದ ಹೊರತು ಅದನ್ನು ಜನಪ್ರಿಯಗೊಳಿಸಲು ಸಾಧ್ಯವಿಲ್ಲ ಎಂದು ಹಿರಿಯ ಸಾಹಿತಿ ಡಾ.ರಾಮೇಗೌಡ (ರಾಗೌ) ಇಂದಿಲ್ಲಿ ಪ್ರತಿಪಾದಿಸಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರು ಮತ್ತು ಮಾಲೀಕರ ಯೋಗ ಕ್ಷೇಮಾಭಿವೃದ್ಧಿ ಸಂಘ ಹಾಗೂ ಪ್ರವಾಸಿ ವಾಹನ ಚಾಲಕರ ಸಹಕಾರ ಸಂಘದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಲಿಪಿಯಲ್ಲಿಯೇ ಇಂಗ್ಲಿಷ್ ಪದಗಳನ್ನು ಬಳಕೆ ಮಾಡಬೇಕು. ಅದರಲ್ಲಿ ಯಾವ ಪದಗಳನ್ನು ಬಳಕೆ ಮಾಡಬೇಕು, ಬಿಡ ಬೇಕು ಎಂಬುದನ್ನರಿತು, ಕನ್ನಡ ಭಾಷೆಯನ್ನು ಬಳಕೆ ಮಾಡದಿದ್ದರೆ ಭಾಷೆ ಬೆಳೆಯಲು ಸಾಧ್ಯವಿಲ್ಲ. ಅದರಂತೆ ಹೇಗೆ ಮತ್ತು ಎಷ್ಟು ಪ್ರಮಾಣದಲ್ಲಿ ಬಳಕೆ ಮಾಡುತ್ತಿದ್ದೇವೆ ಎಂಬುದು ಮುಖ್ಯವಾಗುತ್ತದೆ ಎಂದರು.

ನವೆಂಬರ್ ತಿಂಗಳು ಬಂತೆಂದರೆ ಎಲ್ಲೆಡೆ ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತದೆ. ಒಂದು ರೀತಿ ನವೆಂಬರ್ ತಿಂಗಳ ರಾಜ್ಯೋತ್ಸವ ಎನ್ನುವಂತಾಗಿದೆ. ಆದರೆ, ಅನೇಕ ಜನರಿಗೆ ಕನ್ನಡ ರಾಜ್ಯೋತ್ಸವವನ್ನು ಯಾಕೆ ಆಚರಣೆ ಮಾಡುತ್ತೇವೆ ಎಂಬುದೇ ಗೊತ್ತಿಲ್ಲ. ಭೌಗೋಳಿಕವಾಗಿ ಹರಿದು-ಹಂಚಿ ಹೋಗಿದ್ದ ಹಾಗೂ ಆಡಳಿತ ದೃಷ್ಟಿಯಿಂದ ಒಂದೇ ಭಾಷೆಯನ್ನು ಮಾತನಾಡುವವರು ಒಂದೆಡೆ ಇದ್ದರೆ ಸಹಕಾರವಾಗುತ್ತದೆ ಎಂಬ ಉದ್ದೇಶದಿಂದ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಲಾಯಿತು. ಅದರಂತೆ ಕನ್ನಡ ಮಾತನಾಡುವವರನ್ನು ಒಂದುಗೂಡಿಸಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ಸ್ಮರಣಾರ್ಥವಾಗಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕನ್ನಡ ಮೊಟ್ಟಮೊದಲಿಗೆ ಉಳಿದಿರುವುದು ರೈತರಿಂದ, ಎರಡನೆಯದಾಗಿ ಕಾರ್ಮಿಕರಿಂದ ಹಾಗೂ ಮೂರನೆಯದಾಗಿ ಪ್ರವಾಸಿ ವಾಹನ ಚಾಲಕರಿಂದ. ಪ್ರವಾಸಿ ವಾಹನ ಚಾಲಕರು ಬೇರೆ ರಾಜ್ಯ ಹಾಗೂ ವಿದೇಶಿ ಪ್ರವಾಸಿಗರಲ್ಲಿ ಕನ್ನಡದಲ್ಲಿ ವ್ಯವಹರಿಸುವ ಮೂಲಕ ಕನ್ನಡ ಭಾಷೆಯ ವಿಸ್ತೀರ್ಣತೆಯನ್ನು ಹೆಚ್ಚಿಸುತ್ತಿದ್ದಾರೆ. ಆದಾಗ್ಯೂ ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾದರೂ ಇಂಗ್ಲಿಷ್‌ಗೆ ಆದ್ಯತೆ ನೀಡುತ್ತಿರುವುದು ವಿಪರ್ಯಾಸವಾಗಿದೆ. ಆದ್ದರಿಂದ ಕನ್ನಡ ಭಾಷೆಯ ಬಳಕೆ ಇಚ್ಛಾಸಕ್ತಿ ನಮ್ಮಲ್ಲಿರಬೇಕು ಎಂದು ತಾಕೀತು ಮಾಡಿದರು.

ಬಳಿಕ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹಾಗೂ ಪ್ರವಾಸೋದ್ಯಮ ಸಹಾಯಕ ನಿರ್ದೇಶಕ ವಿ.ಎಂ.ಪ್ರಭುಸ್ವಾಮಿ, ಚಾಲಕರಾದ ರಂಗಸ್ವಾಮಿ, ಲಕ್ಷ್ಮೀಕಾಂತರಾವ್ ಹಾಗೂ ಮೊಹಮದ್ ಸಾದಿಕ್ ಅವರನ್ನು ಸನ್ಮಾನಿಸಲಾಯಿತು.

ಹಾಗೆಯೇ ಖ್ಯಾತ ಕಾದಂಬರಿಕಾರರಾದ ಎಸ್.ಎಲ್. ಭೈರಪ್ಪ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಿಐಟಿ ನಿರ್ದೇಶಕ ಮಹೇಂದ್ರ ಸಾಲಿಯಾನ್, ಟ್ರಾವೆಲ್ ಪಾರ್ಕ್ ಮಾಲೀಕ ಸಿ.ಎ.ಜಯಕುಮಾರ್, ಪ್ರವಾಸಿ ವಾಹನ ಚಾಲಕರ ಸಂಘದ ಅಧ್ಯಕ್ಷ ಎಸ್.ನಾಗರಾಜು, ಕನ್ನಡ ರಾಜ್ಯೋತ್ಸವ ಸಮಿತಿ ಅಧ್ಯಕ್ಷ ಎಸ್.ಮಂಜುನಾಥ್, ಉಪಾಧ್ಯಕ್ಷ ಆರ್.ಪ್ರಭಾಕರ್, ಕಾರ್ಯದರ್ಶಿ ಕೆ.ಟಿ. ದಿವಾಕರ್, ಉಪಕಾರ್ಯದರ್ಶಿ ಮಹಮದ್ ಸೌಲತ್, ಖಜಾಂಚಿ ಪುಟ್ಟಬುದ್ಧಿ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಅವರೇ ಸಿಎಂ ಆಗಿ ಮುಂದುವರೆಯುತ್ತಾರೆ

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸ್ಪಷ್ಟನೆ

- ಅಧಿಕಾರ ಹಂಚಿಕೆ ಸೂತ್ರ ರೂಪಿಸಿಲ್ಲ
- ನಾಯಕತ್ವ ಬದಲಾವಣೆ ಅಪ್ರಸ್ತುತ
- ಎಲ್ಲಾ ಶಾಸಕರ ಬೆಂಬಲ ನಮ್ಮ ತಂದೆಗಿದೆ
- ಕೆಲವರಿಗೆ ಮಾತ್ರ ನಾಯಕತ್ವ ಬದಲಾವಣೆ ಬೇಕು

ಮೈಸೂರು, ನ.27(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಯಾವುದೇ ಕಾರಣಗಳಿಲ್ಲ. ಅವರೇ ಪೂರ್ಣಾವಧಿಗೆ ಸಿಎಂ ಆಗಿ ಮುಂದುವರೆಯುತ್ತಾರೆ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸ್ಪಷ್ಟಪಡಿಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ಮಾಡುವ ವಿಷಯದಲ್ಲಿ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂದು ಸ್ವತಃ ಸಿದ್ದರಾಮಯ್ಯ ಅವರೇ ಸ್ಪಷ್ಟನೆ ನೀಡುತ್ತಿರುವ ಸಂದರ್ಭದಲ್ಲಿ ನಮ್ಮ ತಂದೆಯೇ ಅಧಿಕಾರ ಪೂರ್ಣಗೊಳಿಸುತ್ತಾರೆ ಎಂದು ಅವರ ಪುತ್ರ ಯತೀಂದ್ರ ಹೇಳಿರುವುದು ಅಧಿಕಾರ ಹಸ್ತಾಂತರದ ಜಟಾಪಟಿ ಮತ್ತಷ್ಟು ಮಹತ್ವ ಪಡೆದಿದೆ.

ಮೈಸೂರಿನಲ್ಲಿ ಪತ್ರಕರ್ತ ರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಮೇಲೆ ಯಾವುದೇ ಭ್ರಷ್ಟಾಚಾರ ಆರೋಪಗಳಿಲ್ಲ. ಹೀಗಿರುವಾಗ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಪ್ರಮೇಯವೇ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮೊದಲಿಗೆ ನಾಯಕತ್ವ ಬದಲಾವಣೆ ಚರ್ಚೆಯೇ ಬರಬಾರದಿತ್ತು. ಆದರೂ ಯಾರೋ ಕೆಲವರು ಮಾತ್ರ ನಾಯಕತ್ವ ಬದಲಾಗಬೇಕೆಂದು ಮಾತನಾಡುತ್ತಿದ್ದಾರೆ. ಇತ್ತ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವುದಾಗಿ ಹೈಕಮಾಂಡ್ ಕೂಡ ಹೇಳಿಲ್ಲ ಎಂದು ತಿಳಿಸಿದರು.



ಡಾ.ಯತೀಂದ್ರ

ನನಗೆ ಬಂದಿರುವ ಮಾಹಿತಿ ಪ್ರಕಾರ ಹೈಕಮಾಂಡ್ ಮಟ್ಟದಲ್ಲಿ ಅಧಿಕಾರ ಹಂಚಿಕೆ ಸೂತ್ರವನ್ನೇ ರೂಪಿಸಿಲ್ಲ. ಹೀಗಿರುವಾಗ ಅಧಿಕಾರ ಹಂಚಿಕೆ ಮಾತುಕತೆ ನಡೆದಿಲ್ಲ ಎಂಬುದು ಸ್ಪಷ್ಟತಾನೆ ಎಂದು ಯತೀಂದ್ರ ಹೇಳಿದರು.

ಅತ್ತ, ಸಿದ್ದರಾಮಯ್ಯ ನಾಯಕತ್ವ ಬದಲಾವಣೆ ಮಾಡುವುದಾಗಿ ಹೈಕಮಾಂಡ್ ಕೂಡ ಎಂದೂ ಹೇಳಿಲ್ಲ. ಆದ ಕಾರಣ ಇನ್ನು ಎರಡೂವರೆ ವರ್ಷ ನಮ್ಮ ತಂದೆಯೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂಬ ವಿಶ್ವಾಸ ವಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆದಿಚುಂಚನಗಿರಿ ಸ್ವಾಮೀಜಿ ಹೇಳಿಕೆಗೆ ಯತೀಂದ್ರ ತಿರುಗೇಟು

"ಯಾರನ್ನು ಮುಖ್ಯಮಂತ್ರಿ ಮಾಡಬೇಕು, ಯಾರನ್ನು ಮಾಡಬಾರದು ಎಂಬುದು ನಮ್ಮ ಪಕ್ಷದ ಆಂತರಿಕ ವಿಚಾರ ಎಂದು ಯತೀಂದ್ರ ಪ್ರತಿಕ್ರಿಯೆ ನೀಡಿದರು.

ಡಿ.ಕೆ.ಶಿವಕುಮಾರ್ ಅವರಿಗೆ ಜನ ಬೆಂಬಲ ಇರುವ ಕಾರಣ ಅವರನ್ನೆ ಸಿಎಂ ಮಾಡಬೇಕೆಂಬ ಆದಿ ಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿಕೆಗೆ ಈ ಮೂಲಕ ತಿರುಗೇಟು ನೀಡಿದರು.

ಮುಖ್ಯಮಂತ್ರಿ ಮಾಡುವುದು ನಮ್ಮ ಪಕ್ಷದ ಶಾಸಕರು ಹಾಗೂ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಈ ವಿಚಾರದಲ್ಲಿ ಬೇರೆಯವರ ಅಭಿಪ್ರಾಯ ಅನಗತ್ಯ ಎಂದು ತಿಳಿಸಿದರು.

ನಾಯಕತ್ವ ಬದಲಾವಣೆ ವಿಚಾರವೇ ಮುನ್ನಲೆಗೆ ಬಾರದಿರುವಾಗ ಯಾರಿಗೆ ಎಷ್ಟು ಶಾಸಕರ ಬೆಂಬಲವಿದೆ ಎಂದು ಲೆಕ್ಕ ಹಾಕುವುದು ಅಪ್ರಸ್ತುತ. ಎಲ್ಲಾ ಶಾಸಕರು ನಮ್ಮ ತಂದೆಗೆ ಬೆಂಬಲ ನೀಡಿದ್ದಾರೆ. ಎಷ್ಟು ಶಾಸಕರ ಬೆಂಬಲವಿದೆ ಎಂಬ ಶಾಸಕರ ಲೆಕ್ಕಾಚಾರ ನಮ್ಮ ಪಕ್ಷದ ಆಂತರಿಕ ವಿಚಾರವಾಗಿದ್ದು, ಮತ್ತೆ ಮತ್ತೆ ಅವರಿಗೆ ಎಷ್ಟು ಶಾಸಕರ ಬೆಂಬಲವಿದೆ ಎಂಬ ಅಂಕಿ ಸಂಖ್ಯೆ ಕೇಳಬೇಡಿ ಎಂದು ಪತ್ರಕರ್ತರಿಗೆ ಸಲಹೆ ನೀಡಿದರು.

ಮೈಸೂರು-ಅಜ್ಮೀರ್-ಮೈಸೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಸೇವೆ ವಿಸ್ತರಣೆ

ಮೈಸೂರು, ನ.27(ಬಿಎಲ್‌ಯು)– ಪ್ರಯಾಣಿಕರ ಅಧಿಕ ದಟ್ಟಣೆ ಹಿನ್ನೆಲೆಯಲ್ಲಿ



ಮೈಸೂರು-ಅಜ್ಮೀರ್-ಮೈಸೂರು ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸೇವೆಯನ್ನು ರೈಲ್ವೆ ಇಲಾಖೆ ವಿಸ್ತರಣೆ ಮಾಡಿದೆ. ರೈಲು ಸಂಖ್ಯೆ-06281 ಮೈಸೂರು-ಅಜ್ಮೀರ್ ವಿಶೇಷ ಎಕ್ಸ್‌ಪ್ರೆಸ್ ರೈಲು ಈ ಮೊದಲು ನ.29ರವರೆಗೆ ಸಂಚರಿಸಲು ನಿಗದಿಯಾಗಿತ್ತು. ಆದರೆ ಈಗ ಈ ರೈಲಿನ ಸಂಚಾರವನ್ನು ಡಿಸೆಂಬರ್ 6ರಿಂದ 2026ರ ಜನವರಿ 31ರವರೆಗೆ ಪ್ರತಿ ಶನಿವಾರದಂದು ಸಂಚರಿಸಲಿದೆ. ಅದೇ ರೀತಿ ರೈಲು ಸಂಖ್ಯೆ-06282 ಅಜ್ಮೀರ್-ಮೈಸೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಡಿಸೆಂಬರ್ 1ರವರೆಗೆ ಚಲಿಸಲು ನಿಗದಿಯಾಗಿತ್ತು. ಆದರೆ ಈಗ ಇದರ ಸಂಚಾರ ಡಿಸೆಂಬರ್ 8ರಿಂದ 2026ರ ಫೆಬ್ರವರಿ 2ರವರೆಗೆ ಪ್ರತಿ ಸೋಮವಾರದಂದು ಸಂಚರಿಸಲಿದೆ. ಈ ವಿಶೇಷ ರೈಲುಗಳು ತಮ್ಮ ಅಸ್ತಿತ್ವದಲ್ಲಿರುವ ಸಮಯ, ನಿಲುಗಡೆ ಹಾಗೂ ಕೋಚ್‌ಗಳ ಸಂಯೋಜನೆಯೊಂದಿಗೆ ಸಂಚರಿಸಲಿದೆ ಎಂದು ರೈಲ್ವೆ ತಿಳಿಸಿದೆ.

ನ.30, ಮೈಸೂರಲ್ಲಿ ತಾಯಿ, ಇಬ್ಬರು ಪುತ್ರಿಯರು ಭರತನಾಟ್ಯ ರಂಗ ಪ್ರವೇಶ



ಸುದ್ದಿಗೋಷ್ಠಿಯಲ್ಲಿ ಡಾ.ಕೆ.ಪೂರ್ಣಿಮಾ ಮಾತನಾಡಿದರು.

ಮೈಸೂರು,ನ.27(ಜಿಎ)–ಮೈಸೂರಿನ ನೃತ್ಯತಿ ಕಲಾಶಾಲೆಯ ವಿದ್ಯಾರ್ಥಿಗಳಾದ ತಾಯಿ ಡಾ.ಕೆ.ಪೂರ್ಣಿಮ, ಪುತ್ರಿಯರಾದ ಡಾ.ಪ್ರಾರ್ಥನಾ ವೈ.ಗೌಡ, ವಂದನಾ ವೈ.ಗೌಡ ಅವರು ನ.30 ರಂದು ಸಂಜೆ 4.30ಕ್ಕೆ ವಿಜಯನಗರದ ಜಗನ್ನಾಥ ಕಲೆ ಮತ್ತು ಸಂಸ್ಕೃತಿ ಕೇಂದ್ರದ ಸಭಾಂಗಣದಲ್ಲಿ ಭರತನಾಟ್ಯ ರಂಗ ಪ್ರವೇಶ ಮಾಡಲಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಡಾ.ಕೆ.ಪೂರ್ಣಿಮಾ ಈ ವಿಷಯ ತಿಳಿಸಿ, ತಾಯಿಯೊಡನೆ ಇಬ್ಬರು ಪುತ್ರಿಯರು ಒಟ್ಟಿಗೇ ಇಂತಹ ಕಾರ್ಯಕ್ರಮ ನಡೆಸಿಕೊಡುತ್ತಿರುವುದು ತಮಗೆ ತಿಳಿದಂತೆ ಇದೇ ಮೊದಲ ಬಾರಿಯದಾಗಿದೆ. ನನ್ನೊಂದಿಗೆ ನನ್ನ ಇಬ್ಬರು ಪುತ್ರಿಯರು ಭರತನಾಟ್ಯ ರಂಗ ಪ್ರವೇಶ ಮಾಡುತ್ತಿರುವುದು ವಿಶೇಷ ಎಂದರು.

ಅಂದಿನ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ.ವಸುಂಧರಾ ದೊರೆಸ್ವಾಮಿ, ಡಾ.ಆರ್.ಎಸ್.ನಂದಕುಮಾರ್, ಆರ್.ಕಣ್ಣನ್, ಕೆ.ಸಂದೇಶ್ ಭಾರ್ಗವ್, ನಾಟ್ಯಾಚಾರ್ಯ ಕೆ.ರಾಮಮೂರ್ತಿರಾವ್ ಮತ್ತಿತರರು ಉಪಸ್ಥಿತರಿರುವರು. ಸುದೀರ್ಘವಾಗಿ 3 ಗಂಟೆ ಕಾರ್ಯಕ್ರಮ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಭರತನಾಟ್ಯ ವಿದ್ಯಾರ್ಥಿನಿಯರಾದ ಹರ್ಷಿಣಿ, ರಂಜಿತಾ ಉಪಸ್ಥಿತರಿದ್ದರು.

ಮಾಜಿ ಆಯಿಷ್ ನಿರ್ದೇಶಕಿ ಡಾ.ಶೈಲಜಾ ನಿಕ್ಕಮ್ ನಿಧನ

ಮೈಸೂರು,ನ.27–ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್) ಮಾಜಿ ನಿರ್ದೇಶಕಿ ಹಾಗೂ ಬೆಂಗಳೂರಿನ ಬಸವನಗುಡಿಯ ಗೋವಿಂದಪ್ಪ ರಸ್ತೆ ನಿವಾಸಿ ಡಾ. ಶೈಲಜಾ ನಿಕ್ಕಮ್ ಬುಧವಾರ ನಿಧನರಾದರು.

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ದಿವಂಗತ ಪ್ರೊ. ಎನ್.ಎ.ನಿಕ್ಕಮ್ ಅವರ ಪುತ್ರಿಯಾದ ಇವರು ಆಯಿಷ್ ನಿರ್ದೇಶಕಿಯಾಗಿ ಡಿಸೆಂಬರ್ 9, 1989ರಿಂದ ಏಪ್ರಿಲ್ 20, 2000ರವರೆಗೆ ಸೇವೆ ಸಲ್ಲಿಸಿದ್ದರು.

ಕ್ಲಿನಿಕಲ್ ಸೈಕಾಲಜಿ ವಿಭಾಗವನ್ನು ಸ್ಥಾಪಿಸಿದ್ದು, ಶೈಕ್ಷಣಿಕ ಸಂಕೀರ್ಣ ಕಟ್ಟಡವನ್ನು ಪೂರ್ಣಗೊಳಿಸಿದ್ದು, ಶ್ರವಣ ಸಾಧನ ಅಳವಡಿಸುವ ಪ್ರಯೋಗಾಲಯಕ್ಕೆ ಕ್ಲಿನಿಕಲ್ ಉಪಕರಣಗಳ ಖರೀದಿ, ಸಂಸ್ಥೆಯಲ್ಲಿ ಡಿಜಿಟಲೀಕರಣ ಮತ್ತು ನೆಟ್‌ವರ್ಕಿಂಗ್ ಮಾಡುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಅವರ ಅಧಿಕಾರಾವಧಿಯಲ್ಲಿ, ಅವರು ಡಾಕ್ಟರೇಟ್ ಕಾರ್ಯಕ್ರಮ ಮತ್ತು ವಿವಿಧ ಫೆಲೋಶಿಪ್‌ಗಳು ಸೇರಿದಂತೆ ಗಮನಾರ್ಹ ಶೈಕ್ಷಣಿಕ ಮತ್ತು ಸಾಂಸ್ಥಿಕ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ.



ಅವಿವಾಹಿತೆಯಾಗಿದ್ದು, ಇವರು ಸಹೋದರಿ ಶಕುಂತಲಾ ಮಾನಯ್, ಸಹೋದರ ಜೈಸಿಂಹ ನಿಕ್ಕಮ್, ಸಂಬಂಧಿಕರು ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ವಿಲ್ಸನ್ ಗಾರ್ಡನ್ ರುದ್ರಭೂಮಿಯಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.11.2025 ಶುಕ್ರವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಸಮಾಜ ರಕ್ಷಣಾ ಸೇನೆ :** ಕನ್ನಡ ರಾಜ್ಯೋತ್ಸವ, ರಾಜ್ಯೋತ್ಸವ ಪ್ರಶಸ್ತಿ ಪ್ರದಾನ, ಅಧ್ಯಕ್ಷತೆ : ಕೆ.ಎಚ್. ಹನುಮಂತರಾಜು, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಧ್ವಜಾರೋಹಣ : ಶಾಸಕ ಹರೀಶ್‌ಗೌಡ, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಗನ್‌ಹೌಸ್ ಹತ್ತಿರ, ಬೆಳಗ್ಗೆ 9.30ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ರೇಷ್ಮೆ ಕೃಷಿಯಲ್ಲಿ ಉದ್ಯಮಶೀಲತಾ ಅವಕಾಶಗಳ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಕೆ. ಜಗದೀಶ್, ಸ್ಥಳ: ವಿಚಾರ ಸಂಕಿರಣ ಕೊಠಡಿ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.
- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಬ್ರೈಡಲ್ ಜುವೆಲರಿ ಶೋ. ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್.ರಸ್ತೆ. ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಬಂಗು ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಮರೆಗುಳಿತನ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಡಾ. ಯೋಗೇಶ್ ಶಾ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಅಕಾಡೆಮಿ ಸಮ ಕುಲಾಧಿಪತಿ ಡಾ. ಬಿ. ಸುರೇಶ್, ಗೌರವ ಅತಿಥಿಗಳು : ಜೆಎಸ್‌ಎಸ್ ಅಕಾಡೆಮಿ ಕುಲಪತಿ ಡಾ. ಬಸವನಗೌಡಪ್ಪ, ಅಲ್ಜಮೀರ್ಸ್ ಡಿಸೀಸ್ ಇಂಟರ್‌ನ್ಯಾಷನಲ್, ಯುಕೆ ಉಪಾಧ್ಯಕ್ಷೆ ಶ್ರೀಮತಿ ಮೀರಾ ಪಟ್ಟಾಭಿರಾಮನ್, ಕುಲಸಚಿವ ಡಾ. ಬಿ. ಮಂಜುನಾಥ್, ಅಧ್ಯಕ್ಷತೆ ಅಲ್ಜಮೀರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ ಅಧ್ಯಕ್ಷೆ ಶ್ರೀಮತಿ ರೇಣು ವೋಹ್ರಾ, ಆರ್ಡಿಸ್ಕಾನ್ ಅಧ್ಯಕ್ಷ ಡಾ. ಹನುಮಂತಾಚಾರ್ ಜೋಷಿ, ಡಾ. ಪ್ರತಿಭಾ ಪೆರೇರಾ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10ಕ್ಕೆ.
- **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆ :** ನೂತನ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಕ್ರಮ, ಉದ್ಘಾಟನೆ : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಸಹಕಾರಿ ಸಂಸ್ಥೆ ನಿರ್ದೇಶಕಿ ಶ್ರೀಮತಿ ಭಾರತೀ ಜಿ. ಭಟ್, ಮುಖ್ಯ ಅತಿಥಿಗಳು : ಬಿ. ಮಹದೇವಸ್ವಾಮಿ, ಎಸ್.ಆರ್. ನಾರಾಯಣರಾವ್, ಸ್ಥಳ: ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಯಾದವಗಿರಿ, ಬೆಳಗ್ಗೆ 10.30ಕ್ಕೆ
- **ಭರತ ನೃತ್ಯ ಸಂಗೀತ ಅಕಾಡೆಮಿ, ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ಬೆಳಗ್ಗೆ 10.30 ರಿಂದ ವಿದುಷಿ ವಾರಿಜಾ ನಳಿಗೆ ಅವರಿಂದ ಶಿವಶರಣರ ವಚನಗಳಿಗೆ ನೃತ್ಯ-ಪ್ರಾತ್ಯಕ್ಷಿಕೆ; ಬೆಳಗ್ಗೆ 11 ರಿಂದ ವಿದ್ವಾನ್ ಪುಲಿಕೇಶಿ ಕಸ್ತೂರಿ ಅವರಿಂದ ನೃತ್ಯದಲ್ಲಿ ನಾಟಕ-ಪ್ರಾತ್ಯಕ್ಷಿಕೆ; ಬೆ. 11.30 ರಿಂದ ವಿದುಷಿ ಡಾ. ನಾಗಲಕ್ಷ್ಮಿ ನಾಗರಾಜನ್ ಅವರಿಂದ ಹರಿಯನ್ನರಸಿದ ನಾರಿಮಣಿಯರು-ಪ್ರಾತ್ಯಕ್ಷಿಕೆ; ಮ. 12 ರಿಂದ ವಿದುಷಿ ವಿದ್ಯಾ ರವಿಶಂಕರ್ ಅವರಿಂದ ಕನ್ನಡ ಕಂದ ಪದ್ಯಗಳು ಮತ್ತು ಜಾವಳಿ-ಪ್ರಾತ್ಯಕ್ಷಿಕೆ; ಮ. 12.30ರಿಂದ ಪ್ರೊ. ಕೆ. ರಾಮಮೂರ್ತಿರಾವ್ ಅವರಿಂದ ಕನ್ನಡದಲ್ಲಿ ಲಘು ನೃತ್ಯ-ಪ್ರಾತ್ಯಕ್ಷಿಕೆ; ಮ. 2 ರಿಂದ ವಿದುಷಿ ಡಾ. ಕೃಪಾ ಪಡ್ಕೆ ಅವರಿಂದ ಕನ್ನಡ ದೇಶ ಭಕ್ತಿಗೀತೆಗಳಿಗೆ ನೃತ್ಯ-ಪ್ರಾತ್ಯಕ್ಷಿಕೆ; ಮ. 2.30 ರಿಂದ ವಿದುಷಿ ಅನುಷಾ ವರುಣ್ ಅವರಿಂದ ಕನ್ನಡ ಭಾವಗೀತೆಗಳಿಗೆ ನೃತ್ಯ-ಪ್ರಾತ್ಯಕ್ಷಿಕೆ; ಮ. 3 ರಿಂದ ವಿದುಷಿ ಟಿ.ಎಸ್. ಶ್ರೀಲಕ್ಷ್ಮೀ ಅವರಿಂದ ಕನ್ನಡ ಭಕ್ತಿಗೀತೆಗಳಿಗೆ ನೃತ್ಯ-ಪ್ರಾತ್ಯಕ್ಷಿಕೆ; ಮ.3.30 ರಿಂದ ವಿದುಷಿ ಎಸ್. ನೇತ್ರ ಅವರಿಂದ ಗಮಕ ಶಾಲೆಯಲ್ಲಿ ನೃತ್ಯದ ಸಾಧ್ಯತೆ-ಪ್ರಾತ್ಯಕ್ಷಿಕೆ; ಸಂಜೆ 5ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಸಂಗೀತ ವಿವಿ ಕುಲಪತಿ ಡಾ. ನಾಗೇಶ್ ಬೆಟ್ಟಕೋಟೆ, ಸಮಾರೋಪ ಭಾಷಣ : ಸಂಗೀತ ವಿದ್ವಾಂಸರಾದ ಡಾ. ಆರ್.ಎಸ್. ನಂದಕುಮಾರ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಕೆಎಸ್‌ಜಿಎಸ್ ಸಂಗೀತ ವಿವಿ ಆವರಣ.
- **ಜೆಎಸ್‌ಎಸ್ ಮಹಿಳಾ ಕಾಲೇಜು :** ಜೆಎಸ್‌ಎಸ್ ರಂಗೋತ್ಸವ, ಮೈಸೂರು ಶಿಕ್ಷಕರ ಬಡಾವಣೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ಕೃಷ್ಣಮೂರ್ತಿ ಬಿಳಿಗೆರೆಯವರ 'ಅಂಗಭಂಗದ ರಾಜ್ಯದಲ್ಲಿ' ನಾಟಕ ಪ್ರದರ್ಶನ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಬೆಳಗ್ಗೆ 10.45ಕ್ಕೆ
- **ಹೋಟೆಲ್ ಮಾಲೀಕರ ಸಂಘ :** ಪಿ.ಎಂ. ವಿಕ್ಷಿತ್ ಭಾರತ್ ರೋಜ್‌ಗಾರ್ ಯೋಜನೆಯಡಿ ಉದ್ಯೋಗದಾತರಿಗೆ ಬೆಂಬಲದ ಬಗ್ಗೆ ಜಾಗೃತಿ ಹಾಗೂ ಸಂವಾದ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಪ್ರಾದೇಶಿಕ ಪಿಎಫ್ ಆಯುಕ್ತರು, ಇಪಿಎಫ್‌ಓ ವಿನೀತ್‌ಕುಮಾರ್, ಇಪಿಎಫ್‌ಓ ಎನ್‌ಫೋರ್ಸ್‌ಮೆಂಟ್ ಆಫೀಸರ್ ಶ್ರೀಮತಿ ಬಿ.ಎಸ್. ಶ್ರುತಿ, ಇಪಿಎಫ್‌ಓ ಖಾತೆ ಅಧಿಕಾರಿ ಪ್ರಫುಲ್ ಇಟ್ಟಿ, ಅಧ್ಯಕ್ಷತೆ : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಉಪಸ್ಥಿತರು : ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಸ್ಥಳ: ಹೋಟೆಲ್ ಮಾಲೀಕರ ಸಂಘ, ಬೆಳಗ್ಗೆ 11ಕ್ಕೆ.
- **ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಶ್ರೀವಾಣಿ ವಿಲಾಸ ಅರಸು ಬಾಲಿಕಾ ಪದವಿಪೂರ್ವ ಕಾಲೇಜು :** ಕನ್ನಡ ಹಬ್ಬ, ಮುಖ್ಯ ಅತಿಥಿಗಳು: ಗಮಕ ವಿದ್ವಾಂಸ ಡಾ. ಕೃಪಾ. ಮಂಜುನಾಥ್, ಅಧ್ಯಕ್ಷತೆ : ಟ್ರಸ್ಟ್ ಉಪಾಧ್ಯಕ್ಷ ಡಾ. ಭಾರತಿ ಶ್ರೀಧರ ರಾಜೇಅರಸ್, ಸ್ಥಳ: ಕಾಲೇಜಿನ ಶ್ರೀ ವಾಣಿವಿಲಾಸ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಡಾ. ರಿಕಾರ್ಡೋ ಬೇಜಾ ಯಾತೇಶ್ ಅವರಿಂದ ಶಾರದಾ ರಂಗನಾಥನ್ ದತ್ತಿ ಉಪನ್ಯಾಸ, ಅಧ್ಯಕ್ಷತೆ : ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಡಿ.ಎಸ್. ಗುರು, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ಉದ್ಘಾಟನೆ: ಜೆಎಸ್‌ಎಸ್ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಸ್ಥಳ : ಮರಿಮಲ್ಲಪ್ಪ ಪದವಿಪೂರ್ವ ಕಾಲೇಜು, ಮಧ್ಯಾಹ್ನ 1ಕ್ಕೆ.
- **ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ, ಮಹಾರಾಣಿ ಮಹಿಳಾ ಕಲಾ ಕಾಲೇಜು :** ಕನ್ನಡ-ಕರ್ನಾಟಕ : ಸಾಂಸ್ಕೃತಿಕ ಹಿರಿಮೆ-ವರ್ತಮಾನದ ಬಿಕ್ಕಟ್ಟುಗಳು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಪ್ರೊ. ಎಂ.ಎಸ್. ಅನಿತಾ, ಜಾನಪದ ವಿದ್ವಾಂಸ ಪ್ರೊ. ಮೈಸೂರು ಕೃಷ್ಣಮೂರ್ತಿ ಅವರಿಂದ ವಿಶೇಷ ಉಪನ್ಯಾಸ, ಉಪಸ್ಥಿತರು : ಪ್ರೊ. ಎಸ್. ಚಂದ್ರಕಿರಣ್ ಕುಳವಾಡಿ, ಸ್ಥಳ: ಸ್ನಾತಕೋತ್ತರ ಕನ್ನಡ ವಿಭಾಗ, ಕಾಲೇಜು ಆವರಣ, ಮಧ್ಯಾಹ್ನ 2.30ಕ್ಕೆ.
- **ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು ಜಿಲ್ಲಾ ಘಟಕ :** 1500ನೇ ಮೀಲಾದ್ ಉನ್ ನಬಿ ಆಚರಣೆ, ಕನ್ನಡ ರಾಜ್ಯೋತ್ಸವ, ಉರ್ದು ದಿನಾಚರಣೆ, ರಾಷ್ಟ್ರೀಯ ಶಿಕ್ಷಣ ದಿನಾಚರಣೆ, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಾನ್ನಿಧ್ಯ : ಮೌಲಾನಾ ಅಬ್ದುಲ್ ಸಲಾಂ ರಜ್ವಿ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ಪ್ರೊ. ಸೈಯದ್ ಆಖೀಲ್ ಅಹಮದ್, ಡಿ. ಉಯದಕುಮಾರ್, ಡಾ. ಜಮೀರ್ ಅಹಮದ್, ಸ್ಥಳ: ರೈಜ್ ಬ್ಯಾಂಕ್ವೆಟ್ ಹಾಲ್, ಡಾ. ರಾಜ್‌ಕುಮಾರ್ ರಸ್ತೆ, ಸಂಜೆ 4ಕ್ಕೆ.
- **ಗಾನಭಾರತೀ :** ಕನ್ನಡ ರಾಜ್ಯೋತ್ಸವ, ಕುಮಾರವ್ಯಾಸ ಭಾರತ-ಕಾವ್ಯವಾಚನ, ಸ್ಥಳ: ಗಾನಭಾರತಿ ಸಭಾಂಗಣ, ಸಂಜೆ 6 ರಿಂದ.
- **ಶ್ರೀ ಶಾಂತಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವ ಸಮಿತಿ, ಸಕಲ ಜೈನ ಸಮಾಜ :** ಶ್ರೀ ಶಾಂತಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವ, ದಿವ್ಯ ಉಪಸ್ಥಿತರು : 108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರು, ಶ್ರೀ ಕ್ಷೇತ್ರ ಜೈನ ಮಠದ ಶ್ರೀ ಲಕ್ಷ್ಮೀಸೇನಾ ಭಟ್ಟಾರಕ ಮಹಾ ಸ್ವಾಮೀಜಿ, ಮುಖ್ಯ ಅತಿಥಿಗಳು: ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷ ಎಸ್. ಜಿತೇಂದ್ರಕುಮಾರ್, ಶಾಸಕ ಕೆ. ಹರೀಶ್‌ಗೌಡ, ವಕೀಲ ಹೆಚ್.ಪಿ. ರಕ್ಷಿತ್, ಎಂ.ವಿ. ಜಯರತ್ನಮ್ಮ, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಮಧ್ಯಾಹ್ನ 3ಕ್ಕೆ.
- **ಅಭಿವ್ಯಕ್ತಿ ಆರ್ಟ್ ಅಂಡ್ ಕಲ್ಚರ್ ಟ್ರಸ್ಟ್ :** ಅಭಿವ್ಯಕ್ತಿ ಹಬ್ಬ, ಉದ್ಘಾಟನೆ : ಕಲಾ ಪೋಷಕ ಡಾ. ಜಗನ್ನಾಥ್ ಶೆಣೈ, ಮುಖ್ಯ ಅತಿಥಿಗಳು : ಹಿರಿಯ ನೃತ್ಯ ಕಲಾವಿದೆ ವಿದುಷಿ ಶೀಲಾ ಶ್ರೀಧರ, ಸಂಜೆ 6.15 ರಿಂದ ಉದಯೋನ್ಮುಖ ಕಲಾವಿದರಾದ ಮುಂಬೈ ಶ್ರೀಲತಾ ಆಚಾರ್ಯ, ಸಂಜೆ 7 ರಿಂದ ಗೌರಿ ಸಾಗರ್ ಮತ್ತು ಪೃಥ್ವಿ ಪಾರ್ಥಸಾರಥಿ, ಬೆಂಗಳೂರು, ಸಂಜೆ 7.45 ರಿಂದ ಭರತಾಂಜಲಿ ನೃತ್ಯ ಶಾಲೆಯವರಿಂದ ಕಾರ್ಯಕ್ರಮ, ಸ್ಥಳ: ರಮಾಗೋವಿಂದ ರಂಗ ಮಂಟಪ, ರಾಮಕೃಷ್ಣನಗರ.

ಪಿರಿಯಾಪಟ್ಟಣದಲ್ಲಿಂದು

- **ವನಪ್ರಿಯ ಆರ್ಗ್ಯಾನಿಕ್ ಫಾರ್ಮ್ :** ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ಕೋಡಿ ಮಠದ ಪೀಠಾಧಿಪತಿ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಪುಷ್ಪಾರ್ಚನೆ : ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಉದ್ಘಾಟನೆ : ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಅಧ್ಯಕ್ಷತೆ : ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್. ಅರಸ್, ಮುಖ್ಯ ಅತಿಥಿಗಳು : ವಾಣಿಜ್ಯೋದ್ಯಮಿ ಜೆ.ಪಿ.ಅರಸ್, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಅಂಬಿಕಾ, ನಮನ್ ಫೌಂಡೇಷನ್ ಅಧ್ಯಕ್ಷೆ ಶೈಲಜಾ ಪ್ರಸಾದ್, ಅರಸು ಮಂಡಳಿ ಮಾಜಿ ಅಧ್ಯಕ್ಷ ಎನ್.ಎಸ್.ಡಿ. ಅರಸ್, ಸ್ಥಳ: ದೊರೆಕೆರೆ ಗ್ರಾಮ, ಪಿರಿಯಾಪಟ್ಟಣ ತಾಲೂಕು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ ವಿ. ಭಟ್, ವ್ಯಾಖ್ಯಾನ–ಪ್ರೊ. ಮ. ವರದರಾಜು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, ಪಿ.ಸಿ.ಓ.ಎಸ್. ಸಮಸ್ಯೆ ಲಕ್ಷಣಗಳು ಮತ್ತು ಪರಿಹಾರ ಕುರಿತು ತಿಳಿಸಿಕೊಡುತ್ತಾರೆ ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸೀನಿಯರ್ ಕನ್ಸಲಂಟ್ ಗೈನಕಾಲಜಿಸ್ಟ್ ಡಾ. ಸವಿತಾ ರಾಥೋಡ್ ನಾಯಕ್ ನಂತರ ಮಕ್ಕಳಲ್ಲಿ ಮಲಬದ್ಧತೆಯ ಸಮಸ್ಯೆ ಮತ್ತು ಪರಿಹಾರ ಕುರಿತು ಮಕ್ಕಳ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಪ್ರಶಾಂತ್ ಕುಮಾರ್ ಎಮ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್ ಮತ್ತು ಬಿ. ದಿಗ್ವಿಜಯ್, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎಸ್.ವಿ. ಸಹನ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರ ಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಎಸ್. ಗೋಪಾಲಕೃಷ್ಣನ್– ವಯೋಲಿನ್ ವಾದನ, 4.00 ಮಹಿಳಾರಂಗ, ಮಹಿಳಾ ಸಾಹಿತ್ಯರಂಗ ಮಹಿಳೆಯರ ಪತ್ರಗಳನ್ನಾಧರಿಸಿದ ಸಾಹಿತ್ಯ ಕಾರ್ಯಕ್ರಮ, ಪ್ರಸ್ತುತಿ–ದಿಗ್ವಿಜಯ್ ಬಿ, ನೇತ್ರಾ ಮತ್ತು ಸಹನ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, ಹವಾಮಾನ ಮಿತ್ರ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ. ಪ್ರಸ್ತುತಿ–ಆರ್.ಲೋಕೇಶ್ವರಿ, 8.00 ಸಂಧ್ಯಾರಾಗ–98ರ ಇಳಿವಯಸ್ಸಿನಲ್ಲೂ ವಕೀಲಿ ವೃತ್ತಿ ನಿರ್ವಹಿಸುತ್ತಿರುವ ಹಿರಿಯ ನ್ಯಾಯವಾದಿ ಭೈರಪ್ಪ ಅವರೊಂದಿಗೆ ಆತ್ಮೀಯ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಜಿ. ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಸುಧಾ–ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

ಸಮಾಜದ ಸಂತ್ರಸ್ತರ ಪರವಾದ ಪೊಲೀಸ್ ವ್ಯವಸ್ಥೆ ಅಳವಡಿಸಿಕೊಳ್ಳಿ

ಸಬ್‌ಇನ್ಸ್‌ಪೆಕ್ಟರ್ ಪ್ರಶಿಕ್ಷಣಾರ್ಥಿಗಳಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ ಕಿವಿಮಾತು

ಮೈಸೂರು. ನ.27(ಆರ್‌ಕೆ)– ಸಮಾಜದ ಸಂತ್ರಸ್ತರು ಹಾಗೂ ನೊಂದವರ ಪರವಾದ ಪೊಲೀಸ್ ವ್ಯವಸ್ಥೆಯನ್ನು ಅಳವಡಿಸಿಕೊಂಡು ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸಿ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ, ಪ್ರಶಿಕ್ಷಣಾರ್ಥಿ ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ಕಿವಿಮಾತು ಹೇಳಿದ್ದಾರೆ.



ಮಂಗಳವಾರ ಸಂಜೆ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ) ಸಭಾಂಗಣದಲ್ಲಿ 90 ಮಂದಿ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಪ್ರಶಿಕ್ಷಣಾರ್ಥಿಗಳು, 237 ಪುರುಷ ಪ್ರಶಿಕ್ಷಣಾರ್ಥಿ ಸಬ್‌ಇನ್ಸ್‌ಪೆಕ್ಟರ್‌ಗಳು ಹಾಗೂ ಓರ್ವ ಮಹಿಳಾ ಡಿವೈಎಸ್‌ಪಿ (ಅಬ ಕಾರಿ) ಪ್ರಶಿಕ್ಷಣಾರ್ಥಿಗಳೊಂದಿಗೆ ಸಂವಾದ ನಡೆಸಿದ ಅವರು, ಪೊಲೀಸ್ ಇಲಾಖೆಗೆ ಸೇರಿದ ಮೇಲೆ ಬಡವರು, ನೊಂದವರು, ವೃದ್ಧರು, ಮಕ್ಕಳು, ಅಬಲೆಯರು, ಒಬ್ಬಂಟಿಗರ ರಕ್ಷಣೆ, ಜೊತೆಗೆ ನಾಗರಿಕರ ಮಾನ–ಪ್ರಾಣ, ಆಸ್ತಿ–ಪಾಸ್ತಿ ರಕ್ಷಿಸುವುದು ಪ್ರಮುಖ ಜವಾಬ್ದಾರಿಯಾಗಿದೆ ಎಂದರು.

ಪೊಲೀಸ್ ಕರ್ತವ್ಯ ಎಂದರೆ ಕೇವಲ ಕಾನೂನು ಸುವ್ಯವಸ್ಥೆ ಕಾಪಾಡುವುದಷ್ಟಕ್ಕೆ ಸೀಮಿತವಾಗಿಲ್ಲ. ಸಾರ್ವಜನಿಕ ಸೇವೆಯಲ್ಲಿ ದೃಢವಾಗಿ ಬೇರೂರಿರುವ ವೃತ್ತಿಪರ ದೃಷ್ಟಿಕೋನವನ್ನು ಬೆಳೆಸಿಕೊಂಡು ಜನರ ನಂಬಿಕೆ ಮತ್ತು ವಿಶ್ವಾಸವನ್ನು ಗಳಿಸುವುದು ಅತ್ಯವಶ್ಯ ಎಂದು ಡಾ. ಸಲೀಂ ಇದೆ ವೇಳೆ ತಿಳಿಸಿದರು.

ಸಹಾನುಭೂತಿ ಮತ್ತು ತಾಳ್ಮೆಯಿಂದ ಕರ್ತವ್ಯ ನಿರ್ವಹಿಸುವ ಮೂಲಕ ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ನಿಮ್ಮ ಜವಾಬ್ದಾರಿ ಪ್ರಮುಖವಾಗಿದೆ ಸಮಸ್ಯೆ ಒತ್ತು ಯಾರೇ ಠಾಣೆಗೆ ಬಂದರು ಅವರನ್ನು ಪ್ರೀತಿಯಿಂದ ಮಾತನಾಡಿಸಿ ದೂರು ಪಡೆದು, ಕಾನೂನು ವ್ಯಾಪ್ತಿಯಲ್ಲಿ ಪರಿಹಾರ ಒದಗಿಸಬೇಕು ಆಗ ಮಾತ್ರ ಸಮಾಜದ ನಾಗರಿಕರಿಗೆ ಪೊಲೀಸರ ಮೇಲೆ ನಂಬಿಕೆ ಬರುತ್ತದೆ. ಪ್ರಜ್ಞಾಪೂರ್ವಕವಾಗಿ ನ್ಯಾಯ ಮತ್ತು ಸೂಕ್ಷ್ಮತೆಯನ್ನು ಪ್ರದರ್ಶಿಸಿದರೆ ವೃತ್ತಿಯಲ್ಲಿ ನೀವು ಸಾರ್ಥಕತೆ ಪಡೆಯಲು ಸಾಧ್ಯವೆಂದು ಸಲಹೆ ನೀಡಿದರು.

ನಿರಂತರ ಕಲಿಕೆ ಮತ್ತು ವೃತ್ತಿಪರತೆ ಬಗ್ಗೆ ಒತ್ತಿ ಹೇಳಿದ ಡಾ. ಸಲೀಂ, ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದ್ದು, ವಿಜ್ಞಾನ ಮತ್ತು ತಂತ್ರಜ್ಞಾನದ ಹಿನ್ನೆಲೆ ಹೊಂದಿರುವ ತಾವು ಸೈಬರ್ ಸಂಬಂಧಿತ ಅಪರಾಧಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಸಮರ್ಥರಿದ್ದೀರಿ. ಪೊಲೀಸ್ ಅಕಾಡೆಮಿಯೂ ಅದಕ್ಕೆ ಬೇಕಾದ ಕೌಶಲ್ಯಗಳೊಂದಿಗೆ ನಿಮ್ಮನ್ನು ಸಜ್ಜುಗೊಳಿಸುತ್ತದೆ ಅದನ್ನು ಸಮರ್ಥವಾಗಿ ಬಳಸಿಕೊಂಡು, ಯಶಸ್ವಿಯಾಗಿ ತನಿಖೆ ಮಾಡಿ ಎಂದರು.

ಇಡೀ ದೇಶದಲ್ಲೇ ಪ್ರಪ್ರಥಮ ಬಾರಿ 1999 ರಲ್ಲೇ ಕರ್ನಾಟಕ ರಾಜ್ಯ ಪೊಲೀಸ್‌ನ ಸಿಐಡಿ ಘಟಕದಲ್ಲಿ ಸೈಬರ್ ಪೋಲಿಸ್ ಠಾಣೆಯನ್ನು ಆರಂಭಿಸಲಾಗಿತ್ತು. ಸೈಬರ್ ಮಾದರಿಯ ಆನ್‌ಲೈನ್ ವಂಚನೆಯನ್ನು ಬಗ್ಗುಬಡಿಯಲು ನೀವು ವಿಶೇಷ ಒತ್ತು ನೀಡುವ ಅಗತ್ಯವಿದೆ. ಅದಕ್ಕೆ ಬೇಕಾದ ಸೌಕರ್ಯಗಳನ್ನು ಇಲಾಖೆ ಒದಗಿಸಲಿದೆ. ಕಾನೂನು ಸುವ್ಯವಸ್ಥೆ ಮತ್ತು ಅಪರಾಧ ಪತ್ತೆ ಕಾರ್ಯದಲ್ಲೂ ನೀವು ತಂತ್ರಜ್ಞಾನವನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬಹುದಾಗಿದೆ ಎಂದು ಅವರು ಇದೇ ಸಂದರ್ಭದಲ್ಲಿ ನುಡಿದರು.

ಕರ್ನಾಟಕ ಪೊಲೀಸ್ ಅಕಾಡೆಮಿಯೂ ಶಿಸ್ತು, ಸಮಗ್ರತೆ, ಸಂವಹನ, ಕಾನೂನು ಮತ್ತು ಕೌಶಲ್ಯ ತರಬೇತಿ ನೀಡಿ ವೃತ್ತಿ ಜೀವನಕ್ಕೆ ಮಾರ್ಗದರ್ಶನ ನೀಡುವ ಒಂದು ವೇದಿಕೆಯಾಗಿದೆ. ಸಮರ್ಥವಾಗಿ ಪೊಲೀಸ್ ಕರ್ತವ್ಯ ನಿರ್ವಹಿಸಲು ಅಗತ್ಯವಿರುವ ಎಲ್ಲಾ ತರಬೇತಿಯನ್ನು ನೀಡಲಾಗುತ್ತಿದೆ. ನಿಮಗಿಂತ–ನಮ ಗಿಂತ ದೇಹದಾರ್ಢ್ಯದಲ್ಲಿ, ಬುದ್ಧಿವಂತಿಕೆಯಲ್ಲಿ, ವಿದ್ಯಾರ್ಹತೆಯಲ್ಲಿ ಹೆಚ್ಚು ಸಾಧನೆ ಮಾಡಿದ ವರು ಸಮಾಜದಲ್ಲಿದ್ದಾರೆ. ಅದರೆ ಅವರಿಗೆ ಅವಕಾಶ ಸಿಗದೇ ನಿರುದ್ಯೋಗಿಗಳಾಗಿದ್ದಾರೆ. ನಿಮಗೆ ಸಿಕ್ಕಿರುವ ಅವಕಾಶವನ್ನು ಸರಿಯಾಗಿ ಬಳಸಿಕೊಂಡು ಗುರಿ ತಲುಪಲು ಪ್ರಯತ್ನಿಸಿ ಎಂದು ಕಿವಿಮಾತು ಹೇಳಿದರು.


ಕೆಪಿಎ ನಿರ್ದೇಶಕ ಎಸ್. ಚನ್ನಬಸವಣ್ಣ ಲಂಗೋಟಿ, ಉಪ ನಿರ್ದೇಶಕರುಗಳಾದ ಸಂದೇಶ್ ಕುಮಾರ್, ಪಿ. ಕುಮಾರ್, ವೆಂಕಟೇಶ್ ಹಾಗೂ ಇತರರು ಸಂವಾದದಲ್ಲಿ ಪಾಲ್ಗೊಂಡಿದ್ದರು. ಅಧಿಕಾರಿಗಳು ಹಾಗೂ ಪ್ರಶಿಕ್ಷಣಾರ್ಥಿಗಳೊಂದಿಗೆ ಸಹಭೋಜನದ ಬಳಿಕ ರಾತ್ರಿ 9.30 ಗಂಟೆಗೆ ಡಾ. ಸಲೀಂ ಬೆಂಗಳೂರಿಗೆ ಹಿಂತಿರುಗಿದರು.

ಪ್ರತಿಭಾ ಕಾರಂಜಿ



ಮೈಸೂರು ತಾಲೂಕು ಜಯಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು 8ಸಾವಿರ ಮೌಲ್ಯದ 102 ಊಟದ ಬಾಕ್ಸ್‌ಗಳನ್ನು ಬಹುಮಾನವಾಗಿ ನೀಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಡಿ.ಮಾಲೇಗೌಡ, ಜಯಪುರ ಗ್ರಾಪಂ ಅಧ್ಯಕ್ಷ ಮಾದೇವಯ್ಯ, ಪಿಡಿಓ ಬಸವಣ್ಣ, ಕಾರ್ಯದರ್ಶಿ ವೈ.ಕೆ.ಅನ್ನಪೂರ್ಣ, ಸದಸ್ಯರಾದ ಮರಿಸಿದ್ದೇಗೌಡ, ಬಿ. ರೇಣುಕಾ, ಹೆಚ್.ಎನ್.ಮಹಾದೇವಿ, ಭೈರೇಶ್, ಹರೀಶ್, ಮುಖಂಡರಾದ ಮಹಮ್ಮದ್ ಆಲಿ(ಬಾಬಣ್ಣ), ಅಬ್ದುಲ್ ಮುತಾಲೀಫ್, ಜವರನಾಯಕ, ಶಿವರಾಜು, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಗೀತಾ, ಬಿಸಿಯೂಟ ಯೋಜನೆ ಸಹಾಯಕ ಅಧಿಕಾರಿ ಮಹದೇವು, ಇಸಿಓ ಅಶೋಕ್, ಸಿಆರ್‌ಪಿಗಳಾದ ಸುಶೀಲಾ, ಲಲಿತಾ, ರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆ ಪ್ರಭಾರ ಮುಖ್ಯಶಿಕ್ಷಕ ಬಿ.ಸಿದ್ಧರಾಮು, ಎಸ್‌ಡಿಎಂಸಿ ಅಧ್ಯಕ್ಷ ಜಯಪುರ ಬಾಲಸುಬ್ರಮಣ್ಯಂ, ಮಾವಿನಹಳ್ಳಿ ಕೃಷ್ಣ, ಜಯಪುರ ಕ್ಲಸ್ಟರ್ ವ್ಯಾಪ್ತಿಯ ಶಾಲಾ ಶಿಕ್ಷಕರು ಮತ್ತು ಪೋಷಕರು ಭಾಗವಹಿಸಿದ್ದರು.

ನಿಧನ



ಶ್ರೀಮಾನ್ ಶಿವಣ್ಣ ನವರು

ನ್ಯೂ ಗಣೇಶ ಲೇಡೀಸ್ ಟೈಲರ್

ಇವರು ದಿನಾಂಕ 27-11-2025ರಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 28-11-2025 ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಮಹದೇವಸ್ವಾಮಿ ಮತ್ತು ಕುಟುಂಬವರ್ಗ

ಮೊ.ನಂ 9341387166, 9731447166

ನಕ್ಕರೆ ಅದೇ ಸ್ವರ್ಗ

(ಗ್ರಂಥಾಲಯದಲ್ಲಿ ನಡೆದ ಮಾತುಕತೆ)

ಓದುಗ: ಸಾರ್, ಆತ್ಮಹತ್ಯೆ ಬಗ್ಗೆ ಪುಸ್ತಕವಿದೆಯೇ?

ಲೈಬ್ರರಿಯನ್ : ಇದೆ, ಆದರೆ ಹಿಂತಿರುಗಿಸುವುದು ಯಾರು?

ಮೈಸೂರು ಮಿತ್ರ

ಶುಕ್ರವಾರ, 28 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನೀನು ನಮ್ಮವನು ಅಂತಾ ಮಾತಲ್ಲಿ ಯಾರು ಬೇಕಾದರು ಹೇಳ್ತಾರೆ. ಆದರೆ, ಕಷ್ಟ ಬಂದಾಗಲೇ ಗೊತ್ತಾಗೋದು ನಿಜವಾಗಿಯೂ ನಮ್ಮ ಜೊತೆಗಿರುವವರು ಯಾರು ಅಂತಾ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ

ನಿಮ್ಮ ಪತ್ರಗಳು

ಕರುಣೆ ತೋರಿಸದ ಜವರಾಯ

ಮಾನ್ಯರೆ,

ಕೆಲವೊಮ್ಮೆ ಬದುಕಿದ್ದಾಗ ಕಾಣದ ಅವರ ಸಾಧನೆ ಮೃತ ಪಟ್ಟಾಗ ಪ್ರಜ್ವಲಿಸುತ್ತವೆ. ಪುನೀತ್ ರಾಜ್‌ಕುಮಾರ್ ಅವರ ಸಮಾಜ ಸೇವೆಯೂ ಹಾಗೆಯೇ. ಮೊನ್ನೆ ಕಾರು ಅಪಘಾತದಲ್ಲಿ ಮೃತ ಪಟ್ಟ ಹಿರಿಯ ಐಎಎಸ್ ಅಧಿಕಾರಿ ಮಹಂತೇಶ ಬೀಳಗಿಯವರ ಸಮಾಜಮುಖಿ ಸ್ಪಂದನೆ ಅವರು ಬದುಕಿದ್ದಾಗ ಅವರಿಂದ ಸೇವೆ ಪಡೆದವರಿಗೆ, ಹತ್ತಿರದವರಿಗೆ ಮತ್ತು ಪತ್ರಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಮಾತ್ರ ತಿಳಿದಿತ್ತೇನೋ. ಅವರು ಮೃತಪಟ್ಟ ಕೂಡಲೇ ಸಾಮಾಜಿಕ ಜಾಲತಾಣದಲ್ಲಿ, ಸುದ್ದಿ ವಾಹಿನಿಗಳಲ್ಲಿ ಅವರ ಸಾಧನೆಯ, ಸನ್ನಡತೆಯ ಸಮಾಜಮುಖಿ ಕಾರ್ಯದ್ದೇ ಸುದ್ದಿ. ಚಿಕ್ಕಂದಿನಲ್ಲಿ ತಂದೆಯನ್ನು ಕಳೆದುಕೊಂಡು ಏಕಪೋಷಕರ ಆರೈಕೆಯಲ್ಲಿ ಗ್ರಾಮೀಣ ಪ್ರದೇಶದ ಬಡಕುಟುಂಬದಲ್ಲಿ ಬೆಳೆದ ಅವರ ಜೀವನ ಯಶೋಗಾಥೆ ಇಂದಿನ ಮಕ್ಕಳಿಗೆ ಸ್ಫೂರ್ತಿಯಾಗಬೇಕು. ಇಷ್ಟೆಲ್ಲಾ ಸಂಕಷ್ಟಗಳಿದ್ದರೂ ಉನ್ನತ ಸ್ಥಾನಕ್ಕೇರಲು ಸಾಧ್ಯ ಎಂಬುದಕ್ಕೆ ಇವರು ನಿದರ್ಶನವಾಗಿ ನಿಲ್ಲುತ್ತಾರೆ. ಇವರು ಮಕ್ಕಳಿಗೆ, ಯುವ ಜನಾಂಗಕ್ಕೆ, ಸಾಮಾನ್ಯ ಜನರಿಗೆ ನೀಡುತ್ತಿದ್ದ ಪ್ರೇರಣೆ, ಸ್ಫೂರ್ತಿ, ಪ್ರೋತ್ಸಾಹ ಇತರ ಅಧಿಕಾರಿಗಳು ಅಳವಡಿಸಿಕೊಳ್ಳಲು ಮಾದರಿಯಾಗಿದ್ದಾರೆ. ಇವರ ಸಾಧನೆ ಬೆಳಕಿಗೆ ಬರಲು ಪ್ರಮುಖ ಕಾರಣ ದಾವಣಗೆರೆ ಜಿಲ್ಲಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ಸಿಕ್ಕ ಅವಕಾಶ. ಆದ್ದರಿಂದ ಸರ್ಕಾರ ಎಲ್ಲದರಲ್ಲೂ ಜಾತಿ, ಪ್ರಭಾವ, ರಾಜಕೀಯಗಳನ್ನು ಹುಡುಕದೆ ಇಂತಹ ನಿಷ್ಠಾವಂತ ಅಧಿಕಾರಿಗಳನ್ನು ಗುರುತಿಸಿ ಆಯಕಟ್ಟಿನ ಜಾಗದಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಿದಲ್ಲಿ ಇವರಂತಹ ಇನ್ನಷ್ಟು ಮಹಂತೇಶರನ್ನು ಸಮಾಜ ಕಾಣಲು ಸಾಧ್ಯವಾಗುತ್ತದೆ. ಇವರು ಸಾಗಿದ ಹಾದಿಯನ್ನು ಪಠ್ಯಕ್ರಮದಲ್ಲಿ ಅಳವಡಿಸಿದಲ್ಲಿ ಇನ್ನಷ್ಟು ಮಕ್ಕಳಿಗೆ ಸ್ಫೂರ್ತಿ ಸಿಕ್ಕಾಂತಾಗಬಹುದು. ಜನ ಮೆಚ್ಚಿದರೂ ಜವರಾಯ ಮಾತ್ರ ಕರುಣೆ ತೋರಲಿಲ್ಲ. **–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು**

ಅಸಲಿ–ನಕಲಿ!

ಮಾನ್ಯರೆ,

ನಕಲಿ ನಂದಿನಿ ತುಪ್ಪ ಜಾಲ ಭೇದಿಸಿದ ಸಿಸಿಬಿ ಪೊಲೀಸರು ಕಿಂಗ್ ಪಿನ್ ದಂಪತಿಯನ್ನು ಬಂಧಿಸಿದ್ದಾರೆ. ಈ ಅಸಲಿ ದಂಪತಿ ತಮಿಳುನಾಡಿನಲ್ಲಿ ನಕಲಿ ನಂದಿನಿ ತುಪ್ಪ ತಯಾರಿಕಾ ಘಟಕವನ್ನು ಸ್ಥಾಪಿಸಿದ್ದರಂತೆ! ಈ ಖದೀಮ ದಂಪತಿ ನಕಲಿ ನಂದಿನಿ ತುಪ್ಪವನ್ನು ತಯಾರಿಸಿ ಅಂಗಡಿ ಮಳಿಗೆಗಳ ಮೂಲಕ ಗ್ರಾಹಕರಿಗೆ ತಲುಪಿಸುವಲ್ಲಿ ಬಹಳಷ್ಟು ಮಂದಿ ಖದೀಮರು ಕೈಜೋಡಿಸಿರಲೇಬೇಕು! ಈ ನಕಲಿ ನಂದಿನಿಯ ಹಾವಳಿಗೆ ಅಸಲಿ ನಂದಿನಿಯ ಬೇಜವಾಬ್ದಾರಿಯೇ ಕಾರಣ!

ಮೈಸೂರಿನ ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆಗಳಲ್ಲಿ ಮಾರಾಟವಾಗುವ ನಂದಿನಿ ತುಪ್ಪದ ಬೆಲೆಯಲ್ಲಿ ಗ್ರಾಹಕರಿಗೆ ಯಾವುದೇ ರಿಯಾಯಿತಿ ನೀಡುವುದಿಲ್ಲ.

ಆದರೆ ಖಾಸಗಿ ವ್ಯಾಪಾರಿ ಮಾಲ್‌ಗಳಲ್ಲಿ ಒಂದು ಲೀಟರ್ ನಂದಿನಿ ತುಪ್ಪವು ಒಮ್ಮೊಮ್ಮೆ 30ರಿಂದ 40 ರೂಪಾಯಿ ರಿಯಾಯಿತಿ ದರದಲ್ಲಿ ಗ್ರಾಹಕರಿಗೆ ಲಭ್ಯವಿರುತ್ತದೆ.ತಮ್ಮದೇ ನಂದಿನಿ ಮಳಿಗೆಯಲ್ಲಿ ದೊರೆಯದ ರಿಯಾಯಿತಿಯು ಖಾಸಗಿ ವ್ಯಾಪಾರಿ ಮಾಲ್‌ಗಳಲ್ಲಿ ದೊರಕಲು ಹೇಗೆ ಸಾಧ್ಯ? ಈ ನಕಲಿ ನಂದಿನಿ ತುಪ್ಪದ ಹಾವಳಿಗೆ ಬ್ರೇಕ್ ಹಾಕಲು ಅಸಲಿ ನಂದಿನಿ ತುಪ್ಪವು ನಂದಿನಿ ಮಾರಾಟ ಮಳಿಗೆಯಲ್ಲಿಯೇ ರಿಯಾಯಿತಿ ದರದಲ್ಲಿ ಮಾರಾಟ ಮಾಡಬೇಕಿದೆ.

ನಂದಿನಿ ತುಪ್ಪದ ಬೆಲೆಯನ್ನು ಏರಿಸಿ ನಂತರ ರಿಯಾಯಿತಿ ನೀಡಿ ಗ್ರಾಹಕರ ಮೂಗಿಗೆ ತುಪ್ಪ ಸವರುವ ಬದಲಾಗಿ ನಂದಿನಿ ತುಪ್ಪದ ಬೆಲೆಯನ್ನೇ ಇಳಿಸಿ ಮಾರಾಟ ಮಾಡಿದರೆ ಇನ್ನೂ ಒಳ್ಳೆಯದು.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ದಲಿತರಿಗೆ ಸಿಎಂ ಸ್ಥಾನ ಸಿಗಬಹುದೇ!?


ಮಾನ್ಯರೆ,

ರಾಜ್ಯದಲ್ಲಿ ಅಧಿಕಾರದ ಹಸ್ತಾಂತರದ ಜಿಕ್ಕಟ್ಟು ತೆರೆ ಮರೆಯಲ್ಲಿ ನಡೆಯುತ್ತಲೇ ಇದೆ. ಐದು ದಶಕಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠ ಕಾರ್ಯಕರ್ತನಾಗಿ ರಾಜ್ಯದ ವಿರೋಧ ಪಕ್ಷದ ನಾಯಕರಾಗಿ, ಗೃಹ ಸಚಿವರಾಗಿ ಹಾಗೂ ಪಕ್ಷದ ಅನೇಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿರುವ ಹಾಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಆಗಿರುವ ಮಲ್ಲಿಕಾರ್ಜುನ ಖರ್ಗೆಯವರೆಗೂ ಸಿಎಂ ಸ್ಥಾನ ಸಿಗಲಿಲ್ಲ. 2013ರಲ್ಲಿ ಡಾ.ಪರಮೇಶ್ವರ್ ಅವರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಅವರ ನೇತೃತ್ವದಲ್ಲಿ ಪಕ್ಷ ಗೆದ್ದು ಬಂದರೂ ಕೆಲವು ಒಳವರ್ಮದಿಂದ ಅವರು ಚುನಾವಣೆಯಲ್ಲಿ ಪರಾಭವಗೊಂಡು ಅಧಿಕಾರದಿಂದ ವಂಚಿತರಾದರು.

ಕಾಂಗ್ರೆಸ್ ಪಕ್ಷವು ದೀನ–ದಲಿತರ ಪರ ಎಂದು ಘೋಷಣೆಗಳ ಕೂಗಿ ಹೇಳುತ್ತಾ ಅಧಿಕಾರದ ಗದ್ದೆಗೆ ಏರುತ್ತಾ ಬಂದಿದ್ದಾರೆ. ಆದರೆ ದಲಿತರಿಗೆ ಈ ರೀತಿಯ ಅಧಿಕಾರ ವಂಚನೆಯನ್ನು ಮಾಡುತ್ತಲೇ ಬಂದಿದೆ. ಬರೀ ದಲಿತರನ್ನು ವೋಟ್ ಬ್ಯಾಂಕ್‌ಗಾಗಿ ಮಾಡಿಕೊಂಡಿದ್ದಾರೆ. ಈಗ ಅಧಿಕಾರದ ಗೊಂದಲ ಬಗೆಹರಿದು ಇನ್ನು ಎರಡು ವರ್ಷಗಳ ಕಾಲ ಅಧಿಕಾರ ಇರುವ ಸರಕಾರ ಇದರ ಬಗೆ ಹೈಕಮಾಂಡ್ ಗಮನಹರಿಸಿ ದಲಿತರಿಗೆ ಸಿಎಂ ಸ್ಥಾನ ಕಲ್ಪಿಸಿ ಕೊಡುವವರೇ?

–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಪೂರ್ಣಗೊಳ್ಳದ ವಿವೇಕಾನಂದ ಪ್ರತಿಮೆ ಕಾಮಗಾರಿ



ಮಾನ್ಯರೆ,

ಮೈಸೂರು ನಗರದ ವಿವೇಕಾನಂದ ವೃತ್ತದಲ್ಲಿ ಹೊಸದಾಗಿ ವಿವೇಕಾನಂದರ ಪ್ರತಿಮೆಯನ್ನು ಸ್ಥಾಪಿಸಲು ಕಳೆದ ಮೂರು ವರ್ಷಗಳ ಹಿಂದೆಯೇ ಬಿಜೆಪಿ ಸರ್ಕಾರವಿದ್ದಾಗ ಸುಮಾರು ಎರಡು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಯಿತು. ಮೂರು ವರ್ಷಗಳು ಕಳೆದರೂ ಈ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ಇದು ಇನ್ನೂ ಪೂರ್ಣಗೊಳ್ಳದೇ ಇರುವುದರಿಂದ ಇಲ್ಲಿ ವಿವೇಕಾನಂದರ ಪ್ರತಿಮೆಯನ್ನು ಸ್ಥಾಪಿಸಲು ಇದುವರೆಗೂ ಸಾಧ್ಯವಾಗಿಲ್ಲ. ಈಗ ಪೂರ್ಣಗೊಂಡಿರುವ ಜಾಗದ ಸುತ್ತಮುತ್ತ ಪಾರ್ಥೇನಿಯಂ ಗಿಡಗಳು ಹುಲುಸಾಗಿ ಬೆಳೆದು ನಿಂತಿವೆ. ಈ ವೃತ್ತದಲ್ಲಿ ಕಳೆದ 15 ವರ್ಷಗಳ ಹಿಂದೆಯೇ ವಿವೇಕಾನಂದರ ಪ್ರತಿಮೆಯನ್ನು ಸ್ಥಾಪಿಸಿದ ಯಶಸ್ಸು ಮಾಜಿ ಶಾಸಕ ನಾಗೇಂದ್ರ ಅವರಿಗೆ ಸಲ್ಲಬೇಕು. ಮುಂದಿನ ವರ್ಷದ ಜನವರಿ 12ನೇ ತಾರೀಖಿನಂದು ವಿವೇಕಾನಂದರ ಜಯಂತಿ ಇರುವುದರಿಂದ ಆ ವೇಳೆಗಾದರೂ ಇಲ್ಲಿ ವಿವೇಕಾನಂದರ ಪ್ರತಿಮೆಯನ್ನು ಸ್ಥಾಪಿಸಲು ಶಾಸಕ ಶ್ರೀವತ್ಸ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಒಂದು ಪ್ರಶಸ್ತಿ ಕೊಂಡರೆ ಮತ್ತೊಂದು ಫ್ರೀ...!

ಮಿರ್ಲೆ ಚಂದ್ರಶೇಖರ

ಲೇಖಕರು,

ಮೊ:9916129654.





ಸಾಧಕರನ್ನು ಗುರುತಿಸಿ, ಸಾರ್ವಜನಿಕ ಸಮಾರಂಭವನ್ನು ಏರ್ಪಡಿಸಿ, ಅವರನ್ನು ವೇದಿಕೆಯ ಮೇಲೆ ತಂದು ಕೂರಿಸಿ, ಅವರ ಗುಣಗಾನ ಮಾಡಿ, ಅವರಿಗೆ ಸುಂದರವಾದ ಫಲಕ, ಶಾಲು, ಪೇಟಾ, ಹಾರ ಇತ್ಯಾದಿಗಳನ್ನು ಚಲಾವಣೆಯಲ್ಲಿರುವ ಮತ್ತೊಬ್ಬ ಸಾಧಕರ ಮೂಲಕ ಸಲ್ಲಿಸಿ, ಫೋಟೋ ತೆಗೆಸಿ, ಪತ್ರಿಕೆಗಳಲ್ಲಿ ಪ್ರಕಟಿಸುವುದು ಸಮಾಜದಲ್ಲಿ ನಡೆದುಕೊಂಡು ಬರುತ್ತಿರುವ ಪ್ರಶಸ್ತಿ ಪದ್ಧತಿ!

ಪ್ರತಿಫಲಗಳು ಹಾಗೂ ಮನ್ನಣೆ ಎಂಬುದು ಒಬ್ಬ ವ್ಯಕ್ತಿಗೆ ಆತ ಮಾಡಿದ ಕೆಲಸವನ್ನು ಗುರುತಿಸಿ ಕೊಟ್ಟಾಗ. ಸಮಾಜಕ್ಕೆ ಮತ್ತಷ್ಟು ಕೊಡುಗೆಯನ್ನು ನೀಡುವುದಕ್ಕೆ ಗೌರವಗಳು, ಪ್ರಶಸ್ತಿಗಳು ಪ್ರೇರಣೆ ನೀಡುತ್ತವೆ.

ಒಂದು ಸಂಸ್ಥೆಯ ಉದ್ಯೋಗಿಗಳನ್ನು ಉತ್ತೇಜಿಸುವ ಸಲುವಾಗಿ ಅವರು ಮಾಡುವ ಕೆಲಸಗಳನ್ನು ಗುರುತಿಸಿ ಸನ್ಮಾನಿಸುವುದು ವಾಡಿಕೆ. ಅದರಿಂದ ಕಂಪನಿಯ ಕಾರ್ಯಕ್ಷಮತೆ ಹೆಚ್ಚಾಗಿ ನಿಗಧಿತ ಗುರಿಯನ್ನು ಮುಟ್ಟುವುದಕ್ಕೆ ಸಹಕಾರಿ ಆಗುವುದು. ಅದೇ ರೀತಿಯಾಗಿ ಸಾರ್ವಜನಿಕ ಕ್ಷೇತ್ರದ ಸಾಧಕರಿಗೂ ಸಹ ಪ್ರಶಸ್ತಿಗಳು ಅವರ ಸಾಧನೆಗೆ ಪೂರಕವಾಗಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಅಥವಾ ಮೊದಲಿಂದಲೂ ಇದ್ದಿರಬಹುದು. ಸಾಧಕರನ್ನು ಗುರುತಿಸುವಲ್ಲಿ ವಂಚನೆ ನಡೆಯುತ್ತಿರುವುದು ಜಗಜ್ಜಾಹಿರಾಗಿರುವ ಸತ್ಯ. ಪ್ರಶಸ್ತಿಗಳ ಮೂಲ ಉದ್ದೇಶವೇ ತಲೆಕೆಳಕಾಗಿ ಅರ್ಹರಿಗಿಂತ ಅರ್ಹರಲ್ಲದವರು ಬಹುಮಂದಿ ದೊಡ್ಡದೊಡ್ಡ ಪ್ರಶಸ್ತಿಗಳನ್ನು ಪಡೆದು ಬೀಗುತ್ತಿದ್ದಾರೆ.

ನಗು ತರುವ ಸಂಗತಿ ಎಂದರೆ ನೆನ್ನೆವರೆಗೂ ಏನೂ ಅಲ್ಲದವನು ಇಂದು ಹೆಸರಿನ ಪಕ್ಕ ಡಾಕ್ಟರೇಟ್ ಪದವಿಯನ್ನು ಹಾಕಿಕೊಂಡು ಮಹಾಜ್ಞಾನಿಯಂತೆ ಸಮಾಜದಲ್ಲಿ ಮೆರೆಯುತ್ತಿದ್ದಾರೆ. ಐದತ್ತು ಸಾವಿರಕ್ಕೆ ಡಾಕ್ಟರೇಟ್ ಕೊಡುವ ನಕಲಿ ಸಂಸ್ಥೆಗಳು ಬಹಳಷ್ಟಿವೆ.

ಜನರ ನಾಡಿಮಿಡಿತ, ಆಸೆ–ಆಕಾಂಕ್ಷೆಗಳಿಗೆ ಅನುಗುಣವಾಗಿ ಕೆಲವರು ಸಂಘಗಳನ್ನು ಸ್ಥಾಪಿಸಿಕೊಂಡು ಗಣ್ಯರ ಹೆಸರು ಅಥವಾ ಆಕರ್ಷಕ ಹೆಸರಿಟ್ಟು ರಾಜ್ಯಮಟ್ಟದ, ರಾಷ್ಟ್ರಮಟ್ಟದ ಪ್ರಶಸ್ತಿಗಳು ಎಂದು ಆಯ್ಕೆ ಮಾಡಿ, ಪತ್ರಿಕೆಗಳಲ್ಲಿ ಇಂತಹ ಪ್ರಶಸ್ತಿ ಪಡೆದವರ ಹೆಸರುಗಳನ್ನು ಬಾವಚಿತ್ರ ಸಹಿತ ಸುದ್ದಿಯಾಗಿ ಪ್ರಕಟಿಸಿ, **ಹೋಲ್‌ಸೇಲ್ ಬೆಲೆಯಲ್ಲಿ ತಂದ ಫಲಕ, ಹಾರ, ಶಾಲು, ಪೇಟಾ ನೀಡಿ ಗೌರವಿಸುತ್ತಾರೆ**. ಪ್ರಶಸ್ತಿ ಪಡೆಯುವ ಪುಣ್ಯಾತ್ಮರು, ಇಂತಹ ಪ್ರಶಸ್ತಿ ಸಿಗುವ ಎಲ್ಲಾ ಕಡೆ ಬೆನ್ನತ್ತಿ ಪಡೆಯುತ್ತಲೇ ಇರುತ್ತಾರೆ, ನೈಜ ಸಾಧಕ ತನ್ನ ಕೆಲಸವನ್ನು ತಾನು ಸದ್ದಿಲ್ಲದೆ ತೆರೆಮರೆಯಲ್ಲಿ ಮಾಡಿಕೊಂಡಿರುತ್ತಾನೆ. ಸಮಾರಂಭದ ಆರ್ಥಿಕ ಲಾಭವನ್ನು ಕಂಡ ಸಂಘ–ಸಂಸ್ಥೆಗಳು ವರ್ಷಕ್ಕೆ ನಾಲ್ಕಾರು ಬಾರಿ ಕಾರ್ಯಕ್ರಮ ಏರ್ಪಡಿಸಿ ಪ್ರಶಸ್ತಿ ಗಳನ್ನು ನೀಡುತ್ತಾರೆ/ಮಾರುತ್ತಾರೆ. ಮಾಡಿದ ಸಾಧನೆ ತೃಣದಷ್ಟು ಇಲ್ಲದಿದ್ದರೂ ಕೆಲವರು ಪ್ರಶಸ್ತಿಗಳನ್ನು ಪಡೆದುಕೊಳ್ಳುವುದು ಚಟವಾಗಿ ಬಿಟ್ಟಿದೆ.

ಸುಸಂಸ್ಕೃತ ಸಮಾಜದ ನಿರ್ಮಾಣದಲ್ಲಿ ತೊಡಗಿಸಿಕೊಂಡಿರುವ ನಿಜವಾದ ಸಾಧಕರು ಎಂದಿಗೂ ಪ್ರಶಸ್ತಿ, ಸನ್ಮಾನ, ಬಿರುದುಗಳ ಹಿಂದೆ ಹೋಗುವುದಿಲ್ಲ. ಬರುವುದಿದ್ದರೆ ಹುಡುಕಿಕೊಂಡು ಮನೆ ಬಾಗಿಲಿಗೇ ಬರುತ್ತವೆ. ಕಡಿದು ಗುಡ್ಡೆ ಹಾಕಿದ್ದು ಏನೂ ಇಲ್ಲದಿದ್ದರೂ, ಮಾಡಿದ್ದು ಹುಲ್ಲುಕಡ್ಡಿಯಷ್ಟು, ಇಂತಹವರುಗಳು ನಾನು ಬಾರಿ ಕೆಲಸ ಮಾಡಿದ್ದೇನೆಂದು ಹಣ ಕೊಟ್ಟು, ಹಿಂಬಾಲಕರಾಗಿ, ಹೊಗಳುಭಟ್ಟರಾಗಿ ಇತ್ಯಾದಿ ವಾಮಮಾರ್ಗಗಳಿಂದ ಪ್ರಶಸ್ತಿ ಪಡೆದು ಖುಷಿಪಡುತ್ತಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಇವರ ಹಾವಳಿ ಜಾಸ್ತಿಯೇ ಇದೆ. ಇಂಥಹವರನ್ನು ಗುರಿಯಾಗಿಸಿ ಕೊಂಡು ಕೆಲವು ಸಂಘ–ಸಂಸ್ಥೆಗಳು ಹುಟ್ಟಿಕೊಂಡಿವೆ. ಇವರು ಆಕಾಂಕ್ಷಿಗಳಿಗೆ ಗಾಳ ಹಾಕಿ ಹಿಡಿಯುತ್ತಾರೆ. ಹೇಗೋ ಅವರನ್ನು ಹುಡುಕಿ ನೀವು ಪ್ರಶಸ್ತಿಗೆ ಆಯ್ಕೆ ಆಗಿದ್ದೀರಿ. ನಿಮ್ಮ ಸ್ವವಿವರ ಹಾಗೂ ಫೋಟೋ ಕಳುಹಿಸಿಕೊಡಿ ಎಂದು ಕರೆ ಮಾಡುತ್ತಾರೆ. ಜೊತೆಗೆ ಲೆಟರ್‌ಹೆಡ್‌ನಲ್ಲಿ ಅವರ ಬಗ್ಗೆ ಹೊಗಳಿ ಬರೆದು ಆಯ್ಕೆಯ ವಿಚಾರವನ್ನು ತಿಳಿಸುತ್ತಾರೆ. ಪತ್ರವನ್ನು ನೋಡಿ ಮರುಳಾಗಿ ಮುಂದಿನ ಅವ್ಯವಹಾರಕ್ಕೆ ಬಲಿಯಾಗುತ್ತಾನೆ. ಹೀಗೆ ಎರಡು ಕಡೆಯಿಂದಲೂ ಪ್ರಶಸ್ತಿಯ ವ್ಯವಹಾರಗಳು ನಡೆಯುತ್ತವೆ. ಸಾಮಾನ್ಯವಾಗಿ ಆರ್ಥಿಕವಾಗಿ ಸದೃಢ ಹಾಗೂ ಅಧಿಕಾರ ಹೊಂದಿರುವಂತವರನ್ನೇ ಪ್ರಶಸ್ತಿಗೆ ಗುರುತಿಸುತ್ತಾರೆ. ಇಂಥಹ ಸಂಸ್ಥೆಗಳು ಖರ್ಚಿಗೆ ಪ್ರಾಯೋಜಕರಿಂದಲೂ ಸಾಕಷ್ಟು ಹಣ ಪಡೆದಿರುತ್ತಾರೆ. ಪ್ರಶಸ್ತಿ ಪಡೆಯುವವರ ಸಂಖ್ಯೆ ಹೆಚ್ಚಿದಂತೆ ಲಾಭವೂ ಹೆಚ್ಚು, ಒಮ್ಮೆಗೆ ಐವತ್ತು ಸಂಖ್ಯೆಯವರೆಗೂ ರಾಜ್ಯದ ಎಲ್ಲಾ ಭಾಗಗಳಿಂದ ಕರೆಸಿ ಸನ್ಮಾನಿಸುತ್ತಾರೆ.

ನಾನು ನಗರದಲ್ಲಿ ನಡೆಯುವ ಹಲವು ಪ್ರಶಸ್ತಿ ಸಮಾರಂಭಗಳಿಗೆ ಹೋಗಿದ್ದೇನೆ. ಅಲ್ಲಿ ಗಮನಿಸಿದಂತೆ **ಪ್ರಶಸ್ತಿ ಪಡೆಯುವವರು ಇಪ್ಪತ್ತೈದು ಜನರಿದ್ದರೆ ಸಭಾಂಗಣದ ವೇದಿಕೆಯಲ್ಲಿ ಐದಾರು ಮಂದಿ ಕುಳಿತಿರುತ್ತಾರೆ, ಸಾಹಿತ್ಯಾಸಕ್ತರಾಗಿ ಒಂದತ್ತು ಜನ ಇರುವುದೇ ಹೆಚ್ಚು, ಅವರು ಯಾರಂತೀರಾ? ಪ್ರಶಸ್ತಿಯ ಜೊತೆ ಜನ ಇರಲೆಂದು ಕವಿಗೋಷ್ಠಿ ಏರ್ಪಡಿಸಿರುತ್ತಾರೆ. ಕವಿತೆ ವಾಚನ ಮಾಡಲು ಬಂದಿರುವ ಕವಿಗಳು!** ಸಭೆಯಲ್ಲಿ ಕೇಳುವ ಕಿವಿಗಳ ಕೊರತೆ ಎದ್ದು ಕಾಣುತ್ತಿರುತ್ತದೆ. ಇಂಥಹ ಪರಿಸ್ಥಿತಿ ಬಹುತೇಕ ಎಲ್ಲಾ ಸಮಾರಂಭಗಳಲ್ಲೂ ಕಂಡು ಬರುವ ದುರಂತ ದೃಶ್ಯ. ಎಲ್ಲಿ ಹಣ ಕಾಸಿನ ವಹಿವಾಟು ನಡೆದು ಉದ್ಯಮವಾಗುತ್ತದೆಯೋ ಅಲ್ಲಿ ಹಣ ಕೊಟ್ಟು ವಸ್ತುಕೊಳ್ಳುವ ಗ್ರಾಹಕರಷ್ಟೇ ಬರುವುದು.

> “ಸುಸಂಸ್ಕೃತ ಸಮಾಜದ ನಿರ್ಮಾಣದಲ್ಲಿ ತೊಡಗಿಸಿಕೊಂಡಿರುವ ನಿಜವಾದ ಸಾಧಕರು ಎಂದಿಗೂ ಪ್ರಶಸ್ತಿ, ಸನ್ಮಾನ, ಬಿರುದುಗಳ ಹಿಂದೆ ಹೋಗುವುದಿಲ್ಲ. ಬರುವುದಿದ್ದರೆ ಹುಡುಕಿಕೊಂಡು ಮನೆ ಬಾಗಿಲಿಗೇ ಬರುತ್ತವೆ. ಕಡಿದು ಗುಡ್ಡೆ ಹಾಕಿದ್ದು ಏನೂ ಇಲ್ಲದಿದ್ದರೂ ಮಾಡಿದ್ದು ಹುಲ್ಲುಕಡ್ಡಿಯಷ್ಟು, ಇವರು ನಾನು ಬಾರಿ ಕೆಲಸ ಮಾಡಿದ್ದೇನೆಂದು ಹಣ ಕೊಟ್ಟು, ಹಿಂಬಾಲಕರಾಗಿ, ಹೊಗಳುಭಟ್ಟರಾಗಿ ನಾನಾ ವಾಮ ಮಾರ್ಗಗಳಿಂದ ಪ್ರಶಸ್ತಿ ಪಡೆದು ಖುಷಿಪಡುತ್ತಾರೆ.!

ಇದಕ್ಕಿಂತ ದುರಂತವೆಂದರೆ ಸರ್ಕಾರಿ ಸಂಸ್ಥೆಗಳಲ್ಲಿ ಅಧಿಕಾರವನ್ನು ಹೊಂದಿರುವ ಮಹಾಶಯರು ತಮ್ಮದೇ ಸಾಮ್ರಾಜ್ಯದಂತೆ ವರ್ತಿಸುತ್ತಾರೆ. ನೈಜ ಸಾಧಕರು ಎದುರಾದಾಗ ಬೆಣ್ಣೆಯ ಮಾತುಗಳು. ಆದರೆ ಅವರು ಕೊಡುವ ತುಪ್ಪವೆಲ್ಲಾ ಹಿಂಬಾಲಕರಿಗೆ, ಅವರಿಗಿಂತಲೂ ಮೇಲೆ ಆಡಳಿತ ನಡೆಸುವ ಮಹನೀಯರಿಂದ ಶಿಫಾರಸ್ಸು ಮಾಡಿಸಿದವರಿಗೆ, ಗೆಳೆಯರು, ಗೆಳೆಯರ ಮಕ್ಕಳು, ಬಂಧುಗಳಿಗೆ ಇಲ್ಲವೇ ಲಂಚ ಕೊಟ್ಟವರಿಗೆ ಪ್ರಶಸ್ತಿಗಳು ಬಿಸಿಬಿಸಿ ಮೈಸೂರು ಮಸಾಲೆ ದೋಸೆಯಂತೆ ಬಿಕರಿಯಾಗಿ ಬಿಡುತ್ತವೆ. ವಯಸ್ಸಿನಲ್ಲಾಗಲಿ, ಸಾಧನೆಯಲ್ಲಾಗಿ ಯಾವೊಂದು ಅರ್ಹ ಮಾನದಂಡಗಳು ಇಲ್ಲದಿದ್ದರೂ ಕೊಡುತ್ತಾರಲ್ಲ, ಇವರಿಗೆ ಕಿಂಚಿತ್ತಾದರೂ ಮಾನವೀಯತೆ ಇಲ್ಲವೇ?.

ಸಾಧಕರು ಮುಪ್ಪಾಗಿ ಇಂದೋ ನಾಳೆಯೋ ಪ್ರಪಂಚವನ್ನು ಬಿಡುವುದಕ್ಕೆ ಸಿದ್ಧರಾಗಿ ನಿಂತವರನ್ನೂ ಗುರುತಿಸದೆ ಬೇಕಾದವರ ಮಕ್ಕಳೆಂದು ಎಳೆವಯಸ್ಸಿನವರಿಗೂ ಕೊಡುತ್ತಾರಲ್ಲ! ಹೋಗಲಿ ಅವರು ಪ್ರಶಸ್ತಿ ಕೊಡುವಂತಹ ಸಾಧನೆಯನ್ನಾದರೂ ಮಾಡಿರಬೇಕಲ್ಲವೇ?, ಇಲ್ಲವೇ ಇಲ್ಲ.

ಬರೆದರೆ ಸಾಕಷ್ಟು ವಿಷಯಗಳನ್ನು ಬಿಚ್ಚಿ ಬೆತ್ತಲೆ ಮಾಡಬಹುದು, ಪ್ರಯೋಜನವಿಲ್ಲ ಏಕೆಂದರೆ ಭಂಡರು ಸಾರ್.. ಭಂಡರು ಇವರು. ಹಲವರು ನನ್ನೊಂದಿಗೆ ಪ್ರಶಸ್ತಿಗಳನ್ನು ನೀಡುವ ಭ್ರಷ್ಟ ವ್ಯವಸ್ಥೆಯ ಕರಾಳತನವನ್ನು ಹೇಳಿಕೊಂಡು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದುಂಟು. ನಾನೊಬ್ಬ ಇಂಜಿನಿಯರ್ ಆಗಿದ್ದರೂ ಸಾಹಿತ್ಯ ಪ್ರೇಮಿಯಾಗಿ ಅಂದಾಜು ಇಪ್ಪತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಸಾಹಿತ್ಯ ಸಮಾರಂಭಗಳಿಗೆ ಹೋಗಿಬರುತ್ತಿದ್ದೇನೆ. ಆ ಅನುಭವದಿಂದ ಕಟ್ಟಕಡೆಗೆ ಕಂಡುಕೊಂಡ ಕಟುಸತ್ಯವೆಂದರೆ: **ಇಲ್ಲಿಯೂ ಎಡ–ಬಲ–ನಡು ಇತ್ಯಾದಿ ಪಂಗಡಗಳಿವೆ. ಜಾತಿ ವ್ಯವಸ್ಥೆ ಇದೆ, ಸ್ವಾರ್ಥ ಇದೆ, ಅಂತಸ್ತು ನೋಡಿ ಮಣೆ ಹಾಕುತ್ತಾರೆ.**

ಹಣಕ್ಕೆ ಬಿಕರಿ ಆಗುತ್ತಿರುವ ಪ್ರಶಸ್ತಿಗಳಿಗೆ ಮೌಲ್ಯ ಇಲ್ಲದಂತೆ ಮಾಡಿಟ್ಟಿದ್ದಾರೆ. ನಿಷ್ಠೆಯಿಂದ ಸೇವೆ ಮಾಡಿದ ಸಾಧಕರಿಗೆ ಇದ್ದಾಗ ಸಿಗದೆ ಮರಣೋತ್ತರ ಪ್ರಶಸ್ತಿಗಳು ಹೆಚ್ಚಾಗುತ್ತಿವೆ. ಈಗ ಪ್ರಶಸ್ತಿ ಪಡೆಯುವುದಕ್ಕಿಂತ ಪ್ರಶಸ್ತಿ ಕೊಡುವ ಸಂಸ್ಥೆ ಕಟ್ಟುವುದು ಸುಲಭ. ಜಿಎಸ್‌ಟಿ ಕಟ್ಟಂಗಿಲ್ಲ, ಅದಾಯ ತೆರಿಗೆ ಇರುವುದಿಲ್ಲ, ಕಚೇರಿಗೆ ಕಟ್ಟಡ ಬೇಕಿಲ್ಲ, ನೋಂದಣಿ ಬೇಕಿಲ್ಲ, ಸಿಬ್ಬಂದಿಗಳ ಅವಶ್ಯಕತೆ ಇಲ್ಲ, ನಿರ್ವಹಣೆಯೇ ಇಲ್ಲದೆ ಸುಲಭವಾಗಿ ನಡೆಸಿಕೊಂಡು ಹೋಗಬಹುದು.

ಖಾಸಗಿ ಸಂಸ್ಥೆಗಳು ಎಲ್ಲವೂ ಅಲ್ಲದಿದ್ದರೂ ಕೆಲವು ಸರಿಯಾದ ಮಾರ್ಗದಲ್ಲೇ ನಡೆಯುತ್ತಿವೆ. ಆದರೆ ಜಿಲ್ಲಾ ಮಟ್ಟದ ಸಾಹಿತ್ಯ ಪರಿಷತ್‌ನಂತಹ ಸಂಸ್ಥೆಗಳಿಗೆ ಏನಾಗಿದೆ?. ಜಿಲ್ಲಾ ಸಾಹಿತ್ಯ ಪರಿಷತ್ ರಾಜ್ಯೋತ್ಸವದಂತಹ ಪ್ರಶಸ್ತಿಗಳನ್ನು ಕೊಡುವುದಕ್ಕೆ ಕಮಿಟಿ ಮಾಡಿ ಮಾನದಂಡಗಳ ಚೆಕ್‌ಲಿಸ್ಟ್ ತಯಾರಿಸಿ ಅದರಂತೆ ಪರಿಗಣಿಸಲಿಲ್ಲವೇಕೆ?. ಆಯ್ಕೆಯು ಪಾರದರ್ಶಕವಾಗಿ ಇರದೇ ಮನಸ್ಸೋ ಇಚ್ಛೆ ಪ್ರಶಸ್ತಿಗಳನ್ನು ಕೊಟ್ಟು ನಿಜವಾದ ಸಾಧಕರಿಗೆ ಅನ್ಯಾಯ ಮಾಡಿದ್ದು ತಪ್ಪು. ಮುಂದಿನ ದಿನ ಗಳಲ್ಲಿ ತರಕಾರಿ ಮಾರಾಟದಂತೆ ನಿಮ್ಮ ಬೀದಿಗಳಿಗೂ ಮೈಕ್ ಇಟ್ಟುಕೊಂಡು ತಳ್ಳುಗಾಡಿಗಳು ಬರಬಹುದು; ಪ್ರಶಸ್ತಿ... ಪ್ರಶಸ್ತಿ... ಯಾರಿಗೇ ಬೇಕು?, ರಾಜ್ಯೋತ್ಸವಕ್ಕೆ ಹತ್ತು ಸಾವಿರ, ಕುವೆಂಪು ಪ್ರಶಸ್ತಿಗೆ ಇಪ್ಪತ್ತು ಸಾವಿರ, ಕೆಎಸ್‌ನ ಪ್ರಶಸ್ತಿಗೆ ಹದಿನೈದು ಸಾವಿರ ಎಂದು ಕೂಗುತ್ತಾ, ಅವು ಬಿಕರಿ ಆಗದಿದ್ದರೆ, ಒಂದು ಪ್ರಶಸ್ತಿ ಕೊಂಡರೆ ಮತ್ತೊಂದು ಪ್ರಶಸ್ತಿ ಫ್ರೀ!.

ಸಮಾದಾನವೆಂದರೆ ಇಂಥಹವುಗಳ ನಡುವೆ ಮೌಲ್ಯವುಳ್ಳ ಪ್ರಶಸ್ತಿಗಳು ಇವೆ. ಇವುಗಳಿಗೆ ಯಾರೂ ಅರ್ಜಿ ಹಾಕಿ, ಶಿಫಾರಸ್ಸು ಮಾಡಿಸಿ ಅಥವಾ ಹಣ ಕೊಟ್ಟು ಕೊಳ್ಳಲಾಗದು. ಮೌಲ್ಯ ಇರುವ ಪ್ರಶಸ್ತಿಗಳು ಕಡಿಮೆ ಸಂಖ್ಯೆಯಲ್ಲಿರುವುದರಿಂದ ಎಲ್ಲಾ ಸಾಧಕರಿಗೂ ಸಿಗುವುದು ಕಷ್ಟ!.

ಕಂಡ ಕಂಡಲ್ಲಿ ಕಸ ಹಾಕುವವರಿಗೆ ದಂಡ; ಎಐ ಕ್ಯಾಮರಾಗಳ ಕಣ್ಗಾವಲು

ಸಿಕ್ಕಿ ಬಿದ್ದವರಿಗೆ ದಂಡ ಖಚಿತ

ಮೈಸೂರು, ನ.27(ಜಿಎ)–ಕಂಡ ಕಂಡಲ್ಲಿ ಕಸ ಹಾಕುವ ಮುನ್ನ ಎಚ್ಚರ! ಎಐ ಕ್ಯಾಮರಾಗಳ ಕಣ್ಗಾವಲಿದೆ. ಅದನ್ನು ಮೀರಿ ಕಸ ಹಾಕಿದರೆ ಪಾಲಿಕೆ ಸಿಬ್ಬಂದಿ ನಿಯಂತ್ರಣ ಕೊಠಡಿಯಿಂದ ನಿಮಗೆ ಎಚ್ಚರಿಸಿ, ದಂಡ ಕಟ್ಟಿಸಲಿದ್ದಾರೆ. ಈಗಾಗಲೇ ವಾಣಿ ವಿಲಾಸ ವಾಟರ್ ವರ್ಕ್ಸ್ ಆವರಣದಲ್ಲಿ ನಿಯಂತ್ರಣ ಕೊಠಡಿ ಸಿದ್ಧಗೊಳ್ಳುತ್ತಿದೆ.

ಮೈಸೂರಿನಲ್ಲಿ ನಗರಪಾಲಿಕೆಯಿಂದ ಈಗಾಗಲೇ 53 ಸ್ಥಳಗಳನ್ನು ಗುರುತಿಸಿ, 46 ಸ್ಥಳಗಳಲ್ಲಿ ಎಐ ಕ್ಯಾಮರಾಗಳನ್ನು ಅಳವಡಿಸಿದ್ದು, ವಾಣಿ ವಿಲಾಸ ವಾಟರ್ ವರ್ಕ್ಸ್ ಆವರಣದಲ್ಲಿ ನಿಯಂತ್ರಣ ಕೊಠಡಿ ಆರಂಭಿಸುತ್ತಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ಜಿಬಿಎ ಅಧಿಕಾರಿಗಳು ಕಸ ಹಾಕುವವರ ಮನೆ ಮುಂದೆ ಕಸ ಸುರಿದು ದಂಡ ವಿಧಿಸಿ, ಜಾಗೃತಿ ಮೂಡಿಸುತ್ತಿದ್ದಾರೆ. ಆದರೆ, ಮೈಸೂರು ಸಾಂಸ್ಕೃತಿಕ ನಗರಿ ಆಗಿರುವುದರಿಂದ ಆ ರೀತಿ ಮಾಡಿದರೆ, ನಗರದ ಘನತೆಗೆ ಧಕ್ಕೆ ಬರುತ್ತದೆ ಎಂಬ ದೃಷ್ಟಿಯಿಂದ ಈ ವಿಧಾನವನ್ನು ಕೈಬಿಡಲಾಗಿದೆ.

ಮೈಸೂರು ನಗರಪಾಲಿಕೆ ವತಿಯಿಂದ ಮನೆ ಮುಂದೆ ಬಂದು ಕಸ ಸಂಗ್ರಹಣೆ ಮಾಡಿದರೂ ಕೆಲವರು ನಗರದ ರಿಂಗ್ ರಸ್ತೆ ಇಕ್ಕೆಲಗಳಲ್ಲಿ, ಮುಖ್ಯ ರಸ್ತೆಗಳಲ್ಲಿ ಕಸ ಎಸೆದು ಹೋಗುತ್ತಿದ್ದಾರೆ. ಪಾಲಿಕೆಯಿಂದ ಕಸ ವಿಂಗಡಣೆ, ವಿಲೇವಾರಿ ಬಗ್ಗೆ ಎಷ್ಟೇ ಜಾಗೃತಿ ಮೂಡಿಸಿದರೂ ಕೆಲವರು ಈ ಕೆಲಸವನ್ನು ಮುಂದುವರೆಸಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ಮೈಸೂರು ನಗರಪಾಲಿಕೆ ಎಐ ಕ್ಯಾಮರಾಗಳ ಮೊರೆ ಹೋಗಿದ್ದಾರೆ.

ಈ ಎಐ ಕ್ಯಾಮರಾಗಳು ಅತ್ಯಾಧುನಿಕವಾಗಿದ್ದು, ಇವು ಕಸ ಹಾಕುವಾಗ ಬಿಪ್ ಶಬ್ಧ ಮಾಡಿ ಕಸ ಹಾಕದಂತೆ ಎಚ್ಚರಿಸುತ್ತವೆ. ಅದನ್ನು ಮೀರಿದರೆ ನಂತರ ಪಾಲಿಕೆ ಸಿಬ್ಬಂದಿ ನಿಯಂತ್ರಣ ಕೊಠಡಿಯಿಂದ ಇದನ್ನು ವೀಕ್ಷಿಸಿ 'ಅಲ್ಲಿ ಕಸ ಹಾಕಬೇಡಿ' ಎಂದು ಮೈಕ್ ಮೂಲಕ ಎಚ್ಚರಿಸುತ್ತಾರೆ. ಅದಕ್ಕೂ ಜಗ್ಗದ ಜನರ ಮುಖ ಚಹರೆಯನ್ನು ಸೆರೆ ಹಿಡಿದು ಅವರಿಗೆ ದಂಡ ವಿಧಿಸುವ ಕಾರ್ಯ ಮಾಡಲಾಗುತ್ತದೆ.



ಕಂಡ ಕಂಡಲ್ಲಿ ಕಸ ನಿಯಂತ್ರಣಕ್ಕೆ ಪಾಲಿಕೆ ವತಿಯಿಂದ ಅಳವಡಿಸಿರುವ ಎಐ ಕ್ಯಾಮರಾ

46 ಸ್ಥಳಗಳಲ್ಲಿ ಅಳವಡಿಸಿರುವ ಇಂತಹ ಕ್ಯಾಮರಾಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕಸ ಹಾಕುವವರ ಸಂಖ್ಯೆ ಕಡಿಮೆ ಆಗಿದೆ. ಎಲ್ಲಿ ಕಸದ ಸಮಸ್ಯೆ ನಿವಾರಣೆ ಆಗಲಿದೆಯೋ ಆ ಸ್ಥಳದಿಂದ ಕ್ಯಾಮರಾವನ್ನು ತೆಗೆದು ಮತ್ತೊಂದು ಸ್ಥಳದಲ್ಲಿ ಅಳವಡಿಸುವ ಕಾರ್ಯವನ್ನು ಪಾಲಿಕೆ ವತಿಯಿಂದ ಮಾಡಲಾಗುತ್ತದೆ. ಸೂಕ್ತ ಸ್ಥಳಗಳಲ್ಲಿ ಎಐ ಕ್ಯಾಮರಗಳನ್ನು ಅಳವಡಿಸಿದರೆ, ಮೈಸೂರು ನಗರದ ಕಸದ ಸಮಸ್ಯೆ ನಿವಾರಣೆ ಆಗಬಹುದು ಎಂದು ಸಾರ್ವಜನಿಕರು ಅಭಿಪ್ರಾಯ ಪಟ್ಟಿದ್ದಾರೆ.

> “ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕಸ ನಿಯಂತ್ರಣಕ್ಕೆ ಅಳವಡಿಸಿರುವ ಎಐ ಕ್ಯಾಮರಾಗಳಿಗೆ ವಾಣಿ ವಿಲಾಸ ವಾಟರ್ ವರ್ಕ್ಸ್ ಆವರಣದಲ್ಲಿ ಸಿದ್ಧಪಡಿಸುತ್ತಿರುವ ನಿಯಂತ್ರಣ ಕೊಠಡಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಕಂಡ ಕಂಡಲ್ಲಿ ಕಸ ಹಾಕುವವರಿಗೆ ಕಡಿವಾಣ ಹಾಕಲಾಗುತ್ತದೆ.
>
> **–ವೆಂಕಟೇಶ್, ಆರೋಗ್ಯಾಧಿಕಾರಿ, ಮೈಸೂರು ಮಹಾನಗರ ಪಾಲಿಕೆ**

ಹಾಂಗ್ ಕಾಂಗ್ ಅಪಾರ್ಟ್‌ಮೆಂಟ್‌ನಲ್ಲಿ ಬೆಂಕಿ ಅವಘಡ: 55 ಮಂದಿ ಸಾವು

ಹಾಂಗ್ ಕಾಂಗ್: ಹಾಂಗ್‌ಕಾಂಗ್‌ನಲ್ಲಿ ಸಂಭವಿಸಿದ ಭೀಕರ ಬೆಂಕಿ ದುರಂತದಲ್ಲಿ 55 ಮಂದಿ ಸಾವನ್ನಪ್ಪಿದ್ದು, 279 ಮಂದಿ ನಾಪತ್ತೆಯಾಗಿದ್ದಾರೆ. ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆಯಿದೆ. ರಕ್ಷಣಾ ಕಾರ್ಯಕರ್ತರು ಎತ್ತರದ ಅಪಾರ್ಟ್‌ಮೆಂಟ್ ಕಟ್ಟಡಗಳಿಂದ ನಿವಾಸಿಗಳ ಹೊರಗೆಳೆದು ತರುತ್ತಿದ್ದಾರೆ

ನ್ಯೂ ಟೆರಿಟರಿಗಳ ಉಪನಗರ ತೈ ಪೋ ಜಿಲ್ಲೆಯ ವಸತಿ ಸಮುಚ್ಚಯದಲ್ಲಿ ಭಾರತೀಯ ಕಾಲಮಾನ ಬುಧವಾರ ಮಧ್ಯಾಹ್ನ ಪ್ರಾರಂಭವಾದ ಬೆಂಕಿ ದುರ್ಘಟನೆ ನರಮೇಧ ಎಂದು ಶಂಕಿಸಿದ್ದು, ಶಂಕೆಯ ಮೇಲೆ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಇಂದು ಬೆಳಗಿನ ಹೊತ್ತಿಗೆ, ಬೆಂಕಿಯನ್ನು ಇನ್ನೂ ನಂದಿಸಲಾಗಿಲ್ಲ ಮತ್ತು ರಕ್ಷಣಾ ಕಾರ್ಯ ಮುಂದುವರೆದಿದೆ.

ಬೆಂಕಿಯ ತ್ವರಿತ ಹರಡುವಿಕೆ ಅಸಾಮಾನ್ಯವಾಗಿರುವುದರಿಂದ ಎತ್ತರದ ಕಟ್ಟಡಗಳ ಹೊರ ಗೋಡೆಗಳ ಮೇಲಿನ ಕೆಲವು ವಸ್ತುಗಳು ಬೆಂಕಿ ನಿರೋಧಕ ಮಾನದಂಡಗಳನ್ನು ಪೂರೈಸಲಿಲ್ಲ. ಇದರಿಂದ ಸಾವು ನೋವು ಅಧಿಕವಾಗಿದೆ ಎಂದು ಶಂಕಿಸಲಾಗಿದೆ.

ಉಡುಪಿ ದೇವಸ್ಥಾನದ ಕನಕ ಕಿಂಡಿಗೆ ವಿಶ್ವದರ್ಜೆ ಪಾರಂಪರಿಕ ಸ್ಥಾನ ಕಲ್ಪಿಸಿ

ದಾಸ ಶ್ರೇಷ್ಠ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಗುಲ್ಬರ್ಗ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶಶಿಕಾಂತ್ ಎಸ್.ಉಡಿಕೇರಿ ಆಗ್ರಹ

ಮೈಸೂರು, ನ.27(ಬಿಎಲ್‌ಯು)– ಉಡುಪಿಯ ಶ್ರೀ ಕೃಷ್ಣ ದೇವಸ್ಥಾನದಲ್ಲಿ ಕನಕದಾಸರಿಗೆ ಶ್ರೀ ಕೃಷ್ಣ ದರ್ಶನ ನೀಡಿದ ಸ್ಥಳ ಕನಕ ಕಿಂಡಿಗೆ ವಿಶ್ವ ದರ್ಜೆಯ ಪಾರಂಪರಿಕ ಸ್ಥಾನ ದೊರಕಿಸಬೇಕು ಎಂದು ಗುಲ್ಬರ್ಗ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶಶಿಕಾಂತ್ ಎಸ್.ಉಡಿಕೇರಿ ಸರ್ಕಾರವನ್ನು ಆಗ್ರಹಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂದು ದಾಸ ಶ್ರೇಷ್ಠ ಶ್ರೀ ಭಕ್ತ ಕನಕದಾಸರ 538ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇದಲ್ಲದೆ ಕರ್ನಾಟಕದ ಯಾವುದಾದರೊಂದು ಭಾಗಕ್ಕೆ ಕನಕದಾಸರ ಹೆಸರು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು.

ಮೂಢ ನಂಬಿಕೆ, ಜಾತಿ ಪದ್ಧತಿ ಸೇರಿದಂತೆ ಹಲವು ಅನಿಷ್ಠ ಪದ್ಧತಿಗಳ ವಿರುದ್ಧ ಧ್ವನಿ ಎತ್ತುವುದರ ಮೂಲಕ ಕನಕದಾಸರು ಸಮಾಜದ ಅಂಕು ಡೊಂಕುಗಳನ್ನು ತಿದ್ದಿದ ಮಹಾನ್ ದಾರ್ಶನಿಕರಾಗಿದ್ದಾರೆ. ಇಂತಹ ದಾಸ ಶ್ರೇಷ್ಠ ಕನಕದಾಸರ ಜೀವನ ತತ್ವ ಎಂದೆಂದಿಗೂ ಮಾದರಿ ಎಂದು ಪ್ರೊ.ಶಶಿಕಾಂತ್ ಉಡಿಕೇರಿ ಅಭಿಪ್ರಾಯಪಟ್ಟರು.

ಕನಕದಾಸರ ಕೀರ್ತನೆಗೆ ಸಮಾಜ ಕಟ್ಟುವ ಕ್ರಿಯೆ ಇದೆ, ಕುಟುಂಬವನ್ನು ಸೌಹಾರ್ದಗೊಳಿಸುವ ನೀತಿ, ಶಕ್ತಿ ಇದೆ. ನಾಡನ್ನು ನಿಸರ್ಗದತ್ತವಾಗಿ ಕೊಂಡೊಯ್ಯುವ ಕೌಶಲ್ಯವಿದೆ ಎಂದು ಹೇಳಿದರು.



ಮೈಸೂರಿನ ಮಾನಸಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಗುರುವಾರ ವಿಧಾನಪರಿಷತ್ ಸದಸ್ಯ ಯತೀಂದ್ರ ಅವರು ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ದಾಸಶ್ರೇಷ್ಠ ಶ್ರೀ ಭಕ್ತ ಕನಕದಾಸರ 538ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕನಕದಾಸರು ಸಾಮಾನ್ಯ ಜನರಿಗೆ ಅವಶ್ಯವಾಗಿರುವ ತತ್ವಗಳನ್ನು ಸರಳವಾಗಿ ಬೋಧಿಸುತ್ತಾ, ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಹಲವು ಸಂದೇಶ ನೀಡುತ್ತಾ ಬಹು ಎತ್ತರಕ್ಕೆ ಬೆಳೆದ ದಾಸ ಶ್ರೇಷ್ಠರಾಗಿದ್ದಾರೆ ಎಂದು ಪ್ರೊ.ಶಶಿಕಾಂತ್ ಉಡಿಕೇರಿ ಹೇಳಿದರು.

ಇದೇ ವೇಳೆ ಮಾತನಾಡಿದ ವಿಧಾನಪರಿಷತ್ ಸದಸ್ಯ ಯತೀಂದ್ರ ಅವರು, ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಸಂದೇಶ ನೀಡಿದ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಕುರುಬ ಸಮಾಜ ಮಾತ್ರವಲ್ಲದೆ ಸಮಾಜದ ಎಲ್ಲಾ ವರ್ಗದವರು ಆಚರಣೆ ಮಾಡಬೇಕು. ಜಾತಿ ಪದ್ಧತಿ ನಿರ್ಮೂಲನೆಗಾಗಿ ಕನಕದಾಸರಷ್ಟೇ ಅಲ್ಲದೆ ಬುದ್ಧ, ಬಸವ ಅಂಬೇಡ್ಕರ್ ಅವರ ಶ್ರಮ ಕೂಡ ಇದೆ. ಇಂತಹ ಮಹಾನ್ ವ್ಯಕ್ತಿಗಳ ಆದರ್ಶವನ್ನು ಎಂದೆಂದಿಗೂ ಆರಾಧಿಸಬೇಕು ಎಂದು ಕಿವಿಮಾತು ಹೇಳಿದರು.

ರಾಜರ ಕಾಲದಲ್ಲಿ ಜಾತಿ ವ್ಯವಸ್ಥೆ ಎದ್ದು ಕಾಣುತ್ತಿತ್ತು. ಆದರೆ, ಇಂದು ಜಾತಿ ವ್ಯವಸ್ಥೆ ಸೂಕ್ಷ್ಮವಾಗಿ ಕಾಣಿಸುತ್ತಿದೆ. ಆದರೆ ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದಿಂದ ಕಾಲ ಕ್ರಮೇಣ ಜಾತಿ ವ್ಯವಸ್ಥೆ ಸುಧಾರಣೆಯಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ಜಾತ್ಯಾತೀತ ಮತ್ತು ಧರ್ಮಾತೀತ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸಮಾನತೆ ಪರವಾಗಿ ಕೆಲಸ ಮಾಡುವ ಪಕ್ಷ ಹಾಗೂ ವ್ಯಕ್ತಿಗಳನ್ನು ಬೆಂಬಲಿಸಬೇಕು ಎಂದು ಯತೀಂದ್ರ ಸಲಹೆ ನೀಡಿದರು.

ಹಂಪಿ ವಿಶ್ವವಿದ್ಯಾ ನಿಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲಿಕಾ ಘಂಟಿ ಮಾತನಾಡಿ, ಕನಕದಾಸರ ಜಯಂತಿಗೆ ಕುರುಬ ಸಮಾಜದವರಿಗೆ ಮಾತ್ರ ಆಹ್ವಾನ ನೀಡಿರುವುದು ಸರಿಯಲ್ಲ. ಎಲ್ಲಾ ವರ್ಗ ದವರಿಗೂ ಆಹ್ವಾನ ನೀಡಿ ಒಟ್ಟಾಗಿ ಆಚರಣೆ ಮಾಡ ಬೇಕು ಎಂದು ಸಲಹೆ ನೀಡಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶುಕ್ರವಾರ 28 ನವೆಂಬರ್ 2025

ಹೊರನಾಡಿನವರಿಗೂ ಕನ್ನಡ ಕಲಿಸಿ

ಪ್ರಾದೇಶಿಕ ಆಯುಕ್ತರೂ ಆದ ನಗರಪಾಲಿಕೆ ಆಡಳಿತಾಧಿಕಾರಿ ಮಿತೇಶ್ ಪಾಟೀಲ್ ಕಿವಿಮಾತು



ಮೈಸೂರು ಮಹಾನಗರಪಾಲಿಕೆ ವಾಣಿವಿಲಾಸ ವಾಟರ್ ವರ್ಕ್ಸ್ ಕಚೇರಿ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು, ನ.27(ಎಂಕೆ)– ಆಡಳಿತದ ಪ್ರತಿ ಹಂತದಲ್ಲಿ ಕಡ್ಡಾಯವಾಗಿ ಕನ್ನಡ ಬಳಸುವುದಲ್ಲದೆ ಬೇರೆ ರಾಜ್ಯಗಳಿಂದ ಬಂದು ನೆಲೆಸುವವರಿಗೂ ಕನ್ನಡ ಕಲಿಸಬೇಕು ಎಂದು ನಗರಪಾಲಿಕೆ ಆಡಳಿತಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ಮಿತೇಶ್ ಪಾಟೀಲ್ ಹೇಳಿದರು.

ಮೈಸೂರು ಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ ಶ್ರೀಮಂತ ಭಾಷೆಯಾಗಿದ್ದು, ಇದನ್ನು ಉಳಿಸಿ, ಬೆಳೆಸುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ಎಂದರು.

ದೇಶದ ಬೇರೆ ಬೇರೆ ರಾಜ್ಯಗಳ ಹಾಗೂ ಬೇರೆ ಬೇರೆ ದೇಶಗಳಿಂದಲೂ ಉದ್ಯೋಗಕ್ಕಾಗಿ ಜನರು ಕರ್ನಾಟಕಕ್ಕೆ ಬರುತ್ತಾರೆ. ಅದರಲ್ಲೂ ಬೆಂಗಳೂರು, ಮೈಸೂರಿಗೆ ಬರುವವರ ಸಂಖ್ಯೆ ಹೆಚ್ಚು. ಅವರೊಂದಿಗೆ ನಾವು ಅವರ ಭಾಷೆಯಲ್ಲಿ ವ್ಯವಹರಿಸುವ ಬದಲು ಅವರಿಗೆಲ್ಲಾ ಕನ್ನಡ ಕಲಿಸಬೇಕು. ಆ ಮೂಲಕ ಕನ್ನಡವನ್ನು ಮತ್ತಷ್ಟು ಪಸರಿಸುವ ಕೆಲಸ ಮಾಡಬೇಕು ಎಂದು ಅವರು ಕಿವಿಮಾತು ಹೇಳಿದರು.

ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಕನ್ನಡ ಭಾಷೆಯನ್ನು ಮಾತನಾಡುತ್ತಲೇ ಕನ್ನಡತನವನ್ನು ಅನುಭವಿಸಬೇಕು. ಕನ್ನಡದ ವಿಷಯದಲ್ಲಿ ಇನ್ನೊಬ್ಬರನ್ನು ದೂರುವ ಬದಲು ನಾನೇನು ಮಾಡಿದ್ದೇನೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ಆಡಳಿತದಲ್ಲಿ ಕನ್ನಡ ಸಂಪೂರ್ಣವಾಗಿ ಅನುಷ್ಠಾನ ಆಗಬೇಕು ಎಂದು ಹೇಳಿದರು.

ಪಾಲಿಕೆ ಉಪ ಆಯುಕ್ತ ದಾಸೇಗೌಡ ಮಾತನಾಡಿ, ಕನ್ನಡದ ಬಗ್ಗೆ ಕೀಳರಿಮೆ ಹಾಗೂ ಮಡಿವಂತಿಕೆ ಎಂಬುದಿರಬಾರದು. ಇತರೆ ಭಾಷೆಗಳ ಪದಗಳನ್ನು ಸೇರಿಸಿಕೊಂಡೆ ಕನ್ನಡವನ್ನು ಬೆಳೆಸಬೇಕು ಎಂದರು. ಬಳಿಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸದ್ಯದಲ್ಲೇ ಸೇವೆಯಿಂದ ನಿವೃತ್ತರಾಗುತ್ತಿರುವ ವಲಯ ಆಯುಕ್ತ ವೆಂಕಟರಾಮ್ ಅವರನ್ನು ಸನ್ಮಾನಿಸಲಾಯಿತು.

ಉಪ ಆಯುಕ್ತ(ಕಂದಾಯ) ಜಿ.ಎಸ್.ಸೋಮಶೇಖರ್, ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಪಾಲಿಕೆ ಅಧಿಕಾರಿಗಳಾದ ಶಿಲ್ಪಾ, ಮಂಜು, ನಾಗರಾಜೇಗೌಡ, ರವಿಕುಮಾರ್, ಗಿರೀಶ್ ಮತ್ತಿತರರಿದ್ದರು.

ಶೇಷಾದ್ರಿಪುರಂ ಪಿಯು ಕಾಲೇಜಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವ



ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ರಾಜ್ಯೋತ್ಸವದಲ್ಲಿ ಸಾಹಿತ್ಯ ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ನ.27– ಮೈಸೂರಿನ ಹೆಬ್ಬಾಳದ ಹೊರವರ್ತುಲ ರಸ್ತೆಯಲ್ಲಿರುವ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವ, ಮೈಸೂರು ಜಿಲ್ಲಾ ಅಂತರ ಪ್ರೌಢಶಾಲೆಗಳ ಭಾಷಣ ಹಾಗೂ ರಸಪ್ರಶ್ನೆ ಸ್ಪರ್ಧೆಯ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ ಸಾಹಿತ್ಯ ಚಿಂತಕರಾದ ಮೂಡ್ನಾಕೂಡು ಚಿನ್ನಸ್ವಾಮಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮತನಾಡುತ್ತಾ, ಆಯಾಯ ಪ್ರಾಂತೀಯ ಭಾಷೆಯಲ್ಲಿ ಮಕ್ಕಳಿಗೆ ಮೂಲ ಶಿಕ್ಷಣವನ್ನು ನೀಡಬೇಕಾಗಿದೆ. ಅಗ ಮಾತ್ರ ಕನ್ನಡ ಭಾಷೆ ಉಳಿಯಲು ಸಾಧ್ಯವಾಗುತ್ತದೆ ಎಂದರು.

ಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಮಾತೃ ಭಾಷೆಗೆ ಮನ್ನಣೆ ನೀಡಿ ಕನ್ನಡದಲ್ಲೆ ಮಾತನಾಡಿ, ಆಗ ಕನ್ನಡ ಉಳಿಯುತ್ತದೆ ಎಂದರು.

ಈ ವೇಳೆ ಎಸ್‌ವಿಜಿ ಸಮೂಹ ಸಂಸ್ಥೆಗಳ ಸ್ಥಾಪಕ ಅಧ್ಯಕ್ಷ ವಿಶ್ವನಾಥ ಶೇಷಾಚಲ, ನಿವೃತ್ತ ಉಪನ್ಯಾಸಕ ಎ.ಪಾರ್ಥೇಗೌಡ, ಮರದೂರು ಲಾ ಸಲೆಟ್ ವಿದ್ಯಾಸಂಸ್ಥೆಯ ಕನ್ನಡ ಉಪನ್ಯಾಸಕ ಎಂ.ಆರ್.ಲೋಕೇಶ್, ಸಿಎಫ್‌ಟಿಆರ್‌ಐ ಪ್ರೌಢಶಾಲೆ ಪ್ರಾಂಶುಪಾಲೆ ತಂಕಮ್ಮ ಎಂ.ತೆರೆಸ, ಹುಲಿಕೆರೆ ಬಿಜಿಎಸ್ ಬಾಲಜಗತ್ ಪ್ರೌಢಶಾಲೆ ಮುಖ್ಯೋಪಾಧ್ಯಾಯಿನಿ ವಿ.ಆಶಾ ಅವರನ್ನು ಗೌರವಿಸಲಾಯಿತು. ಸಮಾರಂಭದಲ್ಲಿ ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಸೌಮ್ಯ ಈರಪ್ಪ ಕೆ. ಸ್ವಾಗತಿಸಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಅರ್ಚನಸ್ವಾಮಿ ವಂದಿಸಿದರು. ರಸಾಯನಶಾಸ್ತ್ರ ಉಪನ್ಯಾಸಕಿ ಚೈತ್ರ ಬಹುಮಾನ ವಿತರಿಸಿದರು.

ವಿಶ್ವದ ಅತಿ ಪುರಾತನ ಮೂರು ಭಾಷೆಗಳಲ್ಲಿ ಕನ್ನಡವೂ ಒಂದು

ಸಾಹಿತಿ ಡಾ.ಜಯಪ್ಪ ಹೊನ್ನಾಳಿ ಅಭಿಮತ



ಮಹಾಲಕ್ಷ್ಮಿ ಮಹಿಳಾ ಮಂಡಳಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ.

ಮೈಸೂರು, ನ.27(ಎಂಕೆ)– ಕನ್ನಡ ಎಂಬುದು ಕೇವಲ ಶಬ್ದವಲ್ಲ, ಕರುನಾಡ ಜನರ ಜೀವನದ ಉತ್ಕೃಷ್ಟ ಭಾವ ಕೋಶವಾಗಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರಾಧ್ಯಕ್ಷ ಹಾಗೂ ಕವಿ ಡಾ.ಜಯಪ್ಪ ಹೊನ್ನಾಳಿ ಬಣ್ಣಿಸಿದರು.

ಮೈಸೂರು ಅಗ್ರಹಾರದಲ್ಲಿರುವ ಮಹಾಲಕ್ಷ್ಮಿ ಮಹಿಳಾ ಮಂಡಳಿಯಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಭಾಷೆಗಳ ಲಿಪಿ ಮೂಲವಾದ ಬ್ರಾಹ್ಮೀ ಲಿಪಿಯಿಂದ ಕನ್ನಡ ಮೂಡಿ ಬಂದಿದೆ. ಸ್ವಂತ ಅಂಕಿಗಳನ್ನೂ ಅಕ್ಷರಗಳನ್ನೂ ಹೊಂದಿರುವ ಕನ್ನಡ ಭಾಷೆ ವಿಶ್ವದಲ್ಲೇ ಅತ್ಯಂತ ಪುರಾತನವಾದ ಮೂರು ಭಾಷೆಗಳಲ್ಲಿ ಒಂದಾಗಿದೆ ಎಂದರು.

ಸಂಸ್ಕೃತ, ಗ್ರೀಕ್, ಕನ್ನಡ ಅತ್ಯಂತ ಪುರಾತನ ಭಾಷೆಗಳಾಗಿದ್ದು, ನಾಡಿನ ಹಿರಿಯ ಸಾಹಿತಿಗಳು ಕನ್ನಡ ಭಾಷೆಯನ್ನು ಅತ್ಯಂತ ವೈಜ್ಞಾನಿಕವಾಗಿ, ತಾರ್ಕಿಕವಾಗಿ ಕಟ್ಟಿಕೊಟ್ಟಿದ್ದಾರೆ. ಕನ್ನಡ ಭಾಷೆಗೆ ಇರುವಂತೆ ಅಂಕಿ–ಅಂಶಗಳ ಲಿಪಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಿಲ್ಲ. ಹಿಂದಿಯನ್ನು ದೇವನಾಗರಿ ಲಿಪಿಯಲ್ಲಿ ಬರೆಯಲಾಗುತ್ತದೆ. ಅಕ್ಷರಶಃ ಕನ್ನಡ ಅಮೃತ ಭಾಷೆಯಾಗಿದ್ದು, ಅನನ್ಯವಾದದ್ದೂ ಅಪೂರ್ವವಾದ ಭಾಷೆಯಾಗಿದೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ನಂತರ ಮಹಿಳಾ ಲೇಖಕಿಯರಿಂದ 'ತೂಗೋಣ ಬನ್ನಿ ಕನ್ನಡಾಂಬೆಯ ಕಾವ್ಯದ ಮಾಲೆಯಲ್ಲಿ' ಶೀರ್ಷಿಕೆಯಡಿ ಕವಿಗೋಷ್ಠಿ ನಡೆಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಹಾಲಕ್ಷ್ಮಿ ಮಹಿಳಾ ಮಂಡಳಿ ಅಧ್ಯಕ್ಷೆ ಎಂ.ಎನ್.ದಿವ್ಯಚೇತನ, ಕಾರ್ಯದರ್ಶಿ ಸುಜಾತ ಕಾಶಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶೋಭಾರಾಣಿ ಮತ್ತಿತರರಿದ್ದರು.

ಭಾರತದ ಶಾಸ್ತ್ರೀಯ ಸಂಗೀತ, ಕಲಾ ಪ್ರಕಾರಗಳು ವಿದೇಶಿಯರಿಗೆ ಅಚ್ಚುಮೆಚ್ಚು

ಮೈಸೂರಲ್ಲಿ 3ನೇ ಪ್ರದರ್ಶಕ ಕಲೆಗಳ ರಾಷ್ಟ್ರೀಯ ಸಮ್ಮೇಳನ, ಶಾಸ್ತ್ರೀಯ ನೃತ್ಯೋತ್ಸವದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರಶಂಸೆ

ಮೈಸೂರು, ನ.27(ಬಿಎಲ್‌ಯು)– ಭಾರತದ ಶಾಸ್ತ್ರೀಯ ಸಂಗೀತ ಮತ್ತು ಕಲಾ ಪ್ರಕಾರಗಳು ಭಾರತೀಯರಿಗಿಂತ ವಿದೇಶಿಯರಿಗೆ ಹೆಚ್ಚು ಆಸಕ್ತಿದಾಯಕವಾಗಿದ್ದು, ಹಾಗಾಗಿ ಅವರು ಪರಿಣಾಮಕಾರಿ ಅಧ್ಯಯನ ಮತ್ತು ಸಂಶೋಧನೆಯಲ್ಲಿ ತೊಡಗಿದ್ದಾರೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದ್ದಾರೆ.

ಮೈಸೂರಿನ ಲಕ್ಷ್ಮಿಪುರಂನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಗುರುವಾರ 3ನೇ ಪ್ರದರ್ಶಕ ಕಲೆಗಳ ರಾಷ್ಟ್ರೀಯ ಸಮ್ಮೇಳನ ಮತ್ತು ಶಾಸ್ತ್ರೀಯ ನೃತ್ಯೋತ್ಸವ–2025ರಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಭಾರತದ ಪ್ರಾಚೀನ ಸಂಸ್ಕೃತಿ, ಪರಂಪರೆ, ಸಂಗೀತ ಹಾಗೂ ಪ್ರದರ್ಶಕ ಕಲೆಗಳು ಇನ್ನು ಜೀವಂತವಾಗಿವೆ ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದರು.

ಜಾಗತಿಕ ಮಟ್ಟದಲ್ಲಿ ಭಾರತದ ಸಂಸ್ಕೃತಿ, ಪರಂಪರೆ, ಶಾಸ್ತ್ರೀಯ ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಹೆಚ್ಚಿನ ಮನ್ನಣೆ ಇದೆ. ಈ ಹಿನ್ನೆಲೆಯಲ್ಲಿ ಭಾರತೀಯರಿಗಿಂತ ವಿದೇಶಿಯರು ಹೆಚ್ಚಿನ ಪ್ರಮಾಣದಲ್ಲಿ ಇದರ ಬಗ್ಗೆ ಅಧ್ಯಯನ ಹಾಗೂ ಸಂಶೋಧನೆ ನಡೆಸುತ್ತಿದ್ದಾರೆ. ಇದರ ಮಹತ್ವ ತಿಳಿದು ನಮ್ಮ ಭಾರತೀಯರು ವಿದೇಶಿಯರಿಗಿಂತ ಹೆಚ್ಚಿನ ಆಸಕ್ತಿ ಹೊಂದಬೇಕು ಎಂದು ಸ್ವಾಮೀಜಿ ಸಲಹೆ ನೀಡಿದರು.



ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ನಡೆದ 3ನೇ ಪ್ರದರ್ಶಕ ಕಲೆಗಳ ರಾಷ್ಟ್ರೀಯ ಸಮ್ಮೇಳನ ಮತ್ತು ಶಾಸ್ತ್ರೀಯ ನೃತ್ಯೋತ್ಸವ–2025 ಅನ್ನು ಅಂತರ ರಾಷ್ಟ್ರೀಯ ನೃತ್ಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ ಉದ್ಘಾಟಿಸಿದರು.

ನಮ್ಮ ದೇಶ ವಿಶ್ವಕ್ಕೆ ಮೌಲ್ವಿಕ ಕೊಡುಗೆಗಳನ್ನು ನೀಡಿದೆ. ಪ್ರಸ್ತುತ ವೈಜ್ಞಾನಿಕವಾಗಿ ನಡೆಸುತ್ತಿರುವ ಹೊಸ ಹೊಸ ಆವಿಷ್ಕಾರ ಮತ್ತು ಸಂಶೋಧನೆಗಳನ್ನು ನಮ್ಮ ಪ್ರಾಚೀನರು ಈ ಹಿಂದೆಯೇ ನಡೆಸಿದ್ದಾರೆ ಎಂದು ಹೇಳಿದರು.

ನೃತ್ಯದಲ್ಲಿ ಯೋಗದ ವಿವಿಧ ಪ್ರಕಾರಗಳು ಪ್ರದರ್ಶನಗೊಳ್ಳುತ್ತವೆ. ಈ ಮೂಲಕ ಭಾರತದ ಶಾಸ್ತ್ರೀಯ ಸಂಗೀತ ಮತ್ತು ಪ್ರದರ್ಶಕ ಕಲೆಗಳು ವಿಶಿಷ್ಟವಾಗಿವೆ. ಬೇಲೂರು, ಹಳೇಬೀಡು ಸೇರಿದಂತೆ ಇತರೆಡೆ ಇರುವ ಅನೇಕ ಶಾಸನಗಳು ಭಾರತದ ಸಾಂಪ್ರದಾಯಿಕ ಸಂಸ್ಕೃತಿ, ಪರಂಪರೆಯ ಪ್ರತಿಬಿಂಬ ಎಂದರು.

ಕನ್ನಡ ಭಾಷೆ ಮಧುರವಾಗಿದೆ, ಸೌಂದರ್ಯದ ಗೂಡಾಗಿದೆ. ಚುಟುಕು ಸಾಹಿತ್ಯ, ಕಾವ್ಯ, ಮಹಾಕಾವ್ಯ ಸೇರಿದಂತೆ ಹಲವು ರೀತಿಯಲ್ಲಿ ಕನ್ನಡ ಭಾಷೆಯಲ್ಲಿ ಪ್ರಯೋಗಗಳಾಗಿವೆ. ಈ ಮೂಲಕ ಕನ್ನಡ ಭಾಷೆಯನ್ನು ಎಲ್ಲಾ ಪ್ರಕಾರಗಳಲ್ಲಿ ಉಳಿಸಿ, ಬೆಳೆಸಿ, ಸಂರಕ್ಷಿಸಬೇಕು ಎಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಲಹೆ ನೀಡಿದರು.

ಶಾಸ್ತ್ರೀಯ ನೃತ್ಯದಲ್ಲಿ ಕನ್ನಡ ಹಿಂದೆ–ಇಂದು–ನಾಳೆ ಕುರಿತು ಮಾತನಾಡಿದ ಡಾ.ತುಳಸಿ ರಾಮಚಂದ್ರ, ಭರತನಾಟ್ಯ ನೃತ್ಯದಲ್ಲಿ 8 ನೃತ್ಯ ಪ್ರಕಾರಗಳಿದ್ದು, ಒಂದಕ್ಕಿಂತ ಒಂದು ವಿಶಿಷ್ಟವಾಗಿದೆ ಎಂದರು.

ಕನ್ನಡ ಕವಿಗಳ ಸಾಹಿತ್ಯ, ಲೇಖನ, ಕಾವ್ಯಗಳನ್ನು ಗಮನಿಸಿದರೆ ಕರ್ನಾಟಕದ ನೃತ್ಯ ಎಷ್ಟರ ಮಟ್ಟಿಗೆ ಶ್ರೀಮಂತವಾಗಿದೆ ಎಂಬುದು ಬಿಂಬಿತವಾಗುತ್ತದೆ. ಗೋವು ಮೆಲುಕು ಹಾಕುವಂತೆ ಕರ್ನಾಟಕದ ಇತಿಹಾಸವನ್ನು ಮೆಲುಕು ಹಾಕಬಹುದು ಎಂದರು.

ಕರ್ನಾಟಕದ ನೃತ್ಯ ಸಂಪ್ರದಾಯ ಧ್ರುವತಾರೆಯಾಗಿ ಬೆಳಗಬೇಕು. ಇಂತಹ ಶ್ರೇಷ್ಠ ಪರಂಪರೆಯ ನೃತ್ಯದ ಬಗ್ಗೆ ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಅಧ್ಯಯನ, ಸಂಶೋಧನೆ ಮಾಡಬೇಕು ಎಂದರು.

ಸಂಗೀತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ ಮಾತನಾಡಿ, ಸಂಗೀತ ಮತ್ತು ನೃತ್ಯವನ್ನು ಹವ್ಯಾಸವಾಗಿ ಕಲಿಯದೆ, ವೃತ್ತಿಯಾಗಿ ಕಲಿಯಬೇಕು, ಇದನ್ನು ಶಿಕ್ಷಣದ ರೂಪದಲ್ಲಿ ಕಲಿಯಬೇಕು. ಈ ಮೂಲಕ ಈ ವಿಷಯದಲ್ಲಿ ಪದವಿ ಪಡೆಯಬೇಕು ಎಂದು ಸಲಹೆಯಿತ್ತರು.

ಅಂತರರಾಷ್ಟ್ರೀಯ ನೃತ್ಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ ನೃತ್ಯೋತ್ಸವ ಉದ್ಘಾಟಿಸಿದರು. ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಮಂಜುನಾಥ್, ಬೆಂಗಳೂರಿನ ಭರತ ನೃತ್ಯ ಸಂಗೀತ ಅಕಾಡೆಮಿ ನಿರ್ದೇಶಕ ಡಾ.ಶುಭಾರಾಣಿ ಬೋಳಾರ್ ಹಾಗೂ ಪ್ರೊ.ಕೆ.ರಾಮಮೂರ್ತಿರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಭೂಮಿಗಿರಿ ಪ್ರಕಾಶನದಿಂದ ಕನ್ನಡ ರಾಜ್ಯೋತ್ಸವ...



ಭೂಮಿಗಿರಿ ಪ್ರಕಾಶನದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಮೈಸೂರು ಕೈಗಾರಿಕಾ ವಾಣಿಜ್ಯ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಎನ್.ಬೆಟ್ಟೇಗೌಡ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಡಾ.ರವೀಶ್, ವೈ.ಡಿ.ರಾಜಣ್ಣ, ರಘುರಾಂ ವಾಜಪೇಯಿ, ವೆಂಕಟೇಶ ಇನ್ನಿತರರಿದ್ದರು.

ಪಿಕೆಟಿಬಿ ಆಸ್ಪತ್ರೆಯ ಎಕ್ಸ್‌ರೇ ಕಾಪಿಗಳಲ್ಲಿ ಕನ್ನಡದಲ್ಲಿ ಮಾಹಿತಿ



ಮೈಸೂರು, ನ.27(ಎಂಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಪಿಕೆಟಿಬಿ ಆಸ್ಪತ್ರೆಯಲ್ಲಿ ವಿನೂತನ ಪ್ರಯೋಗದೊಂದಿಗೆ ಎಕ್ಸ್–ರೇಯಲ್ಲಿ ಕನ್ನಡ ಭಾಷೆ ಬಳಸುವ ಮೂಲಕ ಕನ್ನಡಾಭಿಮಾನದ ಜೊತೆಗೆ ಎಕ್ಸ್–ರೇ ಕಂಡುಹಿಡಿದ ಜರ್ಮನ್ ಭೌತಶಾಸ್ತ್ರಜ್ಞ ವಿಲ್ಹೆಲ್ಮ್ ಕಾನ್ರಾಡ್ ರೋಂಟ್ಜೆನ್ ಅವರನ್ನು ಸ್ಮರಿಸಲಾಗಿದೆ.

ಸಾಮಾನ್ಯವಾಗಿ ಎಕ್ಸ್–ರೇಯಲ್ಲಿ, ಎಕ್ಸ್–ರೇ ಮಾಡಿಸಿದ ವ್ಯಕ್ತಿಯ ಮತ್ತು ಆಸ್ಪತ್ರೆಯ ಹೆಸರು ಇಂಗ್ಲಿಷ್‌ನಲ್ಲಿರಲಿದೆ. ಮೊದಲೆಲ್ಲಾ ಹೆಸರು ಕೂಡ ಇರುತ್ತಿರಲಿಲ್ಲ. ತಂತ್ರಜ್ಞಾನ ಬೆಳೆದಂತೆ ಹೊಸ ಹೊಸ ಪ್ರಯೋಗಳನ್ನು ಮಾಡುವ ಮೂಲಕ ವ್ಯಕ್ತಿ ಹೆಸರಿನ ಜೊತೆಗೆ, ಆಸ್ಪತ್ರೆ ಹೆಸರನ್ನು ಎಕ್ಸ್–ರೇ ಕಾಪಿಯಲ್ಲಿ ಮುದ್ರಿಸಲಾಗುತ್ತಿದೆ. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇಂಗ್ಲಿಷ್ ಜೊತೆಗೆ ಕನ್ನಡ ಭಾಷೆಯಲ್ಲಿ ಆಸ್ಪತ್ರೆ ಹೆಸರನ್ನು ಮುದ್ರಿಸುವ ಮೂಲಕ ಕನ್ನಡಾಭಿಮಾನ ಮೆರೆಯಲಾಗಿದೆ.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವ್ಯಾಪ್ತಿಯಲ್ಲಿ ಬರುವ ಟ್ರಾಮಾ ಕೇರ್‌ನ ಎಕ್ಸ್–ರೇ ಕಾಪಿಯಲ್ಲಿ ಆಸ್ಪತ್ರೆಯ ಲೋಗೋ ಮುದ್ರಿಸುವ ಪ್ರಯೋಗ ಯಶಸ್ವಿಗೊಳಿಸಲಾಗಿತ್ತು. ಈಗ ಅದೇ ಮಾದರಿಯಲ್ಲಿ ಆಸ್ಪತ್ರೆ ಎಕ್ಸ್–ರೇ ಕಾಪಿಯಲ್ಲಿ ಆಸ್ಪತ್ರೆಯ ಹೆಸರನ್ನು ಕನ್ನಡದಲ್ಲಿ ಮುದ್ರಿಸಲಾಗಿದೆ. ಅಲ್ಲದೆ 1895ರ ನ.8ರಂದು ಎಕ್ಸ್–ರೇ ಕಂಡು ಹಿಡಿದ ಜರ್ಮನ್ ಭೌತಶಾಸ್ತ್ರಜ್ಞ ವಿಲ್ಹೆಲ್ಮ್ ಕಾನ್ರಾಡ್ ರೋಂಟ್ಜೆನ್ ಅವರನ್ನು ಸ್ಮರಿಸಲು ಪ್ರಯತ್ನಿಸಲಾಗಿದೆ. ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಎಕ್ಸ್–ರೇ ಕಾಪಿಯಲ್ಲಿ ಕನ್ನಡ ಪದ ಬಳಕೆ ಮಾಡಲಾಗಿದೆ. ಎಕ್ಸ್–ರೇ ಯಂತ್ರದ ಸಾಫ್ಟ್‌ವೇರ್ ಸೆಟ್ಟಿಂಗ್‌ನಲ್ಲಿ ಭಾಷೆ ಬದಲಾವಣೆಗೆ ಅವಕಾಶ ಇರುವುದರಿಂದ ಕನ್ನಡ ಸಾಫ್ಟ್‌ವೇರ್ ಡೌನ್‌ಲೋಡ್ ಮಾಡಿಕೊಂಡು ಇಂಗ್ಲಿಷ್‌ನಿಂದ ಕನ್ನಡಕ್ಕೆ ಬದಲಾವಣೆ ಮಾಡಲಾಯಿತು. ಸದ್ಯಕ್ಕೆ ಆಸ್ಪತ್ರೆ ಹೆಸರು ಕನ್ನಡದಲ್ಲಿದೆ. ಮುಂದಿನ ದಿನಗಳಲ್ಲಿ ರೋಗಿ ಹೆಸರನ್ನು ಕನ್ನಡದಲ್ಲೇ ಮುದ್ರಿಸುವ ಪ್ರಯತ್ನ ಮಾಡಲಾಗುವುದು ಎಂದು ಪಿಕೆಟಿಬಿ ಆಸ್ಪತ್ರೆ ಎಕ್ಸ್–ರೇ ತಂತ್ರಜ್ಞ(ಆರ್‌ಐಒ) ಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರಾಜ್ಯದಲ್ಲೇ ಮೊದಲು: ಮೊದಲೆಲ್ಲಾ ಎಕ್ಸ್–ರೇ ಯಂತ್ರಗಳಿಗೆ ಪ್ಲೇಟ್ ಇಟ್ಟು ಮುದ್ರಿಸಲಾಗುತ್ತಿತ್ತು. ಯಾವುದೇ ಹೆಸರು ಸೇರ್ಪಡೆಗೆ ಅವಕಾಶ ಇರಲಿಲ್ಲ. ಡಿಜಿಟಲ್ ಯಂತ್ರೋಪಕರಣಕ್ಕೆ ಬದಲಾವಣೆಯಾದ ಬಳಿಕ ವ್ಯಕ್ತಿಯ ಹೆಸರು, ಆಸ್ಪತ್ರೆ ಹೆಸರನ್ನು ಎಕ್ಸ್–ರೇ ಕಾಪಿಯಲ್ಲಿ ಸೇರಿಸಿ, ಮುದ್ರಿಸಲು ಅವಕಾಶವಿದೆ. ಪಿಕೆಟಿಬಿ ಆಸ್ಪತ್ರೆಯ ಎಕ್ಸ್–ರೇನಲ್ಲಿ ಕನ್ನಡ ಪದ ಬಳಕೆ ಮಾಡಿರುವುದು ರಾಜ್ಯದಲ್ಲಿಯೇ ಮೊದಲ ಪ್ರಯೋಗ ಎಂದು ರಾಜ್ಯ ಸರ್ಕಾರಿ ರೇಡಿಯಾಲಜಿ ಇಮೇಜಿಂಗ್ ಆಫೀಸರ್ಸ್ ಕೇಂದ್ರ ಸಂಘದ ರಾಜ್ಯಾಧ್ಯಕ್ಷ ಅಶೋಕ್ ವಾಲ್ಮೀಕಿ ತಿಳಿಸಿದರು.

ಕನ್ನಡ ರಾಜ್ಯೋತ್ಸವದ ವೇಳೆ ಸಂತಸದ ವಿಚಾರ



"ಕನ್ನಡ ರಾಜ್ಯೋತ್ಸವ ವೇಳೆ ಆಸ್ಪತ್ರೆಯ ಎಕ್ಸ್–ರೇ ಕಾಪಿಯಲ್ಲಿ ಕನ್ನಡ ಪದ ಬಳಕೆ ಮಾಡುವ ಮೂಲಕ ರಾಜ್ಯೋತ್ಸವ ಆಚರಣೆ ಮಾಡಿದಂತಾಗಿದೆ. ಗ್ರಾಮೀಣ ಪ್ರದೇಶದ ಜನರಿಗೂ ಇದರಿಂದ ಅನುಕೂಲ. ಎಕ್ಸ್–ರೇನಲ್ಲಿ ಕನ್ನಡ ಪದಗಳನ್ನು ನೋಡುವುದೇ ವಿಶೇಷ. –ಡಾ.ಸಿ.ಪ್ರಶಾಂತ್, ವೈದ್ಯಕೀಯ ಅಧೀಕ್ಷಕರು, ಪಿಕೆಟಿಬಿ & ಸಿಡಿ ಆಸ್ಪತ್ರೆ.

ಮೈಸೂರು ರೈಲ್ವೆ ನಿಲ್ದಾಣದಲ್ಲಿ 150 ಹೆಚ್ಚುವರಿ ಸಿಸಿಟಿವಿ ಕ್ಯಾಮರಾ ಅಳವಡಿಕೆ

ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ಪೃಥ್ವಿಯ ಹುಲ್ಲತ್ತಿ ಮಾಹಿತಿ



ಮೈಸೂರು ಮಿತ್ರ ವರದಿ ಫಲಶೃತಿ

ಮೈಸೂರು, ನ.27(ಬಿಎಲ್‌ಯು)– ಮೈಸೂರು ರೈಲ್ವೆ ನಿಲ್ದಾಣದಲ್ಲಿ ಭದ್ರತೆ ಮತ್ತು ಕಣ್ಗಾವಲು ವ್ಯವಸ್ಥೆ ಹೆಚ್ಚಿಸಲು 150 ಹೆಚ್ಚುವರಿ ಹೊಸ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ ಎಂದು ನೈರುತ್ಯ ರೈಲ್ವೆಯ ವಿಭಾಗೀಯ ಹಣಕಾಸು ನಿರ್ವಹಣೆ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ ಪೃಥ್ವಿಯ ಹುಲ್ಲತ್ತಿ ತಿಳಿಸಿದ್ದಾರೆ.

'ಮೈಸೂರು ಮಿತ್ರ'ನ ನವೆಂಬರ್ 19ರ ಸಂಚಿಕೆಯಲ್ಲಿ 'ಮೈಸೂರು ರೈಲ್ವೆ ನಿಲ್ದಾಣದಲ್ಲಿ ಕೆಟ್ಟು ಧೂಳಿಡಿಯುತ್ತಿರುವ ಸಿಸಿಟಿವಿ ಕ್ಯಾಮರಾಗಳು' ಶೀರ್ಷಿಕೆಯಡಿ ಪ್ರಕಟವಾದ ಸುದ್ದಿಗೆ ಈ ಸ್ಪಷ್ಟನೆ ನೀಡಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣದ ಎಲ್ಲಾ ಸಿಸಿಟಿವಿ ಕ್ಯಾಮರಾಗಳು ಕಾರ್ಯ ನಿರ್ವಹಿಸುತ್ತಿದ್ದು, ಕೆಲವು ಸಮಯ ತಾಂತ್ರಿಕ ಸಮಸ್ಯೆ ಎದುರಾದಾಗ ಸಿಗ್ನಲ್ ಮತ್ತು ದೂರ ಸಂಪರ್ಕ (ಎಸ್ ಅಂಡ್ ಟಿ) ಸಿಬ್ಬಂದಿ ಅದನ್ನು ತಕ್ಷಣ ಗಮನಹರಿಸಿ ಸರಿಪಡಿಸುತ್ತಾರೆ ಎಂದು ಹೇಳಿದ್ದಾರೆ.


ಸಿಸಿಟಿವಿ ಕ್ಯಾಮರಾಗಳು ಸರಿಯಾದ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ನಿರಂತರ ಮೇಲ್ವಿಚಾರಣೆ ಮತ್ತು ನಿರ್ವಹಣೆಯಲ್ಲಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಈಗ ಹೆಚ್ಚುವರಿಯಾಗಿ 150 ಸಿಸಿಟಿವಿ ಕ್ಯಾಮರಾಗಳನ್ನು ಖರೀದಿ ಮಾಡುವ ಪ್ರಕ್ರಿಯೆಯಲ್ಲಿದೆ. ಹೊಸ ಕ್ಯಾಮರಾಗಳನ್ನು ಅಳವಡಿಸಿದ ನಂತರ ರೈಲ್ವೆ ನಿಲ್ದಾಣದ ಭದ್ರತೆಯನ್ನು ಗಮನಾರ್ಹವಾಗಿ ಬಲಪಡಿಸಲಾಗುತ್ತಿದೆ ಎಂದು ಪೃಥ್ವಿಯ ಹುಲ್ಲತ್ತಿ ಭರವಸೆ ನೀಡಿದ್ದಾರೆ.

ಸರ್ವ ಸದಸ್ಯರ ಸಭೆ...



ಕೆ.ಆರ್.ಪೇಟೆ ತಾಲೂಕು ಮೈಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸರ್ವ ಸದಸ್ಯರ ಸಭೆ ಮೈಸೂರಿನ ಹೆಬ್ಬಾಳು ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಆವರಣದಲ್ಲಿ ಸಂಘದ ಅಧ್ಯಕ್ಷ ಕೆ.ಟಿ. ಚಂದ್ರೇಗೌಡ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವೇಳೆ ಸಂಘದ ಕಾರ್ಯಾಧ್ಯಕ್ಷ ಸಿ.ಚಲುವೇಗೌಡ, ಹಿರಿಯ ಉಪಾಧ್ಯಕ್ಷ ಎಂ.ಕೆ.ದ್ಯಾವೇಗೌಡ, ಕಾರ್ಯದರ್ಶಿ ರಾಮಚಂದ್ರ, ಖಜಾಂಚಿ ಎಸ್.ಕುಮಾರ್, ಸಂಘದ ಸಂಘಟನಾ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಉಪಸ್ಥಿತರಿದ್ದರು.

ವೃದ್ಧ ನಾಪತ್ತೆ



ಮೈಸೂರು, ನ.27–ವೃದ್ಧನೋರ್ವ ನಾಪತ್ತೆಯಾಗಿರುವ ಬಗ್ಗೆ ತಿ.ನರಸೀಪುರ ತಾಲೂಕು ಹುನಗನಹಳ್ಳಿಯಿಂದ ವರದಿಯಾಗಿದೆ. ಈ ಗ್ರಾಮದ ನಿವಾಸಿ ಸಿಂಗ್ರಿಶೆಟ್ಟಿ(75) ಅವರು ಕಳೆದ ಅ.25ರಂದು ಆಸ್ಪತ್ರೆಗೆ ಹೋಗುವುದಾಗಿ ತಿಳಿಸಿ, ಮನೆಯಿಂದ ಹೊರ ಹೋದವರು ಈವರೆಗೆ ವಾಪಸ್ಸಾಗಿಲ್ಲ ಎಂದ ಅವರ ಪತ್ನಿ ಸಾಕಮ್ಮ ಬನ್ನೂರು ಠಾಣೆಗೆ ದೂರು ಸಲ್ಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇರುವವರು ಬನ್ನೂರು ಠಾಣೆ ದೂ.ಸಂ.08227–275632 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಮೈಸೂರಲ್ಲಿ ಜೆಎಸ್‌ಎಸ್ ರಂಗೋತ್ಸವಕ್ಕೆ ಚಾಲನೆ

ರಂಗಭೂಮಿಗೆ ಅನ್ಯಾಯವನ್ನು ವಿರೋಧಿಸುವ ತಾಕತ್ತಿದೆ: ರಂಗಕರ್ಮಿ ಮೈಮ್ ರಮೇಶ್ ಅಭಿಮತ

ಮೈಸೂರು,ನ.27(ಎಂಟಿವೈ)–ವಾಕ್ ಸ್ವಾತಂತ್ರ್ಯ ಹೊಂದಿರುವ ರಂಗಭೂಮಿ ದೇಶದ ಆಗು–ಹೋಗು ಸೇರಿದಂತೆ ಯಾವುದೇ ವಿಷಯವನ್ನು ವಿರೋಧಿಸುವ ತಾಕತ್ತು ಹೊಂದಿದೆ ಎಂದು ರಂಗಕರ್ಮಿ ಮೈಮ್ ರಮೇಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಗುರುವಾರ ನಡೆದ ಜೆಎಸ್‌ಎಸ್ ರಂಗೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಂಗಭೂಮಿಗೆ ಅನ್ಯಾಯವನ್ನು ವಿರೋಧಿಸುವ ಶಕ್ತಿ ಹಾಗೂ ವಾಕ್ ಸ್ವಾತಂತ್ರ್ಯ ಇರುವುದರಿಂದ ದೇಶದ ಮುನ್ನಲೆ– ಹಿನ್ನೆಲೆ ಕುರಿತ ಯಾವುದೇ ವಿಷಯವಾದರೂ ಪ್ರಬಲವಾಗಿ ಪ್ರತಿಕ್ರಿಯಿಸುವ ಗುಣ ಹೊಂದಿದೆ ಎಂದರು.

ಇತ್ತೀಚಿನ ಕೆಲ ವರ್ಷಗಳಿಂದ ರಂಗಭೂಮಿ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಯಾಗಿದೆ. ಎಪ್ಪತ್ತರ ದಶಕದ ರಂಗಭೂಮಿಗೂ ಪ್ರಸ್ತುತದ ರಂಗಭೂಮಿಗೂ ಸಾಕಷ್ಟು ವ್ಯತ್ಯಾಸವಿದೆ. ಈ ಹಿಂದೆ ರಂಗಭೂಮಿ ಚಳವಳಿಯ ಮಾರ್ಗವಾಗಿತ್ತು. ಸಮಾಜದ ಸಮಸ್ಯೆಗಳಿಗೆ ಹೋರಾಟದ ಮೂಲಕ ಸ್ಪಂದಿಸುತ್ತಿತ್ತು. ರಂಗಭೂಮಿ ದೊಡ್ಡ ಪರದೆ. ಮನುಷ್ಯನನ್ನು ಮನುಷ್ಯನನ್ನಾಗಿ ತೋರಿಸುವುದು ಇಲ್ಲಿ ಮಾತ್ರ. ನಾಟಕದ ಮೂಲಕ ಸಂದೇಶ ಸಾರುತ್ತಿತ್ತು. ಆದರೆ, ಇಂದಿನ ರಂಗಭೂಮಿ ಕ್ಷೇತ್ರದಲ್ಲಿ ಬದಲಾವಣೆಯಾಗಿವೆ ಎಂದು ತಿಳಿಸಿದರು.

ಮಕ್ಕಳು ರಂಗಭೂಮಿಗೆ ಬಂದು ಹೆಸರು ಮಾಡಬೇಕು. ಸಾಧ್ಯವಾಗದಿದ್ದಲ್ಲಿ ಅತ್ಯುತ್ತಮ ಸಭಿಕರಾಗಬೇಕು



ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ರಂಗೋತ್ಸವಕ್ಕೆ ರಂಗಭೂಮಿ ನಟ ಮೈಮ್ ರಮೇಶ್ ಗುರುವಾರ ಚಾಲನೆ ನೀಡಿದರು.

ಮೊಬೈಲ್, ಟಿವಿಗಳ ಹಾವಳಿಯ ಈ ಕಾಲದಲ್ಲಿ ಮಕ್ಕಳಿಗೆ ಸಂಸ್ಕೃತಿ ಹಾಗೂ ಸಂಸ್ಕಾರ ಮುಖ್ಯ. ರಂಗಭೂಮಿ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಕಲಿಸುತ್ತದೆ. ಮಕ್ಕಳು ಜ್ಞಾನಪೀಠ ಪುರಸ್ಕೃತರ ಆತ್ಮಚರಿತ್ರೆ ಓದಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಸಂಪುಟಗಳನ್ನು ಓದಬೇಕು. ಆಗ ಮಾತ್ರ ಪ್ರಜಾಪ್ರಭುತ್ವ ಎಲ್ಲಿ ಕಳೆದುಹೋಗುತ್ತಿದೆ ಎಂಬುದು ಗೊತ್ತಾಗುತ್ತದೆ ಎಂದರು.

ಜೆಎಸ್‌ಎಸ್ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿ, ರಂಗಭೂಮಿಯು ಜನರಿಗೆ ಪರಿಣಾಮಕಾರಿಯಾಗಿ ತಲುಪುವ ಮಾಧ್ಯಮ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಹಿಸಿದ್ದರು. ವಿದ್ಯಾರ್ಥಿನಿಯರಾದ ನಿಖಿತಾ ಭಟ್, ತನುಶ್ರೀ ಭಟ್ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕ ಹೊನ್ನಶೆಟ್ಟಿ ಸ್ವಾಗತಿಸಿದರು. ರಂಗೋತ್ಸವ ಸಂಚಾಲಕ ಚಂದ್ರಶೇಖರಾಚಾರ್ ಹೆಗ್ಗೊಠಾರ ಪ್ರಾಸ್ತಾವಿಕ ಭಾಷಣ ಮಾಡಿದರು.

ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ರೇಚಣ್ಣ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಟಿ.ಗುರುಪಾದಸ್ವಾಮಿ, ಜೆಎಸ್‌ಎಸ್ ಪ್ರಕಟಣಾ ವಿಭಾಗದ ಸಹ ನಿರ್ದೇಶಕ ಆರ್.ಎಸ್.ಪೂರ್ಣಾನಂದ ಉಪಸ್ಥಿತರಿದ್ದರು. ಎನ್.ಎಂ.ಕೃಷ್ಣಪ್ಪ ವಂದಿಸಿದರು. ಕೆ.ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು. ನಂತರ ಶರೀಫ ನಾಟಕದ ಪ್ರದರ್ಶನ ಜರುಗಿತು.

ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನಕ್ಕೆ ಆಗ್ರಹಿಸಿ ಬೈಕ್ ರ‍್ಯಾಲಿ

ಮೈಸೂರು, ನ.27– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಕಲ್ಪಿಸುವಂತೆ ಆಗ್ರಹಿಸಿ, ಮೈಸೂರಿನಲ್ಲಿ ನ.29ರಂದು ಬೈಕ್ ರ‍್ಯಾಲಿ ನಡೆಸಲು ನಿರ್ಧರಿಸಲಾಗಿದೆ.

ನಗರದ ಗೋಕುಲಂ ಬಡಾವಣೆಯ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ವಿವಿಧ ಪಕ್ಷದವರು ಸೇರಿದಂತೆ ಒಕ್ಕಲಿಗ ಸಮುದಾಯದ ಹಲವು ಮುಖಂಡರು ಸಭೆ ನಡೆಸಿ, ಈ ನಿರ್ಧಾರ ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 9ಕ್ಕೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಅಲ್ಲಿಂದ ಚಾಮುಂಡಿಬೆಟ್ಟಕ್ಕೆ ಬೈಕ್ ರ‍್ಯಾಲಿಯಲ್ಲಿ ತೆರಳಿ ಪೂಜೆ ಸಲ್ಲಿಸಿದ ಬಳಿಕ ನಗರದ ಪ್ರಮುಖ ರಸ್ತೆಗಳಲ್ಲಿ ರ‍್ಯಾಲಿ ಮುಂದುವರೆಸುವ ಮೂಲಕ ಅಧಿಕಾರ ಹಸ್ತಾಂತರಕ್ಕೆ ಆಗ್ರಹಿಸಲು ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ.

ಮೈಸೂರು ಒಕ್ಕಲಿಗ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಹಲವು ಮುಖಂಡರು, ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವವರೆಗೂ ಹೋರಾಟ ಮುಂದುವರೆಸಬೇಕು ಎಂದು ಅಭಿಪ್ರಾಯಿಸಿದ್ದಾಗಿ ಹೇಳಲಾಗಿದೆ.

ಮೈಸೂರು ಮಿತ್ರ ಶುಕ್ರವಾರ 28 ನವೆಂಬರ್ 2025

ಗುಣಮಟ್ಟದ ಹಾಲು ಪೂರೈಸಿ ಒಕ್ಕೂಟದ ಅಭಿವೃದ್ಧಿಗೆ ಶ್ರಮಿಸಿ

ರೈತರಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಕರೆ

ಪಾಂಡವಪುರ, ನ.27– ರೈತರು ಡೇರಿಗೆ ಗುಣಮಟ್ಟದ ಹಾಲು ಪೂರೈಸುವ ಜೊತೆಗೆ ತಮ್ಮ ಮನೆಯ ಶುಭ ಸಮಾರಂಭಗಳಿಗೆ ಒಕ್ಕೂಟದಿಂದ ದೊರೆಯುವ ಸಿಹಿ ತಿನಿಸುಗಳನ್ನು ಬಳಸುವ ಮೂಲಕ ಒಕ್ಕೂಟದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ಪಟ್ಟಣದ ಮನ್‌ಮುಲ್ ಉಪ ಕಚೇರಿಯಲ್ಲಿ ನಡೆದ ವಿವಿಧ ಫಲಾನುಭವಿಗಳಿಗೆ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ 20.61 ಲಕ್ಷ ರೂ. ಮೌಲ್ಯದ ಚೆಕ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಮನ್‌ಮುಲ್ 192ಕ್ಕೂ ಅಧಿಕ ಉತ್ಪನ್ನಗಳನ್ನು ತಯಾರಿಸುತ್ತಿದೆ. ಇಲ್ಲಿ ತಯಾರಾಗುವ ಉತ್ಪನ್ನಗಳನ್ನು ರಾಜ್ಯ, ಹೊರ ರಾಜ್ಯ ಸೇರಿದಂತೆ ಹೊರ ದೇಶಕ್ಕೂ ಸಹ ರಫ್ತು ಮಾಡಲಾಗುತ್ತಿದೆ. ಹಾಗಾಗಿ ರೈತರು ತಮ್ಮ ಮನೆಯಲ್ಲಿ ನಡೆಯುವ ಶುಭ ಸಮಾರಂಭಗಳಿಗೆ ಒಕ್ಕೂಟದ ಸಿಹಿ ತಿನಿಸುಗಳನ್ನೇ ಬಳಸಿದರೇ ಒಕ್ಕೂಟದ ಅಭಿವೃದ್ಧಿಗೆ ಶ್ರಮಿಸಿದಂತಾಗುತ್ತದೆ. ಒಕ್ಕೂಟ ಅಭಿವೃದ್ಧಿ ಹೊಂದಿದರೆ ಅದರ ಲಾಭದ ಹಣ ಒಂದಲ್ಲಾ ಒಂದು ರೀತಿ ಮತ್ತೇ ರೈತರಿಗೆ ಸೇರುತ್ತದೆ ಎಂದು ಸಲಹೆ ನೀಡಿದರು.

ತಾಲೂಕಿನಲ್ಲಿ 148 ಡೇರಿಗಳಿದ್ದು, ಈ ಪೈಕಿ 24 ಡೇರಿಗಳಿಗೆ ಸ್ವಂತ ಕಟ್ಟಡಗಳು ಇಲ್ಲವಾಗಿದೆ. ಕೆಲವು ಡೇರಿಗೆ ನಿವೇಶನದ ಕೊರತೆ ಇದೆ. ತಾಲೂಕಿನಲ್ಲಿರುವ ಎಲ್ಲಾ ಡೇರಿಗಳು ಸ್ವಂತ ಕಟ್ಟಡದಲ್ಲಿಯೇ ನಡೆಯಬೇಕೆನ್ನುವುದು ನನ್ನ ಆಸೆ. ಹೀಗಾಗಿ ಡೇರಿಗಳ ಸ್ವಂತ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು. ಅಲ್ಲದೇ ಈಗಾಗಲೇ ಮನ್‌ಮುಲ್ ಉಪ ಕಚೇರಿ ನಿರ್ಮಾಣಕ್ಕೆ ನಿವೇಶನ ಖರೀದಿಸಲಾಗಿದೆ. ಸ್ವಂತ ಕಟ್ಟಡ ನಿರ್ಮಾಣಕ್ಕೆ 4.45 ಕೋಟಿ ವೆಚ್ಚದಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಶೀಘ್ರ ಉಪ ವ್ಯವಸ್ಥಾಪಕರ ಕಚೇರಿ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು ಎಂದರು.

ತಾಲೂಕಿಗೆ 600 ಮ್ಯಾಟ್ ಬಂದಿದ್ದು, ಮುಂದಿನ ದಿನಗಳಲ್ಲಿ ವಿತರಿಸಲಾಗುವುದು. ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಪ್ರಾಮಾಣಿಕ ವಾಗಿ ರೈತರಿಗೆ ಒದಗಿಸುವ ಕೆಲಸ ಮಾಡುತ್ತೇನೆ ಎಂದರು.

ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್ ಮಾತನಾಡಿದರು. ಇದೇ ವೇಳೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ವಡ್ಡರಹಳ್ಳಿ ಡೇರಿಗೆ 1.80 ಲಕ್ಷ ರೂ. ಹೊಸಸಾಯಪನಹಳ್ಳಿ ಡೇರಿಗೆ 1.35 ಲಕ್ಷ ಹಾಗೂ ಚಿಕ್ಕಾಯರಹಳ್ಳಿ ಡೇರಿಗೆ 36 ಸಾವಿರದ ಚೆಕ್ ಹಾಗೂ ನಿವೃತ್ತಿ ಹೊಂದಿದ ಹೊಸಹಳ್ಳಿ ಡೇರಿ ಕಾರ್ಯದರ್ಶಿ ಚಂದ್ರಶೇಖರ್ ಅವರನ್ನು ಅಭಿನಂದಿಸಿ 4 ಲಕ್ಷ ರೂ.ಗಳ ಚೆಕ್ ವಿತರಿಸಲಾಯಿತು.

ಈ ವೇಳೆ ಸಹಾಯಕ ವ್ಯವಸ್ಥಾಪಕ ಡಾ.ಸಂತೋಷ್, ಡಾ.ಪ್ರಕಾಶ್ ಬಳಗಲಿ, ಡಾ.ಮಣಿಕಂಠ, ವಿಸ್ತರಣಾಧಿಕಾರಿಗಳಾದ ಮಧುಶಂಕರ್, ಸಿ.ಎನ್., ನಾಗೇಂದ್ರ ಕುಮಾರ್, ಜಿ.ಉಷಾ, ಕಾರ್ಯದರ್ಶಿ ಹೆಚ್.ಎನ್.ಬೋರೇಗೌಡ, ಟೆಕ್ನಿಷಿಯನ್ ಆನಂದ್ ಸೇರಿದಂತೆ ಹಲವರಿದ್ದರು.



ಫಲಾನುಭವಿಗಳಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚೆಕ್‌ಗಳನ್ನು ವಿತರಿಸಿದರು.

ಸತ್ಯ ಸಾಯಿಬಾಬಾ ಜನ್ಮ ಶತಮಾನೋತ್ಸವ



ಸರ್ಕಾರಿ ಶಾಲೆಗೆ ಕಂಪ್ಯೂಟರ್ ಮತ್ತು ಪ್ರಿಂಟರ್ ವಿತರಿಸಲಾಯಿತು.

ಶ್ರೀರಂಗಪಟ್ಟಣ, ನ.27– ಸತ್ಯ ಸಾಯಿ ಬಾಬಾ ಜನ್ಮ ಶತಮಾನೋತ್ಸವದ ಅಂಗವಾಗಿ ಪಟ್ಟಣದ ಶ್ರೀಸಾಯಿ ಸೇವಾ ಅನಾಥಾಶ್ರಮದಿಂದ 100 ಬಡ ವಿದ್ಯಾರ್ಥಿಗಳ ಶಾಲಾ ಶುಲ್ಕ ಭರಿಸಲಾಗುವುದು ಎಂದು ಆಶ್ರಮದ ಮುಖ್ಯಸ್ಥ ಹೆಸ್.ಎಚ್.ಸಾಯಿಕುಮಾರ್ ತಿಳಿಸಿದರು.

ಪಟ್ಟಣದ ಶ್ರೀಸಾಯಿ ಸೇವಾ ಅನಾಥಾಶ್ರಮದಲ್ಲಿ ನಡೆದ ಸತ್ಯ ಸಾಯಿಬಾಬಾ ಅವರ ಜನ್ಮ ಶತಮಾನೋತ್ಸವದಲ್ಲಿ ಮಾತನಾಡಿದ ಅವರು, ಪಟ್ಟಣದ ಕಾವೇರಿ ವಿದ್ಯಾ ಶಾಲೆಯಲ್ಲಿ ಓದುತ್ತಿರುವ ವಿವಿಧ ಗ್ರಾಮಗಳ 100 ಬಡ ವಿದ್ಯಾರ್ಥಿಗಳ 1.50 ಲಕ್ಷ ರೂ. ಶುಲ್ಕ ಪಾವತಿಸಲಾಗುತ್ತದೆ. ಈ ಸಂಬಂಧ ಶಾಲೆ ಮುಖ್ಯ ಶಿಕ್ಷಕರಿಂದ ವಿದ್ಯಾರ್ಥಿಗಳ ಪಟ್ಟಿ ಪಡೆದಿದ್ದು, ಶುಲ್ಕ ಪಾವತಿಸಲಾಗುವುದು ಎಂದರು.

ಈ ವೇಳೆ 100 ವಿದ್ಯಾರ್ಥಿಗಳಿಗೆ ಬ್ಯಾಗ್ ಮತ್ತು ಲೇಖನ ಸಾಮಗ್ರಿ, ಅಂಗನವಾಡಿ ಕೇಂದ್ರಗಳ 50 ಮಕ್ಕಳಿಗೆ ಹಾಸಿಗೆ, ಪಟ್ಟಣದ ಪೂರ್ಣಯ್ಯ ಬೀದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕಂಪ್ಯೂಟರ್ ಮತ್ತು ಪ್ರಿಂಟರ್ ವಿತರಿಸಲಾಯಿತು.

ಜ್ಯೋತಿಷಿ ವಿ.ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ಸತ್ಯಸಾಯಿ ಬಾಬಾ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಅಭಿಷೇಕ ಮತ್ತು ಸಾಮೂಹಿಕ ಭಜನೆಗಳು ನಡೆದವು. ಲಕ್ಷ್ಮೀ ಹಲಗಪ್ಪ, ಸಾಯಿ ಗಣೇಶ್, ಡಾ.ಸಾಯಿವೀರ್, ಕಿಶೋರ್, ನಂದನ್ ಇದ್ದರು.

ಕೇಂದ್ರ ಸರ್ಕಾರ ರದ್ದುಗೊಳಿಸಿರುವ ಕಾರ್ಮಿಕ ಕಾಯ್ದೆಗಳ ಜಾರಿಗೆ ಒತ್ತಾಯಿಸಿ

ಕೃಷಿ ಕೂಲಿಕಾರರ ಸಂಘದಿಂದ ಪ್ರತಿಭಟನೆ

ಭಾರತೀನಗರ, ನ.27– ಕೇಂದ್ರ ಸರ್ಕಾರ ಜಾರಿಗೆ ತಂದಿರುವ 4 ಕಾಯ್ದೆಗಳನ್ನು ತಿದ್ದುಪಡಿ ಮಾಡಿ, ರದ್ದುಗೊಳಿಸಿರುವ 29 ಕಾರ್ಮಿಕ ಕಾಯ್ದೆಗಳನ್ನು ಪುನರ್ ಜಾರಿಗೊಳಿಸುವಂತೆ ಒತ್ತಾಯಿಸಿ ಭಾರತೀನಗರದಲ್ಲಿ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಭಾರತೀನಗರದ ಹಲಗೂರು ವೃತ್ತದಲ್ಲಿ ಜಮಾಯಿಸಿದ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಮೋದಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ರಾಜ್ಯಾಧ್ಯಕ್ಷ ಎಂ.ಪುಟ್ಟಮಾದು ಮಾತನಾಡಿ, ಈ ಹಿಂದೆ ಇದ್ದ ಕಾರ್ಮಿಕ ಕಾಯ್ದೆಗಳನ್ನು ಕೇಂದ್ರ ಸರ್ಕಾರ ರದ್ದು ಮಾಡಿ ದುಡಿಯುವ ವರ್ಗವನ್ನು ನಾಶ ಮಾಡಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ ಎಂದು ಹರಿಹಾಯ್ದರು.

ಈಗಿನ ಕಾಯ್ದೆಗಳಲ್ಲಿ ಚಳವಳಿ ಮಾಡುವ ಹಕ್ಕುಗಳು, ಸೌಲಭ್ಯಗಳನ್ನು ಕೇಳುವ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ. ಯಾವುದೇ ಕಂಪನಿಯಲ್ಲಿ 300ಕ್ಕಿಂತ ಹೆಚ್ಚು ಸದಸ್ಯರಿದ್ದರೆ ಮಾತ್ರ ಹಕ್ಕುಗಳನ್ನು ಕೇಳಬಹುದು ಎಂದು ಈ ಕಾಯ್ದೆ ಹೇಳುವ ಮೂಲಕ ಸುಮಾರು 18 ಸಾವಿರ ಕಂಪನಿಗಳಲ್ಲಿ ಕೆಲಸ ಮಾಡುವ 1 ಲಕ್ಷಕ್ಕೂ ಹೆಚ್ಚು ಕಾರ್ಮಿಕರನ್ನು ಕೇಂದ್ರ ಸರ್ಕಾರ ಬೀದಿಗೆ ತಳ್ಳಿದೆ. ಜೊತೆಗೆ ರೈತರು ಬೆಳೆದ ಬೆಳೆಗಳಿಗೆ ಸಮರ್ಪಕ ಬೆಲೆ ನಿಗದಿಗೆ ಕ್ರಮ ವಹಿಸದ ಪ್ರಧಾನಿ ಮೋದಿ ಅವರು ರಾಮಮಂದಿರದಲ್ಲಿ ಬಾವುಟ ಹಾರಿಸುವ ಮೂಲಕ ಜನರನ್ನು ಮರಳು ಮಾಡಲು ಹೊರಟಿದ್ದಾರೆ ಎಂದರು.

ನೆರೆಯ ನೇಪಾಳ, ಬಾಂಗ್ಲಾ, ಶ್ರೀಲಂಕಾದಲ್ಲಿ ಯುವಕರು, ಕಾರ್ಮಿಕರು, ರೈತರು ನಡೆಸಿದ ಧಂಗೆಯಿಂದ ಅಧಿಕಾರದಲ್ಲಿದ್ದ ಸರ್ಕಾರಗಳನ್ನು ಕೆಳಗಿಳಿಸಿ ಬೇರೆ ಸರ್ಕಾರವನ್ನು ಅಧಿಕಾರಕ್ಕೆ ತರುವಲ್ಲಿ ಸಫಲರಾಗಿದ್ದಾರೆ. ಅದೇ ರೀತಿ ಆಗದಂತೆ ಮೋದಿ ಸರ್ಕಾರ ಹೆಜ್ಜೆ ಇಡಬೇಕಿದೆ ಎಂದರು.

ಪ್ರತಿಭಟನೆಯಲ್ಲಿ ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಬಿ.ಎಂ.ಶಿವಮಲ್ಲಯ್ಯ, ಪ್ರಧಾನ ಕಾರ್ಯದರ್ಶಿ ಬಿ.ಹನುಮೇಶ್, ಜಿಲ್ಲಾ ಸಹ ಕಾರ್ಯದರ್ಶಿ ಅನಿತಾ, ಮಳವಳ್ಳಿ ತಾಲೂಕು ಅಧ್ಯಕ್ಷ ಟಿ.ಎಚ್.ಆನಂದ್, ತಾಲೂಕು ಕಾರ್ಯದರ್ಶಿ ಶೋಭಾ, ಅಮಾಸಯ್ಯ, ಜಿಲ್ಲಾ ಮುಖಂಡರಾದ ಜ್ಯೋತಿ, ನಾಗಮ್ಮ, ಮಹಲಿಂಗಯ್ಯ, ಪಾಪಣ್ಣ, ಜಯಮ್ಮ, ವಿಷಕಂಠೇಗೌಡ, ಈರೇಗೌಡ ಸೇರಿದಂತೆ ಹಲವರಿದ್ದರು.



ಭಾರತೀನಗರದಲ್ಲಿ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತೈಲೂರು ಬಳಿ ಕಾಡಾನೆಗಳು ಪ್ರತ್ಯಕ್ಷ

ಮದ್ದೂರು, ನ.27– ತಾಲೂಕಿನ ತೈಲೂರಿನ ಕೆರೆ ಬಳಿ 2 ಕಾಡಾನೆಗಳು ಪತ್ಯಕ್ಷವಾಗಿದೆ.

ಗ್ರಾಮದ ಕೆರೆ ಬಳಿಯೇ ಬೀಡು ಬಿಟ್ಟಿರುವ ಕಾಡಾನೆಗಳು ರೈತರು ಹಾಗೂ ಸಾರ್ವಜನಿಕರಲ್ಲಿ ಆತಂಕ ಮೂಡಿಸಿವೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿರುವ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿ ಕಾಡಾನೆಗಳನ್ನು ಕಾಡಿಗಟ್ಟಲು ಕ್ರಮ ಕೈಗೊಂಡಿದ್ದಾರೆ. ಇನ್ನೂ ಕಾಡಾನೆಗಳು ಬೀಡು ಬಿಟ್ಟಿರುವ ವಿಷಯ ತಿಳಿದು ಅವುಗಳನ್ನು ನೋಡಲು ಸುತ್ತಮುತ್ತಲ ಗ್ರಾಮಸ್ಥರು ತಂಡೋಪತಂಡವಾಗಿ ಆಗಮಿಸಿ ತಮ್ಮ ಮೊಬೈಲ್‌ನಲ್ಲಿ ಕಾಡಾನೆಗಳನ್ನು ಸೆರೆ ಹಿಡಿಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಇಂದು ಅರಸು ಜ್ಞಾನ ಕೇಂದ್ರ ಉದ್ಘಾಟನೆ

ಮಂಡ್ಯ, ನ.27– ಜಿಲ್ಲಾಡಳಿತ, ಜಿಪಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಅರಸು ಜ್ಞಾನ ಕೇಂದ್ರ ಉದ್ಘಾಟನೆ (ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ–ಮಾರ್ಗದರ್ಶನ ಕಾರ್ಯಾಗಾರ) ಕಾರ್ಯಕ್ರಮ ನ.28 ರಂದು ಬೆಳಗ್ಗೆ 10.30ಕ್ಕೆ ಜಿಪಂ ಎದುರಿನ ಡಿ. ದೇವರಾಜು ಅರಸು ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕುಮಾರ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಪಂ ಸಿಇಓ ಕೆ.ಆರ್.ನಂದಿನಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಭಾಗವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಯಾಗಿ ಹುಣಸೂರು ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಪಿ.ಎನ್.ಹೇಮಚಂದ್ರ ಭಾಗವಹಿಸಲಿದ್ದಾರೆ.

ಪಕ್ಷ ವಿರೋಧಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ

ಕೆ.ಆರ್.ಪೇಟೆ, ನ.27– ಜೆಡಿಎಸ್ ಮುಖಂಡರೆಂದು ತಾಲೂಕಿನಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ತಾಲೂಕು ಜೆಡಿಎಸ್‌ನ ಹಲವು ಮುಖಂಡರು ಜೆಡಿಎಸ್ ವರಿಷ್ಠರು ಹಾಗೂ ಶಾಸಕ ಹೆಚ್.ಟಿ.ಮಂಜು ಅವರನ್ನು ಒತ್ತಾಯಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಡಿಎಸ್ ಮುಖಂಡರು, ಶಾಸಕ ಹೆಚ್.ಟಿ.ಮಂಜು ಅವರು ಕೂಡಲೇ ಕಾರ್ಯಕರ್ತರ ಸಭೆ ಕರೆದು ಇತ್ತೀಚೆಗೆ ನಡೆದ ಪಕ್ಷ ಬೆಳ್ಳಿ ಹಬ್ಬ ಸಮಾರಂಭದಲ್ಲಿ ಕೆಲವರು ಜೆಡಿಎಸ್ ಮುಖಂಡರೆಂದು ಹೇಳಿಕೊಂಡು ಭಾಗವಹಿಸಿದ್ದವರು ಡಿಸಿಸಿ ಬ್ಯಾಂಕ್, ಮನ್‌ಮುಲ್ ಹಾಗೂ ಟಿಎಪಿಸಿಎಂಎಸ್ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಕೆಲಸ ಮಾಡಿ ಪಕ್ಷ ವಿರೋಧಿ ಚಟುವಟಿಕೆ ಕೈಗೊಂಡು ಜೆಡಿಎಸ್ ಅಭ್ಯರ್ಥಿಗಳ ಸೋಲಿಗೆ ಕಾರಣವಾಗಿದ್ದಾರೆ. ಹೀಗಾಗಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಪಕ್ಷದಿಂದ ಉಚ್ಚಾಟಿಸಿ ಗೊಂದಲಕ್ಕೆ ತೆರೆ ಎಳೆಯಬೇಕು. ಟಿಎಪಿಸಿಎಂಎಸ್ ಹಾಗೂ ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಪಕ್ಷದ ವಿರೋಧವಾಗಿ ಕೆಲಸ ಮಾಡಿರುವುದಕ್ಕೆ ಫೋಟೋ, ವೀಡಿಯೊ ದಾಖಲೆಗಳಿದ್ದು, ಅದರ ಆಧಾರದ ಮೇಲೆ ಯಾವುದೇ ಒತ್ತಡಕ್ಕೆ ಮಣಿಯದೇ ಮೃದು ಧೋರಣೆ ತಾಳದೇ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು. ಇಲ್ಲದಿದ್ದರೇ ಪಕ್ಷದೊಳಗೆ ಇದ್ದು, ಮುಂಬರುವ ಜಿಪಂ, ತಾಪಂ, ಗ್ರಾಪಂ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಸೋಲಿಗೆ ಸಂಚು ರೂಪಿಸುತ್ತಾರೆ. ಹೀಗಾಗಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗಂಜಿಗೆರೆ ಸೊಸೈಟಿ ಅಧ್ಯಕ್ಷ ಬಿ.ನಾಗೇಶ್, ದಿಶಾ ಸಮಿತಿ ಸದಸ್ಯ ನರಸನಾಯಕ್, ತಾಲೂಕು ಜೆಡಿಎಸ್ ರೈತ ಮೋರ್ಚಾ ಅಧ್ಯಕ್ಷ ಹುಲ್ಲೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ರಾಮಚಂದ್ರನ್, ತಾಪಂ ಮಾಜಿ ಸದಸ್ಯ ಕೃಷ್ಣೇಗೌಡ, ಹೆಳವೇಗೌಡ, ಸೋಮಶೇಖರ್, ಮಾಂಬಳ್ಳಿ ಸೊಸೈಟಿ ಅಧ್ಯಕ್ಷ ಕಾಂತರಾಜು, ಜೆಡಿಎಸ್ ಮುಖಂಡರಾದ ನಂಜೇಗೌಡ, ಆಲಂಬಾಡಿಕಾವಲು ಸೊಸೈಟಿ ನಿರ್ದೇಶಕ ಕರಿಶೆಟ್ಟಿ, ಹರೀಶ್, ನಾಗೇಶ್, ರಾಮಕೃಷ್ಣೇಗೌಡ, ರಾಮೇಗೌಡ, ದೀಪು ಸೇರಿದಂತೆ ಇತರರಿದ್ದರು.



ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರು ಮಾತನಾಡಿದರು.

ಕೃಷಿ ಪ್ರವಾಸೋದ್ಯಮ ತರಬೇತಿ

ಮಂಡ್ಯ, ನ.27– ಕೃಷಿ ಇಲಾಖೆಯ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ವಿ.ಸಿ.ಫಾರಂ, ಮಂಡ್ಯ ವತಿಯಿಂದ 2025–26ನೇ ಸಾಲಿನ ಮಂಡ್ಯ ಜಿಲ್ಲೆ ರೈತರಿಗೆ ಕೃಷಿ ಪ್ರವಾಸೋದ್ಯಮ ಕುರಿತು 3 ದಿನಗಳ ತರಬೇತಿಯನ್ನು ಡಿ.3 ರಿಂದ 5ರವರೆಗೆ ಆಯೋಜಿಸಲಾಗಿದೆ.

ತರಬೇತಿಯು 45 ರೈತರು, ರೈತ ಮಹಿಳೆಯರಿಗೆ ಆಯೋಜಿಸಲಾಗಿದ್ದು, ಆಸಕ್ತ ರೈತರು ಡಿ.1ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಮೊದಲು ನೋಂದಣಿಯಾದವರಿಗೆ ಆದ್ಯತೆ ನೀಡಲಾಗುವುದು. ಅಲ್ಲದೇ ತರಬೇತಿಯಲ್ಲಿ ಭಾಗವಹಿಸುವ ರೈತರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ.8095969769, 8762903395 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಐವರಿಗೆ ವರಿಷ್ಠರ ಬುಲಾವ್

ಮಿಷ್ಠಗೆ ಮುಜುಗರ: ಮುಖ್ಯಮಂತ್ರಿಗಾದಿಗಾಗಿ ಎರಡು ಬಣಗಳ ನಡುವೆ ಜಟಾಪಟಿ ಬೀದಿಗೆ ಬರುತ್ತಿದ್ದಂತೆ ಕಾಂಗ್ರೆಸ್ ವರಿಷ್ಠರಿಂದ ಇದೇ ಮೊದಲ ಬಾರಿಗೆ ಬಹಿರಂಗವಾಗಿ ಹೇಳಿಕೆ ಹೊರಬಿದ್ದಿದೆ.

ಕಾಂಗ್ರೆಸ್ ಹೈಕಮಾಂಡ್ ಏಕಾಂಗಿಯಲ್ಲ, ಅದೊಂದು ತಂಡ. ಸಮಸ್ಯೆಗಳು ಎದುರಾದಾಗ ತಂಡದ ಪ್ರಮುಖರು ಕುಳಿತು ಮಾತನಾಡಿ ನಂತರ ಸಂಬಂಧಪಟ್ಟವರನ್ನು ದೆಹಲಿಗೆ ಕರೆಸಿ ಮಾತನಾಡುವುದು ವಾಡಿಕೆ.

ಇದೀಗ ಕರ್ನಾಟಕದಲ್ಲಿ ಅಧಿಕಾರ ಹಂಚಿಕೆ ಸಮಸ್ಯೆ ಎದುರಾಗಿದೆ. ರಾಹುಲ್ ಗಾಂಧಿ ಸಮ್ಮುಖದಲ್ಲೇ ಉಭಯ ನಾಯಕರನ್ನು ಕರೆಸಿ, ಚರ್ಚಿಸಿ ಹೈಕಮಾಂಡ್ ತನ್ನ ನಿರ್ಧಾರ ಪ್ರಕಟಿಸಲಿದೆ. ಇದಕ್ಕೂ ಮುನ್ನ ನಾನು ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಜೊತೆಯೂ ಚರ್ಚೆ ಮಾಡುತ್ತೇನೆ. ಆ ನಂತರ ರಾಹುಲ್ ಉಪಸ್ಥಿತಿಯಲ್ಲಿ ತೀರ್ಮಾನ ಕೈಗೊಳ್ಳುತ್ತೇವೆ. ಇವೆಲ್ಲವೂ ಇನ್ನು ಎರಡು–ಮೂರು ದಿನಗಳಲ್ಲಿ ಮುಗಿಯಲಿದೆ ಎಂದಿದ್ದರು.

ಅಧಿಕಾರಕ್ಕೆ ಹಗ್ಗ–ಜಗ್ಗಾಟ: ಅಧಿಕಾರ ಹಸ್ತಾಂತರ ಕುರಿತಂತೆ ಕಳೆದ ಒಂದು ವಾರದಿಂದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಡುವೆ ಕುರ್ಚಿಗಾಗಿ ಹಗ್ಗ–ಜಗ್ಗಾಟ ನಡೆದಿದೆ. ಶಿವಕುಮಾರ್ ಪರ ಕೆಲವು ಶಾಸಕರು ದೆಹಲಿ ಪ್ರವಾಸ ಕೈಗೊಂಡು ವರಿಷ್ಠರನ್ನು ಭೇಟಿ ಮಾಡಿ ಈ ಹಿಂದೆ ಕೊಟ್ಟ ಮಾತಿನಂತೆ ಅಧಿಕಾರ ಹಸ್ತಾಂತರ ಮಾಡಿಸಿ ಎಂದು ಮನವಿ ಮಾಡಿದ್ದಾರೆ. ಶಾಸಕರ ದಂಡು ದೆಹಲಿಗೆ ತೆರಳಿ ವರಿಷ್ಠರೊಂದಿಗೆ ಸಮಾಲೋಚನೆ ಮಾಡುವ ಸಮಯದಲ್ಲೇ ಎಐಸಿಸಿ ಅಧ್ಯಕ್ಷ ಖರ್ಗೆ ಎರಡು ಬಾರಿ ರಾಜ್ಯಕ್ಕೆ ಭೇಟಿ ನೀಡಿ ಹಿಂತಿರುಗಿದ್ದಾರೆ.

ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಪ್ರತ್ಯೇಕವಾಗಿ ಖರ್ಗೆ ಭೇಟಿ ಮಾಡಿ ಸಮಾಲೋಚನೆ ನಡೆಸಿದ್ದಾರೆ. ಖರ್ಗೆ ರಾಜ್ಯದಲ್ಲಿ ಕೆಲವು ನಾಯಕರ ಜೊತೆ ಸಮಾಲೋಚನೆ ಮಾಡುವ ಸಂದರ್ಭದಲ್ಲೇ ರಾಹುಲ್ ಗಾಂಧಿ ಕರ್ನಾಟಕ ಕಾಂಗ್ರೆಸ್‌ನ ನಿಷ್ಠಾವಂತ ಸಚಿವರು ಮತ್ತು ಮುಖಂಡರನ್ನು ದೆಹಲಿಗೆ ಕರೆಸಿಕೊಂಡು ಚರ್ಚೆ ಮಾಡಿದ್ದಾರೆ. ಈ ಎಲ್ಲಾ ಬೆಳವಣಿಗೆ ನಡೆಯುತ್ತಿದ್ದಂತೆ ಶಿವಕುಮಾರ್ ಬಹಿರಂಗವಾಗೇ, ಕೊಟ್ಟ ಭರವಸೆ ಈಡೇರಿಸಬೇಕೆಂದು ಬಿಗಿ ಪಟ್ಟು ಹಿಡಿದಿದ್ದಾರೆ.

ವ್ಯಕ್ತಿಗೆ ಚಾಕುವಿನಿಂದ ಇರಿತ

ಗಾಯಾಳು ಸಾಬೀರ್ ಸದ್ಯಕ್ಕೆ ಪ್ರಾಣಾಪಾಯದಿಂದ ಪಾರಾಗಿದ್ದು, ಸ್ಕ್ಯಾನಿಂಗ್ ಮಾಡಿದ ನಂತರ ಆತನ ಗಾಯದ ಪ್ರಮಾಣ ನಿಖರವಾಗಿ ಗೊತ್ತಾಗಲಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಉದಯಗಿರಿ ಠಾಣೆ ವ್ಯಾಪ್ತಿ ಹಾಗೂ ರಾಜೀವ್‌ನಗರ ಮುಂತಾದೆಡೆ ಗಾಂಜಾ ಸೇರಿದಂತೆ ಮಾದಕ ವಸ್ತುಗಳ ಮಾರಾಟ ಹಾಗೂ ಸೇವನೆ ಯಥೇಚ್ಛವಾಗಿ ನಡೆಯುತ್ತಿದ್ದು, ಈ ಕಾರಣದಿಂದಲೇ ಇಂತಹ ಘಟನೆಗಳು ನಡೆಯುತ್ತಿವೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಉದಯಗಿರಿ ಠಾಣೆ ವ್ಯಾಪ್ತಿಯ ಶಾಂತಿನಗರ, ಗೌಸಿಯಾನಗರ, ಅಜೀಜ್ ಸೇಠ್ ಜೋಡಿ ರಸ್ತೆ, ರಿಂಗ್ ರಸ್ತೆಯ ಕೆಲವೆಡೆ ಸಂಜೆಯಾಗುತ್ತಲೇ ಮದ್ಯ ವ್ಯಸನಿಗಳ ಆರ್ಭಟ ಜೋರಾಗುತ್ತದೆ. ಈ ಭಾಗಗಳಲ್ಲಿ ಕೆಲ ಅಂಗಡಿ–ಮುಂಗಟ್ಟುಗಳು ರಾತ್ರಿಯಿಡೀ ತೆರೆದಿದ್ದು, ಅವುಗಳೇ ಮದ್ಯ ವ್ಯಸನಿಗಳ ಅಡ್ಡೆಯಾಗಿ ಪರಿವರ್ತನೆಯಾಗುತ್ತಿವೆ. ಈ ವಿಚಾರ ಗೊತ್ತಿದ್ದರೂ, ಪೊಲೀಸರು ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಆರೋಪಗಳು ವ್ಯಾಪಕವಾಗಿ ಕೇಳಿಬರುತ್ತಿವೆ.

ದಸರಾ ಮುಗಿಯುತ್ತಿದ್ದಂತೆಯೇ ಮೈಸೂರು ನಗರ ಪೊಲೀಸ್ ಆಯುಕ್ತರ ನಿರ್ದೇಶನದ ಮೇರೆಗೆ ಪೊಲೀಸರು ಪ್ರತಿ ಠಾಣಾ ವ್ಯಾಪ್ತಿಯಲ್ಲೂ ಬಿರುಸಿನ ಕಾರ್ಯಾಚರಣೆ ನಡೆಸಿ ಮಾದಕ ವಸ್ತು ಮಾರಾಟ ಮಾಡುವವರು ಹಾಗೂ ಸೇವಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರು. ವಿಚಿತ್ರವೆಂದರೆ ಆ ಸಂದರ್ಭದಲ್ಲೂ ಈ ಭಾಗಗಳಲ್ಲಿ ಪೊಲೀಸರ ಕಾರ್ಯಾಚರಣೆ ನಡೆದಿರಲಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ.

ಇತ್ತೀಚೆಗೆ ನಗರ ಪೊಲೀಸ್ ಆಯುಕ್ತರು ರೌಡಿ ಪ್ರತಿಬಂಧಕ ದಳವನ್ನು ರಚಿಸಿದ್ದಾರೆ. ಆದರೂ ಕೂಡ ಮದ್ಯ ವ್ಯಸನಿಗಳಾದ ಪುಂಡರು ಅಲ್ಲಲ್ಲಿ ಇಂತಹ ಕೃತ್ಯಗಳಲ್ಲಿ ತೊಡಗಿರುವುದು ಮೈಸೂರು ನಗರ ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

ಲಕ್ಷ ಕಂಠ ಗೀತಾ ಪಾರಾಯಣಕ್ಕೆ ಸಿದ್ಧತೆ

ಮತ್ತು ಚಿನ್ನದ ಹೊದಿಕೆಗಳ ಉದ್ಘಾಟನೆ ನಡೆಯಲಿದೆ. ನಾಳೆ ಮಧ್ಯಾಹ್ನ 3 ಗಂಟೆಯವರೆಗೆ ಮಠದ ಆವರಣಕ್ಕೆ ಸಾರ್ವಜನಿಕರ ಪ್ರವೇಶವನ್ನು ಸೀಮಿತಗೊಳಿಸಲಾಗುತ್ತದೆ. ಮುಖ್ಯ ಮಾರ್ಗದಲ್ಲಿ ಹಲವಾರು ಅಂಗಡಿಗಳು ಬೆಳಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಮುಚ್ಚಲ್ಪಡುತ್ತವೆ. ಮಠದ ಸುತ್ತಲಿನ 5 ಕಿ.ಮೀ ವಲಯವನ್ನು ಡ್ರೋನ್ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ ಮತ್ತು ಸ್ವಯಂಸೇವಕರು ಜನಸಂದಣಿ ನಿಯಂತ್ರಣವನ್ನು ನಿರ್ವಹಿಸುತ್ತಾರೆ.

ಪೊಲೀಸ್ ಬಿಗಿ ಭದ್ರತೆ: ಭದ್ರತಾ ವ್ಯವಸ್ಥೆಗೆ ದಕ್ಷಿಣ ಕನ್ನಡ, ಉತ್ತರ ಕನ್ನಡ, ದಾವಣಗೆರೆ, ಮೈಸೂರು, ಬೆಂಗಳೂರು ಶಿವಮೊಗ್ಗ ಜಿಲ್ಲೆಗಳಿಂದ 3000ಕ್ಕೂ ಅಧಿಕ ಪೊಲೀಸರ ನಿಯೋಜನೆ ಮಾಡಲಾಗಿದ್ದು, 10 ಎಸ್ಪಿ, 27 ಡಿವೈಎಸ್ಪಿ, 49 ಇನ್ಸ್‌ಪೆಕ್ಟರ್, 127 ಎಸ್‌ಐ, 232 ಎಎಸ್‌ಐ, 1608 ಪಿಸಿ, 39 ಡಬ್ಲ್ಯೂಪಿಸಿ , 48 ಬಿಡಿಡಿಎಸ್ ಟೀಂ, ಆರು ಕೆಎಸ್‌ಆರ್‌ಪಿ, ಆರು ಕ್ಯೂಆರ್‌ಟಿ ಟೀಮ್ ನಿಯೋಜನೆ ಮಾಡಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಸಿಎಂ, ಡಿಸಿಎಂ ವಾಗ್ದಾನ ಸದ್ದು!

ಎಂಬ ಸಾಲುಗಳ ಮೂಲಕ ತಮ್ಮ ಹಕ್ಕು ಪ್ರತಿಪಾದಿಸಿದ್ದರು. ಕಾಂಗ್ರೆಸ್ ಸರ್ಕಾರದ ಆಡಳಿತ ಎರಡೂವರೆ ವರ್ಷ ಪೂರೈಸುತ್ತಿದ್ದಂತೆ ಅಧಿಕಾರ ಹಸ್ತಾಂತರ ಹಾಗೂ ಸಂಪುಟ ಪುನರ್ ರಚನೆ ಬಗ್ಗೆ ಎರಡು ಬಣಗಳ ನಡುವಿನ ಜಟಾಪಟಿ ತೀವ್ರವಾಗಿರುವ ಸಂದರ್ಭದಲ್ಲೇ ಡಿಕೆಶಿ ಅವರ ಪೋಸ್ಟ್ ಕಾಣಿಸಿಕೊಂಡಿದ್ದು, ಸಂಚಲನ ಸೃಷ್ಟಿಸಿತ್ತು. ಬಳಿಕ ಈ ಪೋಸ್ಟ್ ನಾನು ಮಾಡಿಲ್ಲ ಎಂದು ಡಿಕೆಶಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದರು.

ಸಿದ್ದರಾಮಯ್ಯ ಪೋಸ್ಟ್: ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಜೆ ಹಂಚಿಕೊಂಡ ಪೋಸ್ಟ್‌ನಲ್ಲಿ ಸರ್ಕಾರದ ಸಾಧನೆಗಳನ್ನು ತಿಳಿಸುವ ನೆಪದಲ್ಲಿ ಡಿಕೆಶಿಗೆ ಪರೋಕ್ಷವಾಗಿ ಕೌಂಟರ್ ನೀಡಿದ್ದಾರೆ. 'ಕರ್ನಾಟಕಕ್ಕೆ ನಾವು ನೀಡಿದ ಮಾತು ಕೇವಲ ಘೋಷಣೆಯಲ್ಲ, ಅದುವೇ ನಮ್ಮ ಜಗತ್ತು(our word to karnataka is not a slogan, it means the world to us)' ಎಂದು ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಒಂದು ಮಾತು ಜಗತ್ತಿಗೆ ಉತ್ತಮವಾಗದ ಹೊರತು ಅದು ಶಕ್ತಿಯಲ್ಲ. ಶಕ್ತಿ ಯೋಜನೆ ರಾಜ್ಯದ ಮಹಿಳೆಯರಿಗೆ 600 ಕೋಟಿ ಉಚಿತ ಟ್ರಿಪ್ ಕಲ್ಪಿಸಿರುವುದನ್ನು ಹೇಳಲು ಹೆಮ್ಮೆಯಾಗು ತ್ತದೆ. ಸರ್ಕಾರ ರಚನೆಯಾದ ಮೊದಲ ತಿಂಗಳಿಂದಲೇ ನಾವು ನಮ್ಮ ಗ್ಯಾರಂಟಿಯನ್ನು ಕಾರ್ಯಗತಗೊಳಿಸಿದ್ದೇವೆ. ಕೇವಲ ಮಾತಿನಲ್ಲಿ ಅಲ್ಲ, ಅದನ್ನು ಕಾರ್ಯಗತಗೊಳಿಸಿದ್ದೇವೆ ಎಂದು ಐದು ಗ್ಯಾರಂಟಿ ಯೋಜನೆಗಳ ಸಾಧನೆಯನ್ನು ಅಂಕಿ–ಅಂಶಗಳೊಂದಿಗೆ ವಿವರಿಸಿದ್ದಾರೆ.

ಮುಂದುವರೆಯುವ ವಿಶ್ವಾಸ: ಪಂಚ ಗ್ಯಾರಂಟಿಯಿಂದ ಫಲಾನುಭವಿಗಳು ಪಡೆಯುತ್ತಿರುವ ಅನುಕೂಲಗಳ ಬಗ್ಗೆ ಉಲ್ಲೇಖಿಸಿರುವುದರ ಜೊತೆಗೆ ನನ್ನ ಮೊದಲ ಅವಧಿಯಲ್ಲಿ(2013–18) 165 ಭರವಸೆಗಳ ಪೈಕಿ 157ನ್ನು ಈಡೇರಿಸಿ ಶೇ.95ರಷ್ಟು ಸಾಧನೆ ಮಾಡಿದ್ದೇವೆ. ಪ್ರಸಕ್ತ ಅವಧಿಯಲ್ಲಿ 593 ಭರವಸೆಗಳ ಪೈಕಿ 243ಕ್ಕೂ ಹೆಚ್ಚು ಭರವಸೆಗಳನ್ನು ಈಗಾಗಲೇ ಈಡೇರಿಸಲಾಗಿದೆ. ಉಳಿದ ಭರವಸೆಗಳನ್ನು ಬದ್ಧತೆ, ವಿಶ್ವಾಸಾರ್ಹತೆ ಮತ್ತು ಜಾಗರೂಕತೆಯಿಂದ ಪೂರೈಸುತ್ತೇವೆ. ಕರ್ನಾಟಕ ಜನರು ನೀಡಿದ ಜನಾದೇಶ ಕ್ಷಣಿಕ ಮಾತ್ರವಲ್ಲ, ಅದು ಪೂರ್ಣ ಐದು ವರ್ಷದ ಜವಾಬ್ದಾರಿ. ನಾನೂ ಸೇರಿದಂತೆ ಕಾಂಗ್ರೆಸ್ ಪಕ್ಷ ನಮ್ಮ ಜನರಿಗಾಗಿ ಸಹಾನುಭೂತಿ, ಸ್ಥಿರತೆ ಮತ್ತು ಧೈರ್ಯದಿಂದ ನುಡಿದಂತೆ ನಡೆಯುತ್ತಿದ್ದೇವೆ. ನಾವು ಕರ್ನಾಟಕಕ್ಕೆ ಕೊಟ್ಟ ಮಾತು ಬರೇ ಘೋಷಣೆ ಅಲ್ಲ, ಅದೇ ನಮಗೆ ಜಗತ್ತಾಗಿದೆ ಎಂದು ತಿಳಿಸಿದ್ದಾರೆ.

ಹೆಗಲ ಮೇಲೆ ಕೈ ಇಟ್ಟು ಹೇಳಿದ್ದರೆ?: ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವೆ ಮುಖ್ಯಮಂತ್ರಿಗಾದಿಗೆ ಭಾರೀ ಪೈಪೋಟಿ ನಡೆದಿತ್ತು. ಬಳಿಕ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್, ಸಂಸದರಾಗಿದ್ದ ಡಿ.ಕೆ.ಸುರೇಶ್ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಸಮ್ಮುಖದಲ್ಲೇ ಉಭಯ ನಾಯಕರು ತಲಾ 30 ತಿಂಗಳ ಆಡಳಿತ ಸೂತ್ರಕ್ಕೆ ಒಪ್ಪಿಕೊಂಡಿದ್ದರಂತೆ. ಸೂತ್ರ ಜಾರಿ ನಂತರ ಸಭೆಯಲ್ಲೇ ಇದ್ದ ಸುರೇಶ್, ಇದನ್ನು ಮಾಧ್ಯಮದ ಮುಂದೆ ಬಹಿರಂಗಪಡಿಸೋಣ ಎಂದಿದ್ದರಂತೆ. ಆಗ ಸಿದ್ದರಾಮಯ್ಯ ಅವರು ಸುರೇಶ್ ಹೆಗಲ ಮೇಲೆ ಕೈಹಾಕಿ, ಇಂತಹ ವಿಷಯಗಳನ್ನೆಲ್ಲಾ ಪತ್ರಿಕೆಗಳ ಮುಂದೆ ತರಬಾರದು. ನಾನು, ನಿನಗೆ ಮಾತು ಕೊಡುತ್ತೇನೆ. 30 ತಿಂಗಳ ಆಡಳಿತ ಮುಗಿಯುವುದಕ್ಕೆ ಒಂದು ವಾರದ ಮುಂಚೆಯೇ ಕುರ್ಚಿ ಬಿಟ್ಟು ಹೋಗುತ್ತೇನೆ ಎಂದು ಎಲ್ಲರ ಸಮ್ಮುಖದಲ್ಲೇ ಭರವಸೆ ನೀಡಿದ್ದರಂತೆ. ನ.20ಕ್ಕೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಪೂರ್ಣಗೊಳ್ಳುತ್ತಿದ್ದಂತೆ, ಡಿ.ಕೆ.ಸುರೇಶ್ ಸುದ್ದಿಗೋಷ್ಠಿಯಲ್ಲಿ ಸೂಚ್ಯವಾಗಿ ಇದನ್ನು ಪ್ರಾಸಂಗಿಕವಾಗಿ ನೆನಪಿಸಿದ್ದರು. ಇದರ ಬೆನ್ನಲ್ಲೇ ಅಧಿಕಾರ ಹಸ್ತಾಂತರದ ಜಟಾಪಟಿ ಬಿರುಸು ಪಡೆದು, ಇದೀಗ ಕುತೂಹಲದ ಘಟ್ಟ ತಲುಪಿದೆ.

ಸಿದ್ದರಾಮಯ್ಯ ಹಿಂದಿದೆ ಅಹಿಂದ

ಕ್ಷಮೆಯಾಗಬಹುದು ಎಂದು ಪತ್ರದಲ್ಲಿ ಅಹಿಂದ ನಾಯಕರು ಎಚ್ಚರಿಸಿದ್ದಾರೆ.

ಸಿಎಂ ಅಧಿಕಾರ ಮಿತಿಗೆ ಒಪ್ಪಲ್ಲ: ಈ ಮಧ್ಯೆ ಇಂದು (ಗುರುವಾರ) ಸಂಜೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿರುವ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ ಅವರು, ಅಹಿಂದ ವರ್ಗದವರು ಕಾಂಗ್ರೆಸ್‌ಗೆ ಮತ್ತು ಲಿಂಗಾಯತರು ಬಿಜೆಪಿಗೆ ಮತ ಹಾಕಿದ್ದಾರೆ. ಹೀಗಿರುವಾಗ ನನ್ನಿಂದ ಸರ್ಕಾರ ಬಂತು, ನಮ್ಮ ನಾಯಕರೇ ಸರ್ಕಾರ ಅಧಿಕಾರಕ್ಕೆ ತಂದಿದ್ದಾರೆ ಎಂದು ಹೇಳುವುದು ತಪ್ಪು ಎಂದಿದ್ದಾರೆ. ಸದ್ಯ ಉಂಟಾಗಿರುವ ಗೊಂದಲಗಳಿಗೆ ಕಾರಣ ಏನು ಅನ್ನೋದು ನಮಗೆ ಅರಿವಿಲ್ಲ. ಆದರೆ ಈಗ ನಡೆಯುತ್ತಿರುವ ವಿಷಯದಲ್ಲಿ ಸಂಘಟನೆಗಳು ಪಾಲ್ಗೊಳ್ಳುತ್ತಿರುವುದು ನಮಗೆ ಆತಂಕವಾಗಿದೆ ಎಂದಿದ್ದಾರೆ. ಅಹಿಂದ ವರ್ಗದ ಮತ ಪಡೆದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದು, ನಮ್ಮ ರಕ್ಷಿಸುವ ಮುಖ್ಯಮಂತ್ರಿಗಳ ಅಧಿಕಾರವನ್ನು ಸೀಮಿತಗೊಳಿಸಲು ಒಪ್ಪುವುದಿಲ್ಲ. ಎರಡೂವರೆ ವರ್ಷಕ್ಕೆ ಸಿದ್ದರಾಮಯ್ಯ ಅವರನ್ನು ಸೀಮಿತ ಮಾಡುವುದಕ್ಕೆ ನಮ್ಮ ವಿರೋಧವಿದೆ. ಹೈಕಮಾಂಡ್ ಆಗಲಿ, ಸಿಎಂ ಅಥವಾ ಡಿಸಿಎಂ ಅಧಿಕಾರ ಹಂಚಿಕೆಯ ಬಗ್ಗೆ ವಾಗ್ದಾನ ಮಾಡಿಲ್ಲ. ಕೆಲವರು ಅವರ ಹಿತಾಸಕ್ತಿಗಾಗಿ ಎರಡೂವರೆ ವರ್ಷ ಅಂತಾರೆ. ರಾಜ್ಯ ಒಕ್ಕಲಿಗರ ಸಂಘದಿಂದಲೂ ಸುದ್ದಿಗೋಷ್ಠಿ ನಡೆಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಡಿ.ಕೆ.ಶಿವಕುಮಾರ್ ಅವರ ಶ್ರಮಕ್ಕೆ ಕೂಲಿ ಕೇಳುತ್ತಿದ್ದಾರೆ. ಕೂಲಿ ಅಂದರೆ ಏನು? ಡಿಕೆಶಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಹುದ್ದೆ ನೀಡಲಾಗಿದೆ. ಹೀಗಾಗಿ ಯಾರೇ ಆದರೂ ಹೇಳಿಕೆ ನೀಡುವಾಗ ನೋಡಿ ಮಾತಾಡಬೇಕು ಎಂದು ರಾಮಚಂದ್ರಪ್ಪ ಎಚ್ಚರಿಸಿದ್ದಾರೆ.

ಮತ್ತೊಂದೆಡೆ ಸಿಎಂ ಸಿದ್ದರಾಮಯ್ಯ ಬಣದ ಕಾಂಗ್ರೆಸ್ ನಾಯಕರಿಂದಲೂ ಅಹಿಂದ ಅಸ್ತ್ರ ಪ್ರಯೋಗಕ್ಕೆ ತಯಾರಿ ನಡೆದಿದೆ ಎನ್ನಲಾಗಿದೆ. ಅಹಿಂದ ಅಸ್ತ್ರದ ಮೂಲಕವೇ ಹೈಕಮಾಂಡ್ ಮೇಲೆ ಒತ್ತಡ ಹೇರೋಣ. ಅಹಿಂದ ಬಿಟ್ಟರೆ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಭವಿಷ್ಯವಿಲ್ಲ ಎಂಬುದನ್ನು ವರಿಷ್ಠರಿಗೆ ಮನವರಿಕೆ ಮಾಡೋಣ ಎಂದು ಕೆಲ ಸಚಿವರು ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದಾರೆ ಎನ್ನಲಾಗಿದೆ.

ಡಿಕೆಶಿ ಬೆನ್ನಿಗೆ ಒಕ್ಕಲಿಗರ ಸಂಘ

ಮಕ್ಕಳ ವಸತಿ ನಿಲಯ ಸ್ಥಾಪಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ. ಕೃಷಿ ಕಾಲೇಜು, ಮತ್ತೊಂದು ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜು ಪ್ರಾರಂಭಿಸಲು ಮುಂದಾಗುತ್ತಿದ್ದೇವೆ ಎಂದರು.

ಸೇವಾ ಹಿರಿತನ ಪರಿಗಣಿಸಲಿ: ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ಲೋಕ ಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶಿವಕುಮಾರ್ ಸೇವಾ ಹಿರಿತನ ಪರಿಗಣಿಸಿ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದರು.

ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಟಿ. ಕೋನಪ ರೆಡ್ಡಿ ಮಾತನಾಡಿ, ಕಾಂಗ್ರೆಸ್ ಪಕ್ಷದ ಕಟ್ಟಾಳು, ಶಿಸ್ತಿನ ಸಿಪಾಯಿ ಆಗಿರುವ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು. ಹಳೆ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಲು ಒಕ್ಕಲಿಗ ಸಮುದಾಯ ಕಾರಣ, ಇಡೀ ಸಮುದಾಯ ಅವರ ಬೆಂಬಲಕ್ಕೆ ಇದೆ ಎಂದರು. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುವ ಸಿದ್ಧಾಂತವುಳ್ಳ ಪಕ್ಷ, ಹಾಗಾಗಿ ಮಾತಿಗೆ ತಪ್ಪುವುದಿಲ್ಲ ಎಂಬ ವಿಶ್ವಾಸವಿದೆ ಎಂದರು.

1033.60 ಕೋಟಿ ಪರಿಹಾರ

ಬೆಳೆ ನಷ್ಟದ ಗ್ರಾಮವಾರು ಪಟ್ಟಿ ಗ್ರಾಮ ಚಾವಡಿ ಹಾಗೂ ಆನ್‌ಲೈನ್‌ನಲ್ಲಿ ಪ್ರಕಟಿಸಿ, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಬಳಿಕ ನಷ್ಟ ಅನುಭವಿಸಿದ ರೈತರ ಪಟ್ಟಿ ಅಂತಿಮಗೊಳಿಸಿ ಇನ್ಪುಟ್ ಸಬ್ಸಿಡಿಯನ್ನು ನೇರವಾಗಿ ಕೃಷಿಕರ ಖಾತೆಗಳಿಗೆ ವರ್ಗಾಯಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ನ.17ರಂದು ಪ್ರಧಾನಮಂತ್ರಿ ಅವರನ್ನು ಭೇಟಿ ಮಾಡಿ, ಬೆಳೆ ಹಾನಿ ಇನ್ಪುಟ್ ಸಬ್ಸಿಡಿ ಪ್ರತಿಕ್ರಿಯೆ ಹಾಗೂ ಪರಿಹಾರ ಅಡಿಯಲ್ಲಿ 614.90 ಕೋಟಿ ರೂ. ಹಾಗೂ ಹಾನಿಗೊಳಗಾದ ಮೂಲಸೌಕರ್ಯಗಳ ದುರಸ್ತಿಗೆ ಪಿಡಿಎನ್‌ಎ ಅಡಿಯಲ್ಲಿ 1,521.67 ಕೋಟಿ ರೂ. ಪರಿಹಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು. ಬೆಳೆ ಹಾನಿ ಪರಿಶೀಲಿಸಲು ಕೇಂದ್ರ ಸರ್ಕಾರ ಅಂತರ ಸಚಿವಾಲಯ ತಂಡ ರಚಿಸಿದ್ದು, ಶೀಘ್ರದಲ್ಲೇ ಕರ್ನಾಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ ಎಂದರು.

'ಗ್ರೇಟರ್ ಮೈಸೂರು' ಯೋಜನೆ ಜಾರಿಗೆ

ಬೃಹತ್ ಮೈಸೂರು ಮಹಾನಗರ ಪಾಲಿಕೆ ಪ್ರದೇಶವೆಂದು ಘೋಷಿಸಲು ಸಚಿವ ಸಂಪುಟ ನಿರ್ಧರಿಸಿರುವುದು ಸ್ವಾಗತಾರ್ಹ. ಇದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಸಂಪುಟದ ಎಲ್ಲಾ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಇದು ಹೊರವಲಯ ಸೇರಿದಂತೆ ವ್ಯವಸ್ಥಿತ, ಯೋಜಿತ ಹಾಗೂ ಸುಸಜ್ಜಿತ ನಗರವಾಗಿ ಮೈಸೂರು ಹೊರಹೊಮ್ಮಲು ಸಹಕಾರಿ. ಮೈಸೂರು ಹೊರ ವಲಯದ ಅಭಿವೃದ್ಧಿಗೆ ವ್ಯವಸ್ಥಿತ ರೂಪ ನೀಡಲು ಬೃಹತ್ ಸ್ಥಳೀಯ ಸಂಸ್ಥೆಯೊಂದರ ಅಗತ್ಯತೆ ಇತ್ತು. ನಗರ, ಗ್ರಾಮೀಣ ಪ್ರದೇಶದ ನಡುವಿನ ತಾರತಮ್ಯ ನಿವಾರಿಸುವ ನಿಟ್ಟಿನಲ್ಲಿ ಈ ನಿರ್ಣಯ ಕೈಗೊಳ್ಳಬೇಕೆಂಬ ಒತ್ತಾಯ ಹಾಗೂ ಚರ್ಚೆ ಬಹಳ ವರ್ಷಗಳಿಂದ ನಡೆಯುತ್ತಿತ್ತು. ಮುಖ್ಯಮಂತ್ರಿಗಳು, ಸಚಿವ ಸಂಪುಟದ ಸದಸ್ಯರಿಗೆ ಮೈಸೂರು ನಗರದ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.



-ಹೆಚ್.ವಿ.ರಾಜೀವ್, ಕೆಪಿಸಿಸಿ ಸದಸ್ಯರು ಹಾಗೂ ಮುಡಾ ಮಾಜಿ ಅಧ್ಯಕ್ಷರು.

ಮತ್ತೊಂದು ಹೊರ ವರ್ತುಲ ರಸ್ತೆ ನಿರ್ಮಿಸುವ ಬಗ್ಗೆ ಯೋಜಿಸುವುದು. ಆಧುನಿಕ ತಂತ್ರಜ್ಞಾನವನ್ನು ಬಳಸಿ ಘನ ತ್ಯಾಜ್ಯ ಮತ್ತು ಕೈಗಾರಿಕಾ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು. ಉದ್ಯೋಗಗಳನ್ನು ಸೃಷ್ಟಿಸುವುದರ ಜೊತೆಗೆ ನಗರದ ಆರ್ಥಿಕತೆಯನ್ನು ಬಲಪಡಿಸುವುದು. ನಗರದ ಘನತೆ ಮತ್ತು ಸಂಸ್ಕೃತಿಗಳಿಗೆ ಧಕ್ಕೆ ಬಾರದಂತೆ ಯೋಜನೆಯನ್ನು ಕಾರ್ಯಗತಗೊಳಿಸುವುದು. ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಪೌರ ಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸುವುದು ಗ್ರೇಟರ್ ಮೈಸೂರಿನ ಪ್ರಮುಖ ಉದ್ದೇಶವಾಗಿದೆ.

ಉದ್ದೇಶಿತ ಗ್ರೇಟರ್ ಮೈಸೂರು ವ್ಯಾಪ್ತಿಗೆ ಹೂಟಗಳ್ಳಿ ನಗರಸಭೆ; ಶ್ರೀರಾಂಪುರ, ರಮ್ಮನಹಳ್ಳಿ, ಕಡಕೊಳ, ಬೋಗಾದಿ, ಪಪಂ; ಸಿದ್ದಲಿಂಗಪುರ, ಚಾಮುಂಡಿ ಬೆಟ್ಟ, ನಾಗನಹಳ್ಳಿ, ನಾಗವಾಲ, ಧನಗಳ್ಳಿ, ಬೀರಿಹುಂಡಿ ಹಾಗೂ ಆಲನಹಳ್ಳಿ ಗ್ರಾಮ ಪಂಚಾಯ್ತಿಗಳು ಬರಲಿವೆ.

ಸಾಲಿಗ್ರಾಮ ಪಟ್ಟಣ ಪಂಚಾಯ್ತಿ: ಕರ್ನಾಟಕದ 6 ಜಿಲ್ಲೆಗಳ 12 ಗ್ರಾಪಂಗಳನ್ನು ಪಪಂಗಳಾಗಿ ಮೇಲ್ದರ್ಜೆಗೇರಿಸಲು ಸಚಿವ ಸಂಪುಟ ಸಭೆ ಮಹತ್ವದ ನಿರ್ಧಾರ ಕೈಗೊಂಡಿದೆ. ಇದರಲ್ಲಿ ಮೈಸೂರು ಜಿಲ್ಲೆಯ ಸಾಲಿಗ್ರಾಮ ಪಂಚಾಯತಿಯನ್ನು ಮೇಲ್ದರ್ಜೆಗೇರಿಸಲಾಗುವುದು.

15ನೇ ಹಣಕಾಸು ಆಯೋಗದ ಅನುದಾನದಡಿ ರಾಜ್ಯದಾದ್ಯಂತ 114 ಆಯುಷ್ಮಾನ್ ಆರೋಗ್ಯ ಮಂದಿರಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಅಂದಾಜು ಮೊತ್ತ ರೂ.7410.00 ಲಕ್ಷಗಳಲ್ಲಿ ಕೆಟಿಟಿಪಿ ಕಾಯ್ದೆ ಹಾಗೂ ನಿಯಮಗಳನುಸಾರ ಟೆಂಡರ್ ಆಹ್ವಾನಿಸಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ಅನುಮೋದಿಸಿದೆ.

ಕಬಿನಿ ನಾಲೆ ಸುಧಾರಣಾ ಕಾಮಗಾರಿ: ಕಬಿನಿ ಎಡದಂಡೆ ನಾಲೆಯ ಡೀಪ್ಕಟ್ ಭಾಗಕ್ಕೆ ಕಟ್ ಆಂಡ್ ಕವರ್ ಹಾಗೂ ಅಡ್ಡಮೋರಿಗಳ ನಿರ್ಮಾಣ ಕಾಮಗಾರಿ ಮತ್ತು ಕಬಿನಿ ಎಡದಂಡೆ ನಾಲೆಯ ವಿತರಣಾ ಕಾಲುವೆ–1ರಿಂದ 19ರ ವರೆಗಿನ ಅಭಿವೃದ್ಧಿ ಕಾಮಗಾರಿಯ ರೂ. 50.00 ಕೋಟಿ ಮೊತ್ತದ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ಅನುಮೋದಿಸಿದೆ.

ಬಡ್ಡಿ ದಂಡ ಮನ್ನಾ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಗ್ರಾಹಕರು ಪಾವತಿಸಲು ಬಾಕಿಯಿರುವ ನೀರಿನ ಬಿಲ್ಲಿನ ಅಸಲು ಮೊತ್ತವನ್ನು ಏಕಕಾಲದಲ್ಲಿ ಪಾವತಿಸಿದಲ್ಲಿ ಬಡ್ಡಿ ದಂಡ ಮತ್ತು ಇತರೆ ಶುಲ್ಕಗಳನ್ನು ಶೇ.100 ರಷ್ಟು ಮನ್ನಾ ಮಾಡಲು ಸಚಿವ ಸಂಪುಟ ನಿರ್ಣಯಿಸಿದೆ.

ಸಿದ್ದರಾಮಯ್ಯ ಪರ ಅಖಾಡಕ್ಕಿಳಿದ ಕಾಗಿನೆಲೆ ಸ್ವಾಮೀಜಿ



ಹಾವೇರಿ, ನ.27– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರ ಒಕ್ಕಲಿಗ ಸಮುದಾಯದ ಆದಿ ಚುಂಚನಗಿರಿ ಮಠದ ನಿರ್ಮಲಾ ನಂದ ಸ್ವಾಮೀಜಿ ಬ್ಯಾಟಿಂಗ್ ಮಾಡು ತ್ತಿದ್ದಂತೆಯೇ ಇದೀಗ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಂಬಲ ಘೋಷಿಸಿದ್ದಾರೆ.

ನಿರ್ಮಲಾನಂದ ಸ್ವಾಮೀಜಿ ಹೇಳಿಕೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ನಿರಂಜನಾನಂದಪುರಿ ಸ್ವಾಮೀಜಿ, ಮಠಾಧೀಶರು ಹೇಳಿದ ತಕ್ಷಣ, ಅವರು ಹೇಳಿದವರನ್ನು ಮುಖ್ಯಮಂತ್ರಿ ಮಾಡಲು ಸಂವಿಧಾನದಲ್ಲಿ ಅವಕಾಶ ಇದೆಯಾ ಎಂದು ಪ್ರಶ್ನಿಸಿದರು. ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ನಾವು ಸಿದ್ದರಾಮಯ್ಯ ಅವರ ಪರವಾಗಿ ಸದಾ ಇರುತ್ತೇವೆ. ಸಾಮಾಜಿಕ ನ್ಯಾಯ ಕಾಪಾಡುವ ರಾಜಕಾರಣ ಬಂದರೆ ಅವರ ಜತೆ ನಮ್ಮವರು ಇರುತ್ತಾರೆ. ಸ್ವಾಮೀಜಿಯವರು ಜಾತಿ ಹಿನ್ನೆಲೆಯಲ್ಲಿ ಮಾತನಾಡಬಾರದಿತ್ತು. ಅದು ಅವರ ಸ್ಥಾನಕ್ಕೆ ಒಳ್ಳೆಯದಲ್ಲ. ಇತರ ಸಮುದಾಯಗಳನ್ನು ಅವಮಾನಿಸಿದಂತೆ ಆಗುತ್ತದೆ ಎಂದು ಕುಟುಕಿದರು. ಅಲ್ಲದೆ, ಮುಖ್ಯಮಂತ್ರಿ ಬದಲಾವಣೆ ಮಾಡುವುದು ಹಾಗೂ ಆಯ್ಕೆ ಮಾಡುವುದು ಶಾಸಕರಿಗೆ ಇರುವ ಅಧಿಕಾರ. ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಕಾಂಗ್ರೆಸ್ ಪಕ್ಷದ ನಾಯಕರು ಚರ್ಚೆ ಮಾಡಿ ಸೂಕ್ತ ನಿರ್ಣಯ ಕೈಗೊಳ್ಳುತ್ತಾರೆ ಎಂದರು.

ಮುಡಾದ ಹುಡ್ಕೊ, ಇಡಬ್ಲ್ಯುಎಸ್, ಎಂಐಜಿ, ಹೆಚ್ಐಜಿ ಮನೆಗಳ ಬಾಕಿ ಪಾವತಿಗೆ ಮತ್ತೆ ಗಡುವು ವಿಸ್ತರಣೆ



ಮೈಸೂರು, ನ.27(ಬಿಎಲ್‌ಯು)– ಸಿಐಟಿಬಿ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅವಧಿಯಲ್ಲಿ ಹಂಚಿಕೆಯಾಗಿರುವ ಹುಡ್ಕೊ, ಇಡಬ್ಲ್ಯುಎಸ್, ಎಂಐಜಿ, ಹೆಚ್‌ಐಜಿ ಮತ್ತು ಬ್ಯಾಂಕ್ ನೆರವಿನ ಮೂಲಕ ಹಂಚಿಕೆಯಾಗಿರುವ ಮನೆಗಳ ಮನೆಗಳ ಬಾಕಿ ಕಂತು ಪಾವತಿಸಲು ಡಿಸೆಂಬರ್ 31, 2026ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್ ತಿಳಿಸಿದ್ದಾರೆ.

ಈ ಮೊದಲು ಮಾರ್ಚ್ 31, 2021ರ ಒಳಗೆ ಬಾಕಿ ಕಂತು ಪಾವತಿಸಲು ಅವಕಾಶ ನೀಡಲಾಗಿತ್ತು. ತರುವಾಯ ಆಗಸ್ಟ್ 8, 2025ರ ಒಳಗೆ ಪಾವತಿ ಮಾಡಲು ಮತ್ತೊಂದು ಅವಕಾಶ ನೀಡಲಾಗಿತ್ತು. ಈಗ ಮತ್ತೊಂದು ಅವಕಾಶವಾಗಿ ಡಿಸೆಂಬರ್ 31, 2026 ರವರೆಗೆ ಅಂತಿಮ ಕಾಲಾವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಈ ಅವಧಿಯೊಳಗೆ ಬಾಕಿ ಹಣ ಮತ್ತು ಬಡ್ಡಿಯನ್ನು ಪಾವತಿಸದೆ ಇರುವ ಮನೆಗಳ ಮಂಜೂರಾತಿ ರದ್ದುಗೊಳಿಸಿ ಅಂತಹ ಮನೆಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ಅಂತಿಮ ಕಾಲಾವಕಾಶ ಮುಗಿದ ನಂತರ ಮತ್ತೆ ಅವಧಿ ವಿಸ್ತರಣೆ ಮಾಡುವುದಿಲ್ಲ. ಈ ಹಿನ್ನೆಲೆ ಅಂತಿಮ ಗಡುವಿನೊಳಗೆ ಬಾಕಿ ಹಣ ಮತ್ತು ಬಡ್ಡಿ ಪಾವತಿ ಮಾಡುವಂತೆ ಆಯುಕ್ತ ರಕ್ಷಿತ್ ಸೂಚನೆ ನೀಡಿದ್ದಾರೆ.

ಮಹಿಳಾ ಐಪಿಎಲ್ ಹರಾಜು 2026: 12 ಮಂದಿ ಖರೀದಿಸಿದ ಆರ್‌ಸಿಬಿ

ಮೈಸೂರು, ನ.27(ವಿವಿಹೆಚ್)– ಬಹು ನಿರೀಕ್ಷಿತ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂಪಿಎಲ್) ಹರಾಜು–2025 ಪ್ರಕ್ರಿಯೆ ಪೂರ್ಣಗೊಂಡಿದ್ದು, ಈ ಹರಾಜಿನಲ್ಲಿ ಒಟ್ಟು 276 ಆಟಗಾರ್ತಿಯರು ಭಾಗವಹಿಸಿದ್ದರು. ಇದರಲ್ಲಿ ಖಾಲಿ ಇದ್ದ 73 ಸ್ಥಾನಗಳಿಗೆ 67 ಆಟಗಾರ್ತಿರು ಭರ್ತಿಯಾಗಿದ್ದಾರೆ.

ಕಳೆದ ವರ್ಷ ಚಾಂಪಿಯನ್ ಆಗಿ ಚೊಚ್ಚಲ ವನಿತೆಯರ ಪ್ರೀಮಿಯರ್ ಲೀಗ್ ಟ್ರೋಫಿಯನ್ನು ಎತ್ತಿಹಿಡಿದಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು 6.15 ಕೋಟಿ ಬಾಕಿ ಹಣದೊಂದಿಗೆ ಹರಾಜಿಗೆ ಪ್ರವೇಶ ಮಾಡಿತ್ತು. ಇಂದಿನ ಹರಾಜಿನಲ್ಲಿ ಒಟ್ಟು 12 ಆಟಗಾರ್ತಿಯರನ್ನು ಖರೀದಿಸಿ ಆರ್‌ಸಿಬಿ ಒಟ್ಟು 16 ಆಟಗಾರ್ತಿಯರ ತಂಡವನ್ನು ಸಿದ್ಧಪಡಿಸಿದೆ. ಇಲ್ಲಿಗೆ ಫ್ರಾಂಚೈಸಿ ಬಳಿಯಿದ್ದ ಎಲ್ಲ ಹಣ ಖಾಲಿಯಾಗಿದೆ.

ಇನ್ನು ಮುಂಬರುವ ಟೂರ್ನಿಗಾಗಿ ಬಿಸಿಸಿಐ ಮಿನಿ ಹರಾಜು ಪ್ರಕ್ರಿಯೆಯನ್ನು ನಡೆಸಿದ್ದು, ಆಟಗಾರ್ತಿಯರ ಹರಾಜು ಇಂದು ನಡೆದಿದೆ. ಹರಾಜಿಗೂ ಮುನ್ನ ಸ್ಮೃತಿ ಮಂಧಾನ, ಎಲ್ಲಿಸ್ ಪೆರ್ರಿ, ರಿಚಾ ಘೋಷ್ ಹಾಗೂ ಶ್ರೇಯಾಂಕಾ ಪಾಟೀಲ್ ಈ ನಾಲ್ವರನ್ನು ರಿಟೈನ್ ಮಾಡಿಕೊಂಡಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಇದೀಗ 12 ಮಹಿಳಾ ಕ್ರೀಡಾಪಟುಗಳನ್ನು ಖರೀದಿಸಿದೆ. ಕಳೆದ



ಆರ್‌ಸಿಬಿ ತಂಡದಲ್ಲಿ ರಿಟೈನ್ ಆದ ಆಟಗಾರ್ತಿಯರು

ಸೀಸನ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದ ಆರ್‌ಸಿಬಿ ಈ ಬಾರಿ ಕಪ್ ಗೆಲ್ಲಲಿದೆಯೇ ಎಂಬುದನ್ನು ಕಾದುನೋಡಬೇಕಿದೆ. ಹರಾಜಿನ ಬಳಿಕ ರಾಯಲ್ ಚಾಲೆಂಜರ್ಸ್ ಬೆಂಗಳೂರು ವನಿತೆಯರ ತಂಡ ಇಂತಿದೆ:

ರಿಟೈನ್ ಆದ ಆಟಗಾರ್ತಿಯರು: ಸ್ಮೃತಿ ಮಂದಾನ– 3.50 ಕೋಟಿ, ರಿಚಾ ಘೋಷ್– 2.75 ಕೋಟಿ, ಎಲ್ಲಿಸ್ ಪೆರ್ರಿ– 2.00 ಕೋಟಿ, ಶ್ರೇಯಾಂಕಾ ಪಾಟೀಲ– 60 ಲಕ್ಷ.

ಹರಾಜಿನಲ್ಲಿ ತಂಡ ಸೇರಿದ ಆಟಗಾರ್ತಿಯರು: ಜಾರ್ಜಿಯಾ ವಾಲ್– 60 ಲಕ್ಷ, ನದೀನ್ ಡಿ ಕ್ಲರ್ಕ್– 65 ಲಕ್ಷ, ರಾಧಾ ಯಾದವ– 65 ಲಕ್ಷ, ಲಾರೆನ್ ಬೆಲ್– 90 ಲಕ್ಷ, ಲಿಂಡ್ಸೆ ಸ್ಮಿತ್– 30 ಲಕ್ಷ, ಪ್ರೇಮಾ ರಾವತ್– 20 ಲಕ್ಷ(ಆರ್‌ಟಿಎಂ), ಅರುಂಧತಿ ರೆಡ್ಡಿ– 75 ಲಕ್ಷ, ಪೂಜಾ ವಸ್ತ್ರಾಕರ್– 85 ಲಕ್ಷ, ಗ್ರೇಸ್ ಹ್ಯಾರಿಸ್– 75 ಲಕ್ಷ, ಗೌತಮಿ ನಾಯಕ– 10 ಲಕ್ಷ, ಪ್ರತ್ಯೂಷಾ ಕುಮಾರ್– 10 ಲಕ್ಷ, ಡಿ. ಹೇಮಲತಾ– 30 ಲಕ್ಷ.

ರಾಜ್ಯ ಸರ್ಕಾರದ ಆಯವ್ಯಯ ಮಂಡನೆಗೆ ಸಿದ್ಧತೆ

ಡಿ.15ರೊಳಗೆ ಜಿಲ್ಲಾ ಯೋಜನಾ ವರದಿ ಸಲ್ಲಿಕೆಗೆ ಸೂಚನೆ

● ಮೈಸೂರು ವಿಭಾಗದ ಜಿಪಂ ಸಿಇಓಗಳೊಂದಿಗೆ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಸಭೆ ● ಯೋಜನಾ ಸಮಗ್ರ ಮಾಹಿತಿ ಒಳಗೊಂಡ ವರದಿಗೆ ಸಲಹೆ

ಮೈಸೂರು,ನ.27(ಎಂಟಿವೈ)–ರಾಜ್ಯ ಸರ್ಕಾರ ಆಯವ್ಯಯ ಮಂಡನೆಗೆ ಸಿದ್ಧತೆ ಮಾಡಿಕೊಳ್ಳಬೇಕಾಗಿದ್ದು, ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳು ಸುಸ್ಥಿರ ಅಭಿವೃದ್ಧಿ, ಜಿಡಿಪಿ, ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಆದ್ಯತೆ ನೀಡಿ ಜಿಲ್ಲಾ ಯೋಜನಾ ವರದಿ ಸಿದ್ಧಪಡಿಸಿ ಡಿ.15ರೊಳಗೆ ಸಲ್ಲಿಸುವಂತೆ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಸೂಚನೆ ನೀಡಿದ್ದಾರೆ.

ಮೈಸೂರು ಜಿ.ಪಂ ಸಭಾಂಗಣದಲ್ಲಿ ಗುರುವಾರ ನಡೆದ ಮೈಸೂರು ವಿಭಾಗದ 8 ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಜೆಟ್ ಮಂಡನೆಗೆ ಈಗಾಗಲೆ ಸಿದ್ದತೆ ಮಾಡಿಕೊಳ್ಳಲಾಗುತ್ತಿದ್ದು, ಜಿಲ್ಲೆಯಲ್ಲಿ ಆದ್ಯತೆ ಮೇರೆಗೆ ಕೈಗೊಳ್ಳಬೇಕಾದ ಅಭಿವೃದ್ಧಿ ಯೋಜನೆಗಳ ಬಗ್ಗೆ ಸಮಗ್ರ ಮಾಹಿತಿಯುಳ್ಳ ವರದಿ ಸಲ್ಲಿಸಬೇಕು. ಅದಕ್ಕಾಗಿ ಎಲ್ಲಾ ಜಿಲ್ಲೆಗಳ ಜಿ.ಪಂ ಸಿಇಓ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿ, ಚರ್ಚಿಸಲಾಗುತ್ತಿದೆ. ಆಯವ್ಯಯ ಮಂಡನೆಗೆ ಪೂರಕವಾಗಿ ಮೈಸೂರು ವಿಭಾಗ ಮಟ್ಟದ ಎಲ್ಲಾ ಜಿಲ್ಲೆಗಳಿಂದ ಸಮಗ್ರ ಅಭಿವೃದ್ಧಿಗೆ ಪೂರಕವಾದ ವರದಿಯನ್ನು ಡಿ.15ರೊಳಗೆ ಸಲ್ಲಿಸುವಂತೆ ಸಲಹೆ ನೀಡಿದರು.


ಮೈಸೂರು ಜಿಪಂ ಸಭಾಂಗಣದಲ್ಲಿ ಗುರುವಾರ ಮೈಸೂರು ವಿಭಾಗದ 8 ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆಗೆ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಚಾಲನೆ ನೀಡಿದರು.

ಜಿಲ್ಲಾ ಯೋಜನಾ ವರದಿ ತಯಾರಿಕೆ ಸಮಿತಿ ಸಭೆಗಳ ನಿಗದಿತ ಅವಧಿಯೊಳಗೆ ನಡೆಸಬೇಕು. ಯೋಜನಾ ವರದಿಯಲ್ಲಿ ಸುಸ್ಥಿರ ಅಭಿವೃದ್ಧಿ, ಜಿಡಿಪಿ, ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಆದ್ಯತೆ ನೀಡಬೇಕು. ಜಿಲ್ಲಾ ಮಟ್ಟದಲ್ಲಿ ಯೋಜನೆ ತಯಾರಿಸುವಾಗ ಕೂಲಂಕುಷವಾಗಿ ಪರಿಶೀಲಿಸಿ, ಜಿಲ್ಲೆಯಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಹೆಚ್ಚಿನ ಆದ್ಯತೆ ನೀಡಬೇಕು. ಯಾವುದೇ ಯೋಜನೆಗಳು ಓವರ್ ಲ್ಯಾಪ್ ಆಗದಂತೆ ಕಟ್ಟೆಚ್ಚರ ವಹಿಸಿ ಯೋಜನಾ ವರದಿ ಸಿದ್ಧಪಡಿಸುವಂತೆ. ಮಾನವ ಅಭಿವೃದ್ಧಿ ಸೂಚ್ಯಂಕ ಹೆಚ್ಚಳ ಮಾಡಲು ಹಾಗೂ ಲಭ್ಯವಿರುವ ಅನುದಾನದ ಆಧಾರದ ಮೇಲೆ ಯೋಜನೆ ರೂಪಿಸಬೇಕು. ಅಲ್ಲದೆ, ಯಾವುದೇ ಯೋಜನೆ ಅನುಷ್ಠಾನದ ನಂತರ ಉಂಟಾಗುವ ಉತ್ತಮ ಬೆಳವಣಿಗೆಯ ಬಗ್ಗೆ ಮುಂದಾಲೋಚನೆಯಿಂದ ಅರ್ಥ ಮಾಡಿಕೊಂಡು ಯೋಜನೆ ರೂಪಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಮೈಸೂರು ಜಿ.ಪಂ. ಸಿಇಓ ಯುಕೇಶ್‌ಕುಮಾರ್ ಮಾತನಾಡಿ, ಜಿಲ್ಲೆಯ 9 ತಾಲೂಕುಗಳಲ್ಲಿ ಆಯಾ ಕ್ಷೇತ್ರ ವ್ಯಾಪ್ತಿಯ ಶಾಸಕರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಯೋಜನಾ ಸಮಿತಿ ಸಭೆಯನ್ನು ನ.4ರಿಂದ 15ರವರೆಗೆ ನಡೆಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಿ ವರದಿ ನೀಡಲಾಗುವುದು ಎಂದರು.


ಮಂಡ್ಯ ಜಿ.ಪಂ. ಇಸಿಓ ಕೆ.ಆರ್. ನಂದಿನಿ ಮಾತನಾಡಿ, ಸುಸ್ಥಿರ ಅಭಿವೃದ್ಧಿಯಲ್ಲಿ ಶಿಕ್ಷಣ, ಕೃಷಿ, ಪೌಷ್ಟಿಕ ಆಹಾರ ಸೇರಿದಂತೆ ಹಲವಾರು ವಿಷಯವನ್ನು ಮುಖ್ಯವಾಗಿ ಇಟ್ಟುಕೊಂಡು ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಯೋಜನೆ ಇಲಾಖೆ ಹಿರಿಯ ನಿರ್ದೇಶಕ ಎಸ್.ಬಸವರಾಜು ಮಾತನಾಡಿ, ಮಾನವ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿಯನ್ನು ಹೇಗೆ ಸಾಧಿಸಬೇಕು. ಯಾವ ಯಾವ ಜಿಲ್ಲೆಗಳು ಹೆಚ್ಚು ಪ್ರಗತಿ ಸಾಧಿಸಿವೆ. ಯಾವ ಕ್ಷೇತ್ರ ಹಿಂದೆ ಉಳಿದಿದೆ. ಹೇಗೆ ಅಭಿವೃದ್ಧಿ ಸಾಧಿಸಬೇಕು. ಯೋಜನೆಗಳನ್ನು ಯಾವ ರೀತಿಯಲ್ಲಿ ಅಳವಡಿಸಿಕೊಂಡು ಪ್ರಗತಿ ಸಾಧಿಸಬೇಕು ಎಂಬುದರ ಬಗ್ಗೆ ವಿಷಯ ಮಂಡನೆ ಮಾಡಿದರು.

ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿ ರಮಣ್ ದೀಪ್ ಚೌಧರಿ, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ಮಂಗಳೂರು ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ತಾಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಡಿ.2ಕ್ಕೆ ಹನುಮ ಜಯಂತ್ಯುತ್ಸವ ವಿಶೇಷ ಪೂಜೆ

ಮೈಸೂರು, ನ.27– ಮೈಸೂರು–ಕೆಆರ್‌ಎಸ್ ರಸ್ತೆಯ ಶ್ರೀ ಮಾರುತಿ ನಗರದಲ್ಲಿರುವ ಶ್ರೀ ವಿಶ್ವರೂಪ ಆಂಜನೇಯ ದೇವಸ್ಥಾನದಲ್ಲಿ ಹನುಮ ಜಯಂತ್ಯೋತ್ಸವದ ಅಂಗವಾಗಿ ಡಿ.2ರಂದು ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಲಿವೆ.



ಅಂದು ಬೆಳಗ್ಗೆ 9ಕ್ಕೆ ವಿಶೇಷ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ ನಂತರ ಮಧ್ಯಾಹ್ನ 2ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ಸಂಗೀತ ಕಾರ್ಯಕ್ರಮ ಇರಲಿದೆ. ಡಿ.16ರಿಂದ ಜನವರಿ 14ರವರೆಗೆ ಧನುರ್ಮಾಸ ಪೂಜೆ ನಡೆಯಲಿದ್ದು, ಹೆಚ್ಚಿನ ಮಾಹಿತಿಗೆ 9480362409 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಟಿ.ಕಾಟೂರಲ್ಲಿ ಶ್ರೀ ಮಾರಮ್ಮ ದೇವಸ್ಥಾನ ಉದ್ಘಾಟನೆ

ಸತ್ಯ–ನ್ಯಾಯ ಮಾರ್ಗದಲ್ಲಿ ಸಾಗಿದರೆ ದೇವರ ದಯೆ ದಕ್ಕಲಿದೆ: ಜಿಟಿಡಿ

ಮೈಸೂರು, ನ.27– ಸತ್ಯ–ನ್ಯಾಯ ಮಾರ್ಗದಲ್ಲಿ ಸಾಗಿದರೆ ದೇವರ ಕೃಪೆ ನಿಶ್ಚಿತವಾಗಿ ದೊರಕುತ್ತದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಮೈಸೂರು ತಾಲೂಕಿನ ಟಿ.ಕಾಟೂರು ಗ್ರಾಮದಲ್ಲಿ 41 ಲಕ್ಷ ರೂ. ಶಾಸಕರ ಅನುದಾನದಲ್ಲಿ ನಿರ್ಮಿಸಿರುವ ಶ್ರೀ ಮಾರಮ್ಮ ದೇವಸ್ಥಾನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಭಕ್ತಿಭಾವದಿಂದ ದೇವರನ್ನು ಸ್ಮರಿಸುವುದರ ಜೊತೆಗೆ ಸತ್ಯ–ನ್ಯಾಯ ಮಾರ್ಗದಲ್ಲಿ ಸಾಗಬೇಕು ಎಂದರು.

ಪೂರ್ವಜರ ಕಾಲದಿಂದಲೂ ಪೂಜಿಸಿಕೊಂಡು ಬಂದಿರುವ ಮಾರಮ್ಮನ ದೇವಸ್ಥಾನದ ಪುನರ್ ನಿರ್ಮಾಣದಿಂದ ಗ್ರಾಮಸ್ಥರು ತುಂಬಾ ಸಂತೋಷಗೊಂಡಿದ್ದಾರೆ. ಎಲ್ಲರೂ ಒಗ್ಗಟ್ಟಿನಿಂದ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿದ್ದಾರೆ. ಟಿ.ಕಾಟೂರು, ರಮ್ಮನಹಳ್ಳಿ, ಉದ್ಬೂರು ಸೇರಿದಂತೆ ಹತ್ತಾರು ಗ್ರಾಮಗಳಲ್ಲಿ ದೇವರ ಕಾರ್ಯಗಳನ್ನು ಇದೇ ರೀತಿಯಲ್ಲಿ ಎಲ್ಲರೂ ಒಂದಾಗಿ ಭಕ್ತಿಭಾವದಿಂದ ನಡೆಸುತ್ತಾರೆ. ಎಷ್ಟೇ ಹಣ, ಅಂತಸ್ತು ಇದ್ದರೂ ಸುಖ, ಸಂತೋಷ, ನೆಮ್ಮದಿಯಿಂದ ಬದುಕಲು ದೇವರ ಆಶೀರ್ವಾದ ಇದ್ದೇ ಇರಬೇಕು ಎಂದು ಹೇಳಿದರು.


ಮೈಸೂರು ತಾಲೂಕಿನ ಟಿ.ಕಾಟೂರು ಗ್ರಾಮದ ಶ್ರೀಮಾರಮ್ಮ ದೇವಸ್ಥಾನದ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಪಾಲ್ಗೊಂಡಿದ್ದರು.

ಹಳ್ಳಿಗಳಲ್ಲಿರುವ ಗ್ರಾಮದೇವತೆ ದೇವಸ್ಥಾನ ಇದ್ದರೆ, ದೇವಿ ನಮ್ಮನ್ನು ರಕ್ಷಿಸುತ್ತಾಳೆ ಎಂಬ ನೆಮ್ಮದಿ ಇರುತ್ತದೆ. ಗ್ರಾಮದಿಂದ 450 ಭಕ್ತರು ಶಬರಿಮಲೆ ಯಾತ್ರೆಗೆ ತೆರಳುತ್ತಿರುವುದು ಖುಷಿಯ ವಿಚಾರ. ಹಾಗೆಯೇ ಇಲ್ಲಿ ಅಯ್ಯಪ್ಪ ಸ್ವಾಮಿ ದೇವಸ್ಥಾನ ನಿರ್ಮಿಸಬೇಕು, ಅದಕ್ಕೆ ಅರಳಿಕಟ್ಟೆ ಬಳಿ ಜಾಗ ಇದೆ ಎಂದು ಮುಖಂಡರು ತಿಳಿಸಿದ್ದೀರಿ. ಈ ಬಗ್ಗೆ ಕ್ರಮ ವಹಿಸಿದ್ದು, ಪರಿಶೀಲನೆ ನಡೆಸಿ ಕ್ರಿಯಾ ಯೋಜನೆ ಸಿದ್ಧಪಡಿಸಲು ಸೂಚಿಸಲಾಗಿದೆ ಎಂದರು.

ಜ.15ರೊಳಗೆ ಜಮೀನು ದುರಸ್ತಿ: ಟಿ.ಕಾಟೂರು ಸೇರಿದಂತೆ ಸುತ್ತಮುತ್ತಲ ಹಳ್ಳಿಗಳ ಜಮೀನು ದುರಸ್ತಿ, ಪೋಡಿ, ಸಣ್ಣ ರಸ್ತೆಗಳ ರಿಪೇರಿ ಸಂಬಂಧ ಜ.15ರೊಳಗೆ ಅಧಿಕಾರಿಗಳ ಸಭೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಗ್ರಾಮಸ್ಥರು ತಿಳಿಸಿರುವ ಹಲವಾರು ಸಮಸ್ಯೆಗಳು ನನ್ನ ಗಮನದಲ್ಲಿದ್ದು, ಆದ್ಯತೆ ಅನುಸಾರ ಎಲ್ಲವನ್ನೂ ಪರಿಹರಿಸಲಾಗುವುದು. ಚಾಮುಂಡೇಶ್ವರಿ ಕ್ಷೇತ್ರದ ಜನರ ಆಶೀರ್ವಾದ, ಹಾರೈಕೆ ಸದಾ ಹೀಗೆಯೇ ಇರಲಿ ಎಂದು ಮನವಿ ಮಾಡಿದರು.

ಡಾ.ಅಂಬೇಡ್ಕರ್ ಸಂವಿಧಾನದ ಆಶಯಗಳ ಯಥಾವತ್ತಾಗಿ ಜಾರಿಗೆ ತರಲು ಒತ್ತಾಯ


ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯಿಂದ ಪುರಭವನದ ಆವರಣದಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಮೈಸೂರು,ನ.27(ಜಿಎ)–ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಅವರು ನೀಡಿರುವ ಜಗತ್ತಿನ ಅತ್ಯಂತ ಶ್ರೇಷ್ಠ ಸಂವಿಧಾನದ ಆಶಯಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಥಾವತ್ತಾಗಿ ಜಾರಿಗೆ ತರಬೇಕು ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಒತ್ತಾಯಿಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಸ್ತುತ ಸಂವಿಧಾನವನ್ನು ದುರ್ಬಲಗೊಳಿಸುವ ಮತ್ತು ಬದಲಿಸುವ ವಿನಾಶಕಾರಿಯಾದ ಮಾತುಗಳನ್ನು ಕೇಳುತ್ತಿದ್ದೇವೆ. 140 ಕೋಟಿ ಜನರಿಗೆ ಸಮಾನವಾದ ಹಕ್ಕು ಮತ್ತು ಸಮಾನತೆಯ ಅವಕಾಶ ನೀಡಿರುವ ಸಂವಿಧಾನವನ್ನು ಸಂರಕ್ಷಿಸಬೇಕಿದೆ ಎಂದು ತಿಳಿಸಿದರು.

2015ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಂವಿಧಾನ ದಿನಾಚರಣೆಗೆ ಚಾಲನೆ ಕೊಟ್ಟರು. ಇಂದು ದೇಶಾದ್ಯಂತ ಸಂವಿಧಾನ ದಿನ ಆಚರಿಸಲಾಗುತ್ತಿದೆ. ಸಂವಿಧಾನದ ಮಹತ್ವವನ್ನು ಸಾರಲಾಗುತ್ತಿದೆ. ಇದು ಸ್ವಾಗತಾರ್ಹ. ಕರ್ನಾಟಕ ಸರ್ಕಾರ ಸಂವಿಧಾನ ಪೀಠಿಕೆಯನ್ನು ಶಾಲೆಯಲ್ಲಿ ನಿತ್ಯ ಓದುವ ಮುಖೇನ ಮಕ್ಕಳಲ್ಲಿ ಸಂವಿಧಾನ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದರು.


ಈ ಸಂದರ್ಭದಲ್ಲಿ ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ. ಚಂದ್ರಶೇಖರ್, ನಾಯಕ ಸಂಘದ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ನಗರಾಧ್ಯಕ್ಷ ಜೆ.ಪ್ರಭು, ವಕೀಲರಾದ ಎಸ್.ಪಿ.ಮಹೇಶ್, ಪುಟ್ಟಸಿದ್ದೇಗೌಡ, ಮುದ್ದು ಮಹದೇವಯ್ಯ, ಬಸವರಾಜು, ಮಹೇಶ ಎಚ್, ಸೀನಾ, ಮುಖಂಡರಾದ ಶ್ರೀಧರ್, ರಾಜು ಮಾರ್ಕೆಟ್, ಗಣೇಶ, ರವಿ, ರಘು, ಸುಬ್ರಮಣ್ಯ ಮತ್ತಿತರರು ಉಪಸ್ಥಿತರಿದ್ದರು.

ಲೇಖಕಿ ನೀಲಾಂಬಿಕಾ ರಚಿತ ವಚನ ಕಥನ ಕೃತಿ ಬಿಡುಗಡೆ

ಮೈಸೂರು,ನ.27(ಎಸ್‌ಪಿಎನ್)–ಲೇಖಕಿ ಎಂ.ಎ. ನೀಲಾಂಬಿಕಾ(ರಾಜೇಂದ್ರ ಶಿಶು) ರಚಿತ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಪ್ರವಚನಗಳಿಂದ ಆಯ್ದ ವಚನ ವ್ಯಾಖ್ಯಾನ ಕಥೆಗಳ ಸಂಕಲನ 'ವಚನ ಕಥನ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ರಾಜೇಂದ್ರ ಭವನದಲ್ಲಿ ಸಂವಹನ ಪ್ರಕಾಶನ, ಮೈಸೂರು ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಸಮಾರಂಭದಲ್ಲಿ ವಚನ ಕಥನ ಕೃತಿಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಬಿಡುಗಡೆಗೊಳಿಸಿ ಮಾತನಾಡಿದರು.

ಲೇಖಕಿ ಎಂ.ಎ.ನೀಲಾಂಬಿಕಾ ರಚಿತ 'ವಚನ ಕಥನ' ಸಿದ್ದೇಶ್ವರ ಸ್ವಾಮೀಜಿ ಪ್ರವಚನಗಳ ಮಾಲಿಕೆಯಲ್ಲಿ ಉಲ್ಲೇಖವಾಗುತ್ತಿದ್ದ ಆಯ್ದ ವಚನ, ಸಣ್ಣ ಕಥೆಗಳನ್ನು ಸಂಗ್ರಹಿಸಿದ್ದಾರೆ. ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರ ಜೀವಿತಾವಧಿಯಲ್ಲಿ ಶಾಂತ ಸ್ವರೂಪಿಯಾಗಿದ್ದರು. ಅವರ ನಡೆ–ನುಡಿಗಳಿಂದ ಜನರನ್ನು ಆಕರ್ಷಿಸುತ್ತಿದ್ದರು. ಅದೇ ರೀತಿ ಎಂ.ಎ.ನೀಲಾಂಬಿಕ, ಶಾಂತ ಸ್ವರೂಪಿಯಾಗಿ, ಈ ಬೃಹತ್ ಗ್ರಂಥವನ್ನು ರಚಿಸಿರುವುದು ಸ್ವಾಗತಾರ್ಹ ಎಂದರು.



ಲೇಖಕಿ ಎಂ.ಎ.ನೀಲಾಂಬಿಕಾ ರಚಿತ 'ವಚನ ಕಥನ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ಭಾರತೀಯ ಪರಂಪರೆಯಲ್ಲಿ ವಚನ ಸಾಹಿತ್ಯ ವಿಶಿಷ್ಟವಾದುದು. ವಚನಕಾರರ ನಿಲುವು ಮುಂದೆಯೂ ಅರಿವಿನ ವಿಷಯಗಳೇ ಆಗಿರುತ್ತವೆ. ನಿಜವಾದ ಅರ್ಥದಲ್ಲಿ ವಚನಕಾರರ ತಾತ್ವಿಕ ಬದುಕಿನ ಹೂರಣ ವಚನಗಳಲ್ಲಿ ಅನಾವರಣಗೊಂಡಿದೆ. ಹೀಗಾಗಿಯೇ ವಚನ ಸಾಹಿತ್ಯ ಕನ್ನಡ ಭಾಷೆಗೆ ದೈವಿ ಸ್ವರೂಪ ತಂದುಕೊಟ್ಟಿದೆ ಎಂದು ಹಲವು ವಚನಗಳನ್ನು ಉಲ್ಲೇಖಿಸಿ ತಿಳಿಸಿದರು.

ವಚನ ಸಾಹಿತ್ಯ ಎಲ್ಲಾ ಕಾಲಕ್ಕೂ ಸಲ್ಲುತ್ತವೆ. ಅವುಗಳಲ್ಲಿ ಅರಿವಿನ ಸಾಗರವೇ ಇದೆ. ಯುವ ಸಮೂಹ ವಚನಗಳನ್ನು ಅಧ್ಯಯನ ಮಾಡಿ, ಉನ್ನತ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ಈ ವಚನ ಕಥನ ಪುಸ್ತಕದಲ್ಲಿ ನೀಲಾಂಬಿಕ ಅವರು, ಬಸವಣ್ಣ, ಅಲ್ಲಮಪ್ರಭು ಸೇರಿದಂತೆ ಇತರೆ ಶರಣರ ವಚನಗಳನ್ನು ಉಲ್ಲೇಖಿಸಿದ್ದಾರೆ ಎಂದರು.

ವೇದಿಕೆಯಲ್ಲಿ ಕುಂದೂರು ಮಠದ ಅಧ್ಯಕ್ಷ ಡಾ.ಶರತ್ ಚಂದ್ರ ಸ್ವಾಮೀಜಿ, ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕ ಬಿ.ಮಂಜುನಾಥ್, ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಹೆಳವರ ಹುಂಡಿ ಸಿದ್ದಪ್ಪ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷ ಎಂ.ಎಸ್.ಶೋಭಾರಾಣಿ ಜೈಪ್ರಕಾಶ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶರಣ ದೇವರಾಜು ಪಿ.ಚಿಕ್ಕಹಳ್ಳಿ(ದೇಚಿ) ಉಪಸ್ಥಿತರಿದ್ದರು. ನಾದ ಹಂಸಿನಿ ಭಜನಾಸಂಘ ಅಧ್ಯಕ್ಷ ಉಮಾ ಮಹದೇವಸ್ವಾಮಿ ತಂಡದವರು ವಚನ ಗಾಯನ ನಡೆಸಿಕೊಟ್ಟರು.

ದೇಶ – ವಿದೇಶ

ಜಮ್ಮು: ಭಯೋತ್ಪಾದಕ ಚಟುವಟಿಕೆಗೆ ಯೋಜಿಸುತ್ತಿದ್ದ ಯುವಕನ ಬಂಧನ



ಜಮ್ಮು: ಜಮ್ಮುವಿನಲ್ಲಿ ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಪ್ರಮುಖ ಶಂಕಿತನಾಗಿರುವ 19 ವರ್ಷದ ಯುವಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಮ್ಮುವಿನ ಬಥಿಂಡಿ ಪ್ರದೇಶದಲ್ಲಿ ವಾಸಿಸುತ್ತಿರುವ ರಿಯಾಸಿ ಮೂಲದ ಆರೋಪಿಯನ್ನು ಬಹು ಫೋರ್ಟ್ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆಯ(ಬಿಎನ್‌ಎಸ್) ಸೆಕ್ಷನ್ 113(3) (ಭಯೋತ್ಪಾದನಾ ಚಟುವಟಿಕೆ) ಅಡಿಯಲ್ಲಿ ದಾಖಲಿಸಲಾದ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಬಂಧಿಸಲಾಗಿದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ. ಆರೋಪಿಯು ಆನ್‌ಲೈನ್ ಮೂಲಭೂತವಾದಿಯಾಗಿದ್ದು, ಭಯೋತ್ಪಾದಕ ದಾಳಿಯನ್ನು ನಡೆಸಲು ಯೋಜಿಸುತ್ತಿದ್ದ ಎಂದು ಪ್ರಾಥಮಿಕ ತನಿಖೆಗಳು ಬಹಿರಂಗಪಡಿಸಿವೆ. ಯುವಕ, ಪಾಕಿಸ್ತಾನ ಮತ್ತು ಇತರ ವಿದೇಶಗಳಲ್ಲಿ ನೆಲೆಗೊಂಡಿರುವ ಕೆಲವರ ಮೊಬೈಲ್ ಸಂಖ್ಯೆಗಳಿಗೆ ಕರೆ ಮಾಡಿರುವುದು, ನಿರಂತರ ಸಂಪರ್ಕದಲ್ಲಿದ್ದದ್ದು ಬೆಳಕಿಗೆ ಬಂದಿದೆ ಎಂದು ಅವರು ಹೇಳಿದ್ದಾರೆ.

ಶಂಕಿತನ ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದ್ದು, ವಿಶ್ಲೇಷಿಸಲಾಗುತ್ತಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಶ್ವೇತಭವನದ ಬಳಿ ಗುಂಡಿನ ದಾಳಿ: ಭದ್ರತಾ ಪಡೆಯ ಇಬ್ಬರಿಗೆ ಗಾಯ

ವಾಷಿಂಗ್ಟನ್: ಶ್ವೇತಭವನದ ಸಮೀಪ ನಡೆದ ಗುಂಡಿನ ದಾಳಿಯಲ್ಲಿ ವೆಸ್ಟ್ ವರ್ಜೀನಿಯಾ ರಾಷ್ಟ್ರೀಯ ಭದ್ರತಾ ಪಡೆಯ ಇಬ್ಬರು ಸಿಬ್ಬಂದಿ ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಎಫ್‌ಬಿಐ ನಿರ್ದೇಶಕ ಕಾಶ್ ಪಟೇಲ್ ಮತ್ತು ವಾಷಿಂಗ್ಟನ್ ಮೇಯರ್ ಮುರಿಯಲ್ ಬೌಸರ್ ತಿಳಿಸಿದ್ದಾರೆ.



ದಾಳಿಯ ಉದ್ದೇಶವೇನು ಎಂಬುವುದು ಇನ್ನು ತಿಳಿದುಬಂದಿಲ್ಲ. ಯಾವುದೋ ಮೂಲೆಯಿಂದ ದಿಢೀರ್ ಎಂದು ಕಾಣಿಸಿಕೊಂಡ ಶಂಕಿತ, ತಕ್ಷಣವೇ ಭದ್ರತಾ ಸಿಬ್ಬಂದಿ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದ್ದಾನೆ. ಗುಂಡಿನ ಸದ್ದು ಕೇಳುತ್ತಿದ್ದಂತೆ, ಆ ಪ್ರದೇಶದಲ್ಲಿದ್ದ ಇತರ ಸಿಬ್ಬಂದಿ ಗುಂಡು ಹಾರಿಸಿದ ವ್ಯಕ್ತಿಯನ್ನು ಹಿಡಿದಿದ್ದಾರೆ. ಅವರಲ್ಲಿ ಒಬ್ಬರು ಶಂಕಿತನ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿ ಜೆಫ್ರಿ ಕ್ಯಾರೊಲ್ ತಿಳಿಸಿದ್ದಾರೆ. ಘಟನೆ ಬೆನ್ನಲ್ಲೇ ವಾಷಿಂಗ್ಟನ್‌ನಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದ್ದು, ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸುವಂತೆ ಟ್ರಂಪ್ ಸೂಚಿಸಿದ್ದಾರೆ ಎಂದು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹೇಳಿದ್ದಾರೆ.

ಪ.ಬಂಗಾಳ ಗಡಿಯಲ್ಲಿ ಬಿಎಸ್‌ಎಫ್‌ನಿಂದ ಭರ್ಜರಿ ಬೇಟೆ; 800 ಗ್ರಾಂ ಚಿನ್ನ ವಶ

ಕೋಲ್ಕತ್ತ: ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯಲ್ಲಿ 1 ಕೋಟಿ ರೂ. ಮೌಲ್ಯದ ಏಳು ಚಿನ್ನದ ಬಿಸ್ಕತ್‌ಗಳನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ವಶಕ್ಕೆ ಪಡೆದಿದೆ. ಗುಪ್ತಚರ ಮೂಲಗಳಿಂದ ಲಭ್ಯವಾದ ಖಚಿತ ಮಾಹಿತಿ ಆಧರಿಸಿ, ಭಾರತ ಮತ್ತು ಬಾಂಗ್ಲಾದೇಶದ ಗಡಿಯಲ್ಲಿ ನಿಯೋಜಿಸಲಾಗಿರುವ 119ನೇ ಬೆಟಾಲಿಯನ್ ಸಿಬ್ಬಂದಿ ಈ ಕಾರ್ಯಾಚರಣೆ ನಡೆಸಿದ್ದರು ಎಂದು ಅಧಿಕಾರಿಗಳು ಗುರುವಾರ ಮಾಹಿತಿ ನೀಡಿದ್ದಾರೆ.



ಚಿನ್ನದ ಬಿಸ್ಕತ್‌ಗಳನ್ನು ಸೈಕಲ್‌ನಲ್ಲಿ ಬಚ್ಚಿಡಲಾಗಿತ್ತು. ಸವಾರ, ಕಾರ್ಯಾಚರಣೆ ವೇಳೆ ಪರಾರಿಯಾಗಿದ್ದಾನೆ ಎಂದು ಬಿಎಸ್‌ಎಫ್ ಹೇಳಿಕೆ ಬಿಡುಗಡೆ ಮಾಡಿದೆ.

ವಶಪಡಿಸಿಕೊಳ್ಳಲಾಗಿರುವ ಚಿನ್ನದ ಬಿಸ್ಕೆಟ್‌ಗಳು ಒಟ್ಟು 816.41 ಗ್ರಾಂ ಇದ್ದು, ಮಾರುಕಟ್ಟೆ ಮೌಲ್ಯ 1.02 ಕೋಟಿ ಎಂದು ಅಂದಾಜಿಸಲಾಗಿದೆ.

ಶ್ರೀಲಂಕಾದಲ್ಲಿ ಭಾರೀ ಮಳೆ: ಭೂಕುಸಿತದಿಂದ 31 ಸಾವು,

ಕೊಲಂಬೊ: ಈ ವಾರ ಶ್ರೀಲಂಕಾದಾದ್ಯಂತ ಸುರಿದ ಭಾರೀ ಮಳೆಯಿಂದಾಗಿ ಉಂಟಾದ ಪ್ರವಾಹ ಮತ್ತು ಭೂಕುಸಿತಗಳಲ್ಲಿ ಕನಿಷ್ಠ 31 ಜನರು ಮೃತಪಟ್ಟು 14 ಜನರು ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬದುಲ್ಲಾದ ಮಧ್ಯ ಚಹಾ ಬೆಳೆಯುವ ಜಿಲ್ಲೆಯಲ್ಲಿ ಹೆಚ್ಚಿನ ಸಾವುಗಳು ಸಂಭವಿಸಿವೆ.



ಅಲ್ಲಿ ಪರ್ವತ ಇಳಿಜಾರುಗಳಲ್ಲಿ ಭೂಕುಸಿತ ಉಂಟಾಗಿ ಮನೆಗಳ ಮೇಲೆ ಬಿದ್ದು 16 ಜನರು ಜೀವಂತ ಸಮಾಧಿಯಾಗಿದ್ದಾರೆ ಎಂದು ವಿಪತ್ತು ನಿರ್ವಹಣಾ ಕೇಂದ್ರ ಹೇಳಿಕೆಯಲ್ಲಿ ತಿಳಿಸಿದೆ. ಪಕ್ಕದ ನುವಾರ ಎಲಿಯಾ ಜಿಲ್ಲೆಯಲ್ಲಿ ಇದೇ ರೀತಿ ನಾಲ್ವರು ಮೃತಪಟ್ಟಿದ್ದಾರೆ. ಉಳಿದ ಸಾವುನೋವುಗಳು ಬೇರೆಡೆ ವರದಿಯಾಗಿವೆ.

ಭೂಕುಸಿತದಲ್ಲಿ ಸುಮಾರು 400 ಮನೆಗಳು ಹಾನಿಗೊಳಗಾಗಿದ್ದು, 1,100 ಕ್ಕೂ ಹೆಚ್ಚು ಕುಟುಂಬಗಳು ತಾತ್ಕಾಲಿಕ ಆಶ್ರಯ ತಾಣಗಳಿಗೆ ಸ್ಥಳಾಂತರಗೊಂಡಿವೆ.

ಶ್ರೀಲಂಕಾದಾದ್ಯಂತ ನದಿಗಳಲ್ಲಿ ನೀರಿನ ಮಟ್ಟ ಏರುತ್ತಿದೆ. ತಗ್ಗು ಪ್ರದೇಶಗಳ ನಿವಾಸಿಗಳು ಎತ್ತರದ ಪ್ರದೇಶಗಳಿಗೆ ಸ್ಥಳಾಂತರಗೊಳ್ಳುವಂತೆ ಎಚ್ಚರಿಕೆ ನೀಡಲಾಗಿದೆ.

ಎಎಪಿ ನಾಯಕನ ಮನೆ ಮೇಲೆ ಬರೋಬ್ಬರಿ 23 ಸುತ್ತು ಫೈರಿಂಗ್!

ಚಂಡೀಗಢ: ಪಂಜಾಬ್‌ನ ಫಾಗ್ವಾರಾ–ಜಂಡಿಯಾಲಾ ರಸ್ತೆಯ ದರ್ವೇಶ್ ಪಿಂಡ್ ಗ್ರಾಮದ ಬಳಿ ಆಡಳಿತಾರೂಢ ಎಎಪಿ ನಾಯಕನ ಮನೆಯ ಮೇಲೆ ಗುರುವಾರ ಬೆಳಗ್ಗೆ ಮೋಟಾರ್ ಸೈಕಲ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ಬರೋಬ್ಬರಿ 23 ಸುತ್ತು ಗುಂಡು ಹಾರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಅದೃಷ್ಟವಶಾತ್ ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಆಡಳಿತಾರೂಢ ಎಎಪಿಯ ಯುದ್ಧ ನಾಶಿಯಾನ್ ವಿರುಧ್' ಅಭಿಯಾನದ ಫಾಗ್ವಾರಾ ಸಂಯೋಜಕ ದಲ್ಜಿತ್ ಸಿಂಗ್‌ರಾಜು ಅವರ ಮನೆಯ ಮೇಲೆ ಬೆಳಗಿನ ಜಾವ 1.13ರ ಸುಮಾರಿಗೆ 23 ಸುತ್ತು ಗುಂಡು ಹಾರಿಸಲಾಗಿದ್ದು, ಕಿಟಕಿ ಮತ್ತು ಬಾಗಿಲಿನ ಗಾಜುಗಳು ಪುಡಿಪುಡಿಯಾಗಿವೆ. ರಾಜು ಅವರನ್ನು ಹೋಶಿಯಾರ್‌ಪುರ ಸಂಸದ ರಾಜ್‌ಕುಮಾರ್ ಚಬ್ಬೇವಾಲ್ ಅವರ ಆಪ್ತ ಎಂದು ಪರಿಗಣಿಸಲಾಗಿದೆ. ಅವರ ಮನೆಯ ಮೇಲೆ ಸುಮಾರು 23 ಸುತ್ತು ಗುಂಡು ಹಾರಿಸಲಾಗಿದೆ ಎಂದು ಫಾಗ್ವಾರಾ ಉಪ ವಿಭಾಗೀಯ ಪೊಲೀಸ್ ವರಿಷ್ಠಾಧಿಕಾರಿ ಮಾಧ್ವಿ ಶರ್ಮಾ ತಿಳಿಸಿದ್ದಾರೆ. ಸಿಸಿಟಿವಿ ದೃಶ್ಯಾವಳಿಗಳನ್ನು ಪರೀಕ್ಷಿಸಲಾಗುತ್ತಿದೆ. ಸ್ಥಳದಲ್ಲಿ ಪೊಲೀಸ್ ಪಡೆ ನಿಯೋಜಿಸಲಾಗಿದೆ. ದಾಳಿ ಕುರಿತು ಕೂಲಂಕಷವಾಗಿ ತನಿಖೆ ಮಾಡಲಾಗುತ್ತಿದೆ ಎಂದಿದ್ದಾರೆ.



ಮೈಸೂರು ಮಿತ್ರ ಶುಕ್ರವಾರ 28 ನವೆಂಬರ್ 2025

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ

ಭಾರತ ಸಂವಿಧಾನ ದಿನಾಚರಣೆ

ಮಡಿಕೇರಿ,ನ.27– ಸಂವಿಧಾನ ಭಾರತ ದೇಶದ ಪ್ರಜಾಪ್ರಭುತ್ವದ ಮೂಲಭೂತ ಆಧಾರವಾಗಿದ್ದು ಸಮಾಜದಲ್ಲಿ ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯವನ್ನು ಬಲಪಡಿಸುವ ಮಹತ್ವದ ದಾಖಲೆ ಎಂದು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಮೇಜರ್ ಪ್ರೊ.ರಾಘವ.ಬಿ ಹೇಳಿದರು.



ಸಂವಿಧಾನ ದಿನಾಚರಣೆಯನ್ನು ಉದ್ಘಾಟಿಸುತ್ತಿರುವ ಗಣ್ಯರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಮತ್ತು ಎನ್‌ಸಿಸಿ ವಿಭಾಗದ ವತಿಯಿಂದ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ನಡೆದ ಭಾರತ ಸಂವಿಧಾನ ದಿನಾಚರಣೆಯನ್ನು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಂವಿಧಾನ ಪೀಠಿಕೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನದ ರಚನೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಸಂವಿಧಾನ ಸಭಾ ಸದಸ್ಯರ ಅಮೂಲ್ಯ ಕೊಡುಗೆಯನ್ನು ಅವರು ಸ್ಮರಿಸಿದರು. 1949ರ ನವೆಂಬರ್ 26ರ ದಿನ ಸಂವಿಧಾನ ಸಭೆಯು ಭಾರತದ ಸಂವಿಧಾನವನ್ನು ಅಧಿಕೃತವಾಗಿ ಅಂಗೀಕರಿಸಿದ್ದನ್ನು ಸ್ಮರಿಸುವ ಉದ್ದೇಶದಿಂದ ಪ್ರತಿ ವರ್ಷ ಈ ದಿನವನ್ನು ಸಂವಿಧಾನ ದಿನವಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಭಾಗವಾಗಿ ಸಂವಿಧಾನ ಪ್ರಸ್ತಾವನೆಯ ಸಾಮೂಹಿಕ ವಾಚನ ಮಾಡಿಸುವುದರ ಜೊತೆಗೆ ಸಾಮಾಜಿಕ ನ್ಯಾಯ, ಸಾಮಾಜಿಕ ಸಮಾನತೆ ಮತ್ತು ತಾರತಮ್ಯದ ವಿರುದ್ಧ ಇರುವ ಸಾಂವಿಧಾನಿಕ ಅವಕಾಶಗಳನ್ನು ಉಲ್ಲೇಖಿಸುತ್ತಾ ಸಂವಿಧಾನದ ವಿಧಿ 14ರಲ್ಲಿ ಹೇಳಿರುವ ಸಮಾನತೆ ಹಕ್ಕು ಮತ್ತು ಸಂವಿಧಾನದ ವಿಧಿ 15 ತಾರತಮ್ಯವನ್ನು ಹೋಗಲಾಡಿಸುವ ಹಕ್ಕುಗಳ ಪ್ರಾಮುಖ್ಯತೆಯನ್ನು ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಹಿರಿಯ ಪ್ರಾಧ್ಯಾಪಕರುಗಳಾದ ಪ್ರೊ.ತಿಪ್ಪೇಸ್ವಾಮಿ, ಪ್ರೊ.ಗಾಯತ್ರಿದೇವಿ, ಪ್ರೊ.ಶ್ರೀಧರ್ ಹೆಗಡೆ, ತಳವಾರ್ ಬಿ.ಹೆಚ್ ಹಾಗೂ ಉಪನ್ಯಾಸಕರಾದ ಖುರ್ಷಿದ ಭಾನು, ನೀವಿಯಾ ಮೇದಪ್ಪ ಹಾಗೂ ಬೋಧಕ ಬೋಧಕೇತರ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


ಕೊಡಗಿನ ಅಸ್ವಾಭಾವಿಕ ಸಾವಿನ ತನಿಖೆಗೆ ಎಎಪಿ ಆಗ್ರಹ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಸಂಭವಿಸುತ್ತಿರುವ ಅಸ್ವಾಭಾವಿಕ ಸಾವಿನ ಪ್ರಕರಣಗಳನ್ನು ನಿರ್ಲಕ್ಷಿಸದೆ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಆಮ್ ಆದ್ಮಿ ಪಾರ್ಟಿಯ ರಾಜ್ಯ ಕಾರ್ಯದರ್ಶಿ ಭೋಜಣ್ಣ ಸೋಮಯ್ಯ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ಅಸ್ವಾಭಾವಿಕ ಸಾವಿನ ಪ್ರಕರಣಗಳು ದಾಖಲಾಗುತ್ತಿದ್ದು, ಇದು ಆತಂಕದ ಬೆಳವಣಿಗೆಯಾಗಿದೆ. ಅಲ್ಲದೆ ಕೆಲವು ಪ್ರಕರಣಗಳ ಬಗ್ಗೆ ಸಾರ್ವಜನಿಕರು ಸಂಶಯ ವ್ಯಕ್ತಪಡಿಸಿ ಚರ್ಚೆಯಲ್ಲಿ ತೊಡಗುತ್ತಿದ್ದಾರೆ ಈ ರೀತಿಯ ಪ್ರಕರಣಗಳನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ತನಿಖೆಯನ್ನು ಚುರುಕುಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ. ಕೊಡಗು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು, ಒಂಟಿ ಮನೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಮಹಿಳೆಯರು ಹಾಗೂ ವಯೋವೃದ್ಧರು ಒಬ್ಬಂಟಿಯಾಗಿ ವಾಸಿಸುವ ಮನೆಗಳು ಕೂಡ ಇವೆ. ಜಿಲ್ಲೆಯ ಯಾವುದೇ ಪ್ರದೇಶದಲ್ಲಿ ಅಸ್ವಾಭಾವಿಕ ಸಾವುಗಳು ಸಂಭವಿಸಿದರೆ ಉನ್ನತ ಮಟ್ಟದ ತನಿಖೆ ನಡೆಸಬೇಕು. ಈ ಪ್ರಕರಣಗಳನ್ನು ಕೇಂದ್ರ ಹಾಗೂ ರಾಜ್ಯದ ಗೃಹ ಸಚಿವರು ಗಂಭೀರವಾಗಿ ಪರಿಗಣಿಸಬೇಕು. ಅಧಿವೇಶನದಲ್ಲಿ ಸಾವಿನ ಕುರಿತು ಧ್ವನಿ ಎತ್ತಬೇಕು ಎಂದರು.

ಹೈಕಮಾಂಡ್ ಮಟ್ಟದಲ್ಲಿ ಒಪ್ಪಂದ ಆಗಿದ್ದರೆ ಡಿಕೆಶಿಗೆ ಸಿಎಂ ಸ್ಥಾನ ಬಿಟ್ಟು ಕೊಡುವುದು ಸೂಕ್ತ

ಅರಕಲಗೂಡು ಶಾಸಕ ಎ.ಮಂಜು ಅಭಿಪ್ರಾಯ



ಮಡಿಕೇರಿ,ನ.27–ಎರಡೂವರೆ ವರ್ಷಗಳ ಬಳಿಕ ಮುಖ್ಯಮಂತ್ರಿ ಬದಲಾವಣೆಯ ಮಾತುಕತೆ ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಆಗಿದ್ದರೆ ಮಾತಿಗೆ ತಕ್ಕಂತೆ ಶಿವಕುಮಾರ್‌ಗೆ ಆ ಸ್ಥಾನ ನೀಡುವುದು ಅತ್ಯಂತ ಸೂಕ್ತ ಎಂದು ಅರಕಲಗೂಡು ಶಾಸಕ ಎ.ಮಂಜು ಅಭಿಪ್ರಾಯಪಟ್ಟಿದ್ದಾರೆ.

ಮಡಿಕೇರಿಯಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನಪಲ್ಲಟ ಆಗುತ್ತೇ ಅಥವಾ ಆಗಲ್ಲ ಅನ್ನುವುದನ್ನು ಹೇಳಲು ನಾನು ಅವರ ಪಕ್ಷದವನಲ್ಲ ನಾನು ಒಬ್ಬ ಶಾಸಕನಾಗಿ ಏನು ನಡೆಯುತ್ತಿದೆ ಅನ್ನುವ ವಿಚಾರಗಳ ಬಗ್ಗೆ ಮಾತನಾಡಬಹುದಷ್ಟೇ ಎಂದು ಹೇಳಿದರು.

ಜನರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ 5 ವರ್ಷಗಳ ಅಧಿಕಾರ ನೀಡಿದ್ದಾರೆ. ಈಗಾಗಲೇ ಎರಡೂವರೆ ವರ್ಷಗಳು ಕಳೆದಿದ್ದು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷಗಳು ಕಳೆದಿವೆ. ಈಗ ಶಿವಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಎರಡೂವರೆ ವರ್ಷಗಳ ಮಾತು ಕೊಟ್ಟಿರೋದು ಎಂಪಿ, ಎಂಎಲ್‌ಎಗಳಲ್ಲ ಕಾಂಗ್ರೆಸ್ ಹೈಕಮಾಂಡ್ ಎಂದರು.

ಹೀಗಾಗಿ ಸೋನಿಯಾಗಾಂಧಿ, ಪ್ರಿಯಾಂಕ ಗಾಂಧಿ, ರಾಹುಲ್ ಗಾಂಧಿ, ಸುರ್ಜೆವಾಲ, ಮಲ್ಲಿಕಾರ್ಜುನ ಖರ್ಗೆ ಅವರ ಮುಂದೆ ನಡೆದಿದೆ ಎನ್ನಲಾದ ಈ ಮಾತುಕತೆ ನಿಜವೇ ಆಗಿದ್ದರೆ ಆ ಒಪ್ಪಂದಕ್ಕೆ ತಕ್ಕಂತೆ ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಟ್ಟಲ್ಲಿ ಅವರು ಗ್ರೇಟ್ ಪರ್ಸನ್ ಆಗಲಿದ್ದಾರೆ ಎಂದರು.

ಒಪ್ಪಂದದ ಪ್ರಕಾರ ಅಧಿಕಾರ ನೀಡದೇ ಹೋದಲ್ಲಿ ವಿರೋಧ ಪಕ್ಷದವರಾದ ನಮಗೆ ಸಂತೋಷ ಎಂದು ಹಾಸ್ಯಭರಿತವಾಗಿ ಮಂಜು ಹೇಳಿದರು. ಸಿದ್ದರಾಮಯ್ಯ ಎಂದಿಗೂ ಮಾತು ತಪ್ಪಿದವರಲ್ಲ ನಾನು ಹತ್ತಿರದಿಂದ ಸಿದ್ದರಾಮಯ್ಯ ಅವರನ್ನು ಬಲ್ಲವನಾಗಿದ್ದೇನೆ. ಅವರ ಸುತ್ತಮುತ್ತಲು ಇರುವ ಜೊತೆಗಾರರ ಒತ್ತಡದಿಂದಾಗಿ ಅಧಿಕಾರ ಬಿಟ್ಟುಕೊಡಲು ಹಿಂಜರಿಯುತ್ತಿರಬಹುದು. ಏನೇ ಆದರೂ ಸಿಎಂ ಸ್ಥಾನದ ಹಂಚಿಕೆ ಸಂಬಂಧಿತ ಹೈಕಮಾಂಡ್ ಈ ಬಗ್ಗೆ ತೀರ್ಮಾನ ಕೈಗೊಳ್ಳುತ್ತದೆ. ನಮಗೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರೂ ಒಂದೇ. ಇಬ್ಬರಿಗೂ ಒಳ್ಳೆಯದಾಗಲಿ ಎಂದೂ ಎ.ಮಂಜು ಹೇಳಿದರು.

ಶಾಸಕರಿಂದ ಜನಪರ ಕೆಲಸ: ಕೊಡಗಿನಲ್ಲಿ ಈರ್ವರೂ ಶಾಸಕರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಮಡಿಕೇರಿ ಶಾಸಕ ಡಾ.ಮಂತರ್ ಗೌಡ ಮತ್ತು ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಇವರಿಬ್ಬರ ಬಗ್ಗೆಯೂ ಉತ್ತಮ ಕೆಲಸ ಮಾಡುತ್ತಿರುವ ಜನಪ್ರತಿನಿಧಿಗಳು ಎಂಬ ಮಾತು ರಾಜ್ಯ ಮಟ್ಟದಲ್ಲಿ ವ್ಯಕ್ತವಾಗಿದೆ. ಈ ವರ್ಷ ರಾಜ್ಯವ್ಯಾಪಿ ಮಾತ್ರವಲ್ಲ. ದೇಶದೆಲ್ಲೆಡೆ ಸುರಿದ ಧಾರಾಕಾರ ಮಳೆಯಿಂದಾಗಿ ರಸ್ತೆಗಳು ದುರಸ್ಥಿಗೀಡಾಗಿದೆ. ಕೊಡಗಿನಲ್ಲಿಯೂ ರಸ್ತೆ ಹಾಳಾಗಿದೆ. ಆದರೂ ಇಬ್ಬರೂ ಶಾಸಕರು ಸಮರೋಪಾದಿಯಲ್ಲಿ ರಸ್ತೆಗಳ ದುರಸ್ತಿಗೆ ಮುಂದಾಗಿದ್ದಾರೆ. ಕೊಡಗಿನ ಜನತೆಯಲ್ಲಿಯೂ ಈ ಶಾಸಕರಿಬ್ಬರ ಬಗ್ಗೆ ಮೆಚ್ಚುಗೆ ಮಾತುಗಳು ವ್ಯಕ್ತವಾಗುತ್ತಿದೆ ಎಂದು ಮಂಜು ಹೇಳಿದರು.

ಕೊಡವ ಮುಸ್ಲಿಂ ಸ್ಪೋರ್ಟ್ಸ್ ಅಕಾಡೆಮಿಗೆ ನಾಲ್ವರು ನಿರ್ದೇಶಕರ ನೇಮಕ



ಪೊನ್ನಂಪೇಟೆ, ನ.27–ಕೊಡವ ಮುಸ್ಲಿಂ ಸ್ಪೋರ್ಟ್ಸ್ ಅಕಾಡೆಮಿ (ಕೆ.ಎಂ.ಎಸ್.ಎ)ಯ ಆಡಳಿತ ಮಂಡಳಿಗೆ ನೂತನವಾಗಿ ನಾಲ್ವರು ನಿರ್ದೇಶಕರನ್ನು ನೇಮಿಸಲಾಗಿದೆ. ಕಂಡಂಗಾಲದ ಮಂದಮಾಡ ರಫೀಕ್ (ಮುನ್ನ), ಬೇಗೂರಿನ ಆಲೀರ ಬಿ. ಮೂಸ, ಎಡಪಾಲದ ಕುಪ್ಪೋಡಂಡ ಮಹಮ್ಮದ್ ಮತ್ತು ಚೆರಿಯಪರಂಬುವಿನ ಪರವಂಡ ಸಿರಾಜ್ ಎಂಬುವವರೇ ನೂತನವಾಗಿ ನೇಮಕಗೊಂಡ ನಿರ್ದೇಶಕರಾಗಿದ್ದಾರೆ. ಕೆ.ಎಂ.ಎಸ್.ಎ. ಅಧ್ಯಕ್ಷರಾದ ಆಲೀರ ರಶೀದ್ ಅವರ ಅಧ್ಯಕ್ಷತೆಯಲ್ಲಿ ವಿರಾಜಪೇಟೆಯಲ್ಲಿ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಈ ನೇಮಕ ಪ್ರಕ್ರಿಯೆ ನಡೆಯಿತು.

ಈ ಕುರಿತು ಹೇಳಿಕೆ ನೀಡಿರುವ ಕೆ.ಎಂ.ಎಸ್.ಎ. ಅಧ್ಯಕ್ಷರಾದ ಆಲೀರ ರಶೀದ್, ಕೊಡವ ಮುಸ್ಲಿಂ ಸ್ಪೋರ್ಟ್ಸ್ ಅಕಾಡೆಮಿಯನ್ನು ವಿವಿಧ ಕ್ರೀಡಾ ಆಯೋಜನಾ ಮತ್ತು ಪ್ರತಿಭೆಗಳಿಗೆ ಉತ್ತೇಜನಕಾರಿ ಸಂಘಟನೆಯಾಗಿ ರೂಪಿಸಲಾಗುವುದು. ಇದರ ಭಾಗವಾಗಿ ಜಿಲ್ಲೆಯ ವಿವಿಧೆಡೆಗಳಲ್ಲಿರುವ ಕೊಡವ ಮುಸ್ಲಿಂ ಸಮುದಾಯದ ಕ್ರೀಡಾಸಕ್ತರನ್ನು ಸಂಘಟಿಸಿ ಅಕಾಡೆಮಿಯನ್ನು ಹಂತಹಂತವಾಗಿ ವಿಸ್ತರಿಸಲಾಗುವುದು. ಇದರ ಮೊದಲ ಭಾಗವಾಗಿ ಇವರು ನಿರ್ದೇಶಕರನ್ನು ಆಡಳಿತ ಮಂಡಳಿಗೆ ನೇಮಕಗೊಳಿಸಲಾಗಿದೆ. ಮುಂದೆಯೂ ಮತ್ತಷ್ಟು ಕ್ರೀಡಾಸಕ್ತರನ್ನು ಸೇರಿಸಿ ಕೆ.ಎಂ.ಎಸ್.ಎಯನ್ನು ಇನ್ನಷ್ಟು ವಿಸ್ತರಿಸಿ ಸಂಘಟಿಸುವ ಗುರಿ ಹೊಂದಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕಾಂಕ್ರೀಟ್ ರಸ್ತೆ ಲೋಕಾರ್ಪಣೆಗೊಳಿಸಿದ ಶಾಸಕ ಪೊನ್ನಣ್ಣ

ವಿರಾಜಪೇಟೆ, ನ.27– ರಾಜ್ಯ ಸರಕಾರದ ವಿಶೇಷ ಅನುದಾನದ ಅಡಿಯಲ್ಲಿ ವಿರಾಜಪೇಟೆ ಪುರಸಭಾ ವ್ಯಾಪ್ತಿಯ ನೆಹರು ನಗರದಲ್ಲಿ, ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಅವರ ವಿಶೇಷ ಪ್ರಯತ್ನದಿಂದ 20 ಲಕ್ಷ ರೂ.ಗಳ ಅನುದಾನದಲ್ಲಿ ನಿರ್ಮಾಣಗೊಂಡ, ಕಾಂಕ್ರೀಟ್ ರಸ್ತೆಯನ್ನು ಲೋಕಾರ್ಪಣೆಗೊಳಿಸಲಾಯಿತು.


ವಿರಾಜಪೇಟೆಯಲ್ಲಿ ನಿರ್ಮಾಣಗೊಂಡ ಕಾಂಕ್ರೀಟ್ ರಸ್ತೆಯನ್ನು ಶಾಸಕ ಪೊನ್ನಣ್ಣ ಲೋಕಾರ್ಪಣೆಗೊಳಿಸಿದರು.

ತಾವೇ ಸ್ವತಃ ನೂತನ ರಸ್ತೆಯಲ್ಲಿ ಸ್ಕೂಟರ್ ಚಲಾಯಿಸುವ ಮೂಲಕ ರಸ್ತೆಯನ್ನು ಲೋಕಾರ್ಪಣೆಗೊಳಿಸಿದ ಪೊನ್ನಣ್ಣ ಸ್ಥಳೀಯರ ಮನವಿ ಸ್ವೀಕರಿಸಿ ಮಾತನಾಡಿ, ಪುರಸಭೆ ಅಧ್ಯಕ್ಷರಾಗಿದ್ದ ದೇಚಮ್ಮ ಅವರ ಮುತುವರ್ಜಿಯಿಂದ ನೆಹರುನಗರಕ್ಕೆ ಇಂದು ಉತ್ತಮ ರಸ್ತೆ ನಿರ್ಮಾಣವಾಗಿದೆ. ರಸ್ತೆ ನಿರ್ಮಾಣ ಮಾಡಿಕೊಡಬೇಕು ಎಂದು ದೇಚಮ್ಮ ಮನವಿ ಮಾಡುವುದರೊಂದಿಗೆ ಎಲ್ಲ ರಸ್ತೆಗಳು ಅಭಿವೃದ್ಧಿಯಾಗಬೇಕು ಎನ್ನುವ ನಿಟ್ಟಿನಲ್ಲಿ ವಿಶೇಷ ಅನುದಾನ ತಂದು ಕಾಮಗಾರಿ ಮಾಡುತ್ತಿದ್ದೇವೆ. ಮಳೆಯಿಂದಾಗಿ ರಸ್ತೆಗಳು ಎಲ್ಲ ಕಡೆ ಸಂಪೂರ್ಣ ಹಾಳಾಗಿವೆ. ಮಳೆ ಕಡಿಮೆಯಾದ ಹಿನ್ನೆಲೆ ಕೆಲವು ಕಡೆಗಳಲ್ಲಿ ಕಾಮಗಾರಿ ಪ್ರಾರಂಭ ಮಾಡಲಾಗುತ್ತಿದೆ ಆದಷ್ಟು ಬೇಗ ಎಲ್ಲ ಗ್ರಾಮೀಣ ಪ್ರದೇಶ ಸೇರಿದಂತೆ ಮುಖ್ಯರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತದೆ. ಈಗಾಗಲೇ ಪುರಸಭೆ ವ್ಯಾಪ್ತಿಯ ರಸ್ತೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಬಿಡುಗಡೆಯಾಗಿದೆ. ಹಂತ ಹಂತವಾಗಿ ಕಾಮಗಾರಿ ಪ್ರಾರಂಭವಾಗುತ್ತದೆ. ಇದಕ್ಕೆ ಎಲ್ಲರ ಸಹಕಾರ ಬೇಕು. ಜನರ ಅಭಿವೃದ್ಧಿಯೇ ಸರಕಾರದ ಮೂಲ ಉದ್ದೇಶ ಎಂದರು.

ಪುರಸಭೆ ಮಾಜಿ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಮಾತನಾಡಿ, ಶಾಸಕ ಪೊನ್ನಣ್ಣ ಅವರ ವಿಶೇಷ ಪ್ರಯತ್ನದಿಂದ ರಾಜ್ಯ ಸರಕಾರದ ಎಸ್‌ಎಫ್‌ಸಿ ಅನುದಾನದಲ್ಲಿ ಪುರಸಭೆ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 20 ಕೋಟಿ ರೂ ಅನುದಾನದಲ್ಲಿ ಪ್ರಾರಂಭಿಸಲಾದ ಮೊದಲ ಕಾಮಗಾರಿ ಇದಾಗಿದ್ದು ಕಾಮಗಾರಿ ಪೂರ್ಣಗೊಂಡು ಲೋಕಾರ್ಪಣೆಗೊಳಿಸಲಾಗಿದೆ ಎಂದರು.

ನೆಹರು ನಗರ ಭಾಗದಲ್ಲಿ ರಸ್ತೆ ಸಂಪೂರ್ಣ ಹದಗೆಟ್ಟು ಸಾರ್ವಜನಿಕರು ನಡೆದಾಡಲು ಕೂಡ ಕಷ್ಟಪಡಬೇಕಾಗಿತ್ತಲ್ಲದೇ, ಆಟೋ ಚಾಲಕರು ಅಲ್ಲಿಗೆ ಬಾಡಿಗೆ ತೆರಳಲು ಹಿಂದೇಟು ಹಾಕುತ್ತಿದ್ದರು. ಹೆಚ್ಚು ಬಾಡಿಗೆ ಬೇಕೆನ್ನುತ್ತಿದ್ದರು. ಇದರಿಂದ ಇಲ್ಲಿನ ನಾಗರೀಕರಿಗೆ ಬಹಳ ಅನಾನುಕೂಲ ಉಂಟಾಗಿತ್ತು. ಇದೀಗ ನೂತನ ರಸ್ತೆ ನಿರ್ಮಾಣವಾಗಿರುವುದರಿಂದ ಜನತೆ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ ಎಂದರು.

ಈ ಸಂದರ್ಭದಲ್ಲಿ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಪುರಸಭೆ ಮಾಜಿ ಸದಸ್ಯರಾದ ಅಗಸ್ಟಿನ್ ಬೆನ್ನಿ, ಮಹಮ್ಮದ್ ರಾಫಿ, ಅತಿಫ್ ಮನ್ನ, ಹಮೀದ್, ದಿನೇಶ್ ನಂಬಿಯಾರ್, ಪುರಸಭೆ ಮುಖ್ಯ ಅಧಿಕಾರಿ ಪಿ.ಕೆ.ನಾಚಪ್ಪ ವಿರಾಜಪೇಟೆ ಯುವ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಬೀರ್, ಕಾಂಗ್ರೆಸ್ ಮುಖಂಡರಾದ ಜೋಕಿಮ್, ಮಂಜುನಾಥ್, ಸಂತೋಷ್, ವಕೀಲರಾದ ನರೇಂದ್ರ ಕಾಮತ್, ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಇಂದು ಆಲದ ಗಿಡ ನೆಡುವ ಕಾರ್ಯಕ್ರಮ

ಮಡಿಕೇರಿ, ನ.27– ಕೊಡವ ಸಮಾಜ ವತಿಯಿಂದ ನ.28 ರಂದು ಬೆಳಗ್ಗೆ 8 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಕ್ರೀಡಾಂಗಣದ ಬಳಿ ಆಲದ ಗಿಡ ನೆಡುವ ಕಾರ್ಯಕ್ರಮ ನಡೆಯಲಿದೆ.

ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ. ಮಂತರ್‌ಗೌಡ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಚಿವ ಮೇರಿಯಂಡ ಸಿ. ನಾಣಯ್ಯ ಇತರರು ಭಾಗವಹಿಸುವರು.

ಇಂದು ನಿವೃತ್ತ ಯೋಧರ ಒಕ್ಕೂಟ ಅರೆಸೇನಾ ಪಡೆಯ 13ನೇ ವಾರ್ಷಿಕ ಮಹಾಸಭೆ

ಮಡಿಕೇರಿ, ನ.27– ಕೊಡಗು ಜಿಲ್ಲೆಯ ನಿವೃತ್ತ(ಮಾಜಿ) ಯೋಧರ ಒಕ್ಕೂಟ ಅರೆಸೇನಾಪಡೆಯ 13ನೇ ವಾರ್ಷಿಕ ಮಹಾಸಭೆಯು ನವೆಂಬರ್ 28 ರಂದು ಬೆಳಗ್ಗೆ 10.30 ಗಂಟೆಗೆ ಸಂಘದ ಅಧ್ಯಕ್ಷರಾದ ಎಂ.ಜಿ.ಯತೀಶ್ ಅವರ ಅಧ್ಯಕ್ಷತೆಯಲ್ಲಿ ನಗರದ ಮೈತ್ರಿ ಪೊಲೀಸ್ ಸಮುದಾಯ ಭವನದಲ್ಲಿ ನಡೆಯಲಿದೆ.

ಹಾಸ್ಟೆಲ್‌ಗಳಿಗೆ ಉಪಲೋಕಾಯುಕ್ತರ ಭೇಟಿ, ಪರಿಶೀಲನೆ

ಹಾಸ್ಟೆಲ್ ಅವ್ಯವಸ್ಥೆ ಬಗ್ಗೆ ಅಧಿಕಾರಿಗಳಿಗೆ ತರಾಟೆ

ಚಾಮರಾಜನಗರ, ನ.27– ಕರ್ನಾಟಕ ರಾಜ್ಯ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಗುರುವಾರ ರಾತ್ರಿ ನಗರದ ವಿವಿಧ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.


ಕರ್ನಾಟಕ ರಾಜ್ಯ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಗುರುವಾರ ರಾತ್ರಿ ನಗರದ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ನಗರದ ಕರ್ನಾಟಕ ಕಸ್ತೂರ ಬಾ ಗಾಂಧಿ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿ ವಸತಿ ನಿಲಯದಲ್ಲಿ ಮಂಚ ಇಲ್ಲದಿರುವುದು, ಹಾಸಿಗೆ ಮೇಲೆ ಹೊದಿಕೆ ಇಲ್ಲದಿರುವುದನ್ನು ಕಂಡು ಆಕ್ರೋಶ ವ್ಯಕ್ತಪಡಿಸಿದರು. ಸ್ನಾನದ ಗೃಹ, ಶೌಚಾಲಯಗಳನ್ನು ವೀಕ್ಷಿಸಿ ಅಲ್ಲಿ ನೀರು ಹರಿಯದೆ ನಿಂತಿದ್ದನ್ನು ಕಂಡು ಖಾರವಾಗಿ ಪ್ರಶ್ನಿಸಿದರು. ಅಲ್ಲದೇ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸದಿರುವ ಬಗ್ಗೆ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಇದೇ ವೇಳೆ ಹಾಸ್ಟೆಲ್ ನಿರ್ವಹಣೆಯ ಸಮಗ್ರ ಶಿಕ್ಷಾ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ವಿದ್ಯಾಕುಮಾರಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಉಪಲೋಕಾಯುಕ್ತರು ಸ್ಥಳೀಯ ಹಾಸ್ಟೆಲ್‌ಗಳಿಗೆ ಸಮರ್ಪಕ ಸೌಲಭ್ಯಗಳನ್ನು ಇನ್ನು 2 ತಿಂಗಳೊಳಗೆ ಕಲ್ಪಿಸುವಂತೆ ತಿಳಿಸಿದರು.

ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಉಪಲೋಕಾಯುಕ್ತರು ಊಟ, ವಸತಿ, ಹೊದಿಕೆಗಳು, ಪುಸ್ತಕಗಳು ಹೇಗೆ ನೀಡಲಾಗುತ್ತಿದೆ ಎಂಬುದನ್ನು ಕೇಳಿ ವಿವರ ಪಡೆದರು. ಸ್ಥಳದಲ್ಲಿದ್ದ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಕಾಂತ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತ ಶೆಟ್ಟಿ, ವಸತಿ ನಿಲಯದ ನಿರ್ವಹಣೆ ಹೊತ್ತಿರುವ ಮುಖ್ಯ ಶಿಕ್ಷಕ ಮಹದೇವಸ್ವಾಮಿ ಅವರನ್ನು ಸರಿಯಾಗಿ ವ್ಯವಸ್ಥೆ ಕಲ್ಪಿಸದಿರುವ ಬಗ್ಗೆ ತರಾಟೆಗೆ ತೆಗೆದುಕೊಂಡರು. ಅಲ್ಲದೇ ವಸತಿ ನಿಲಯಕ್ಕೆ ಮೂಲ ಸೌಲಭ್ಯ ಕಲ್ಪಿಸದಿರುವ ಬಗ್ಗೆ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳುವಂತೆ ಸೂಚಿಸಿದರು.

ವಸತಿ ನಿಲಯಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಲು ಮುಂದಾಗಬೇಕು. ಮೆನು ಪ್ರಕಾರ ಊಟ, ತಿಂಡಿ, ಉಪಹಾರ ನೀಡಬೇಕು. ಮಕ್ಕಳ ಭವಿಷ್ಯವನ್ನು ಹಗುರವಾಗಿ ತೆಗೆದುಕೊಳ್ಳಬಾರದು. ನಿರ್ಲಕ್ಷ್ಯ ಮುಂದುವರೆಸಿದರೆ ಗಂಭೀರ ಕ್ರಮ ವಹಿಸಲಾಗುತ್ತದೆ ಎಂದು ಶಿಕ್ಷಣಾಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಈ ವೇಳೆ ಸಿವಿಲ್ ನ್ಯಾಯಾಧೀಶರು ಮತ್ತು ಉಪಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಕಿರಣ್ ಪಿ.ಎಂ.ಪಾಟೀಲ್, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ, ಲೋಕಾಯುಕ್ತ ಎಸ್‌ಪಿ ಉದೇಶ್, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಒ ಮೋನಾ ರೋತ್, ಎಸ್‌ಪಿ ಡಾ.ಬಿ.ಟಿ.ಕವಿತಾ, ಲೋಕಾಯುಕ್ತ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಇತರರಿದ್ದರು.

ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೂ ಭೇಟಿ

ಇದಕ್ಕೂ ಮೊದಲು ನಗರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸೇರಿದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿದ್ಯಾರ್ಥಿನಿಯರ ಕೊಠಡಿಗಳು, ಊಟದ ಹಾಲ್, ಶೌಚಾಲಯ, ಇನ್ನಿತರ ಸೌಲಭ್ಯಗಳನ್ನು ವೀಕ್ಷಿಸಿದರು.

ವಿದ್ಯಾರ್ಥಿನಿಯರೊಂದಿಗೆ ಮಾತನಾಡಿ ನೀಡುತ್ತಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು. ಪ್ರತಿ ಕೊಠಡಿಯಲ್ಲೂ ಪುಸ್ತಕ, ಇನ್ನಿತರ ಸಾಮಗ್ರಿಗಳನ್ನು ಇಟ್ಟುಕೊಳ್ಳಲು ಪ್ರತ್ಯೇಕ ಕಪಾಟುಗಳನ್ನು ನಿರ್ಮಿಸಬೇಕು, ಉದ್ದನೆಯ ಕನ್ನಡಿಗಳನ್ನೂ ಅಳವಡಿಸಬೇಕು ಎಂದು ಇಲಾಖಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಕ್ಕಳೊಂದಿಗೆ ಸಂವಾದ ನಡೆಸಿದ ಉಪ ಲೋಕಾಯುಕ್ತರು ಏನೇನು ಸೌಲಭ್ಯಗಳು ಕೊರತೆಯಾಗಿದೆ ಎಂಬುದನ್ನು ಕೇಳಿ ತಿಳಿದುಕೊಂಡರು. ವಿದ್ಯಾರ್ಥಿಗಳ ಅಹವಾಲು ಆಲಿಸಿದ ವೇಳೆ ಸ್ನಾನದ ಬಿಸಿ ನೀರಿಗಾಗಿ ಈಗಿರುವ ಗೀಜರ್, ಸೋಲಾರ್ ಜೊತೆಗೆ ಹೆಚ್ಚುವರಿಯಾಗಿ ಇನ್ಸ್‌ಟೆಂಟ್ ಗೀಜರ್‌ಗಳನ್ನು ಅಳವಡಿಸಬೇಕು. ಪ್ರತಿ ಮಹಡಿಗೂ ನೀರಿನ ಕ್ಯಾನ್‌ಗಳನ್ನು ಇಡಬೇಕು. ಊಟ, ಉಪಹಾರ ಸಮರ್ಪಕವಾಗಿ ಸಿದ್ಧಪಡಿಸಲು ನುರಿತ ಅಡುಗೆ ತಯಾರಕರಿಂದ ಹಾಸ್ಟೆಲ್ ಅಡುಗೆ ಮಾಡುವ ಸಿಬ್ಬಂದಿಗೆ ತರಬೇತಿ ಕೊಡಿಸಬೇಕು. ಗ್ರಂಥಾಲಯ, ಕಂಪ್ಯೂಟರ್‌ಗಳ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಇಂದು ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ



ಚಾಮರಾಜನಗರ, ನ.27– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಚಾಮರಾಜನಗರ ಜಿಲ್ಲಾ ಘಟಕದ 2025–28ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಗರದಲ್ಲಿ ನ.28ರಂದು ನಡೆಯಲಿದೆ.

ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ವರ್ತಕರ ಭವನದಲ್ಲಿ ಬೆಳಗ್ಗೆ 11 ಗಂಟೆಗೆ ನಡೆಯುವ ಸಮಾರಂಭವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಸುನೀಲ್ ಬೋಸ್ ಸನ್ಮಾನಿಸಲಿದ್ದಾರೆ. ಶಾಸಕ ಎ.ಆರ್.ಕೃಷ್ಣಮೂರ್ತಿ ನೂತನ ಪದಾಧಿಕಾರಿಗಳಿಗೆ ಪ್ರಮಾಣ ವಚನ ಭೋದಿಸಲಿದ್ದಾರೆ. ಶಾಸಕ ಗಣೇಶ ಪ್ರಸಾದ್ ಡಿವಿಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಇದೇ ವೇಳೆ ಎಂಎಲ್‌ಸಿ ಕೆ. ಶಿವಕುಮಾರ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಂಶಿ ಪ್ರಸನ್ನಕುಮಾರ್‌ರನ್ನು ಸನ್ಮಾನಿಸಲಾಗುವುದು.

ಶಾಸಕ ಎಂ.ಆರ್.ಮಂಜುನಾಥ್ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ಜಿಲ್ಲಾಧಿಕಾರಿ ಶಿಲ್ಪಾನಾಗ್, ಕೆಯುಡಬ್ಲ್ಯುಜೆ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ರಾಜ್ಯ ಕಾರ್ಯದರ್ಶಿ ಸೋಮಶೇಖರ ಕೆರೆಗೋಡು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ನಿಕಟಪೂರ್ವ ಅಧ್ಯಕ್ಷ ದೇವರಾಜು ಕಪ್ಪಸೋಗೆ ಅವರು ನೂತನ ಅಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ ಅವರಿಗೆ ಅಧಿಕಾರ ಹಸ್ತಾಂತರ ಮಾಡುವರು. ಕಾರ್ಯಕ್ರಮಕ್ಕೆ ಪತ್ರಿಕಾ ಮಿತ್ರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸುವಂತೆ ಪ್ರಕಟಣೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು ತಿಳಿಸಿದ್ದಾರೆ.

ಬಂಡೀಪುರದಲ್ಲಿ ಸಫಾರಿ ಆರಂಭಿಸುವಂತೆ ಮನವಿ


ಬಂಡೀಪುರದಲ್ಲಿ ಸಫಾರಿ ಆರಂಭಿಸುವಂತೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸ್ಥಗಿತಗೊಳಿರುವ ಸಫಾರಿಯನ್ನು ಪುನರಾರಂಭಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಜಿಲ್ಲಾ ಹೋಟೆಲ್ ಮಾಲೀಕರ ಸಂಘದಿಂದ ಮನವಿ ಸಲ್ಲಿಸಲಾಯಿತು.

ನಗರದ ಪೊಲೀಸ್ ಕವಾಯತ್ತು ಮೈದಾನದಲ್ಲಿ ಸಂಘದ ಪದಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ ಸ್ಥಗಿತಗೊಳಿಸಿರುವುದರಿಂದ ಜಿಲ್ಲೆಯ ಪ್ರವಾಸೋದ್ಯಮ ಹಾಗೂ ಸ್ಥಳೀಯ ಹೋಟೆಲ್ ರೆಸಾರ್ಟ್, ಪ್ರವಾಸಿ ಮಾರ್ಗದರ್ಶಕರು ಸೇರಿದಂತೆ ಇನ್ನೂ ಹಲವರ ಜೀವನೋಪಾಯಕ್ಕೆ ದೊಡ್ಡ ಮಟ್ಟದಲ್ಲಿ ಹಿನ್ನಡೆಯಾಗಿದೆ ಆದ್ದರಿಂದ ವೈಜ್ಞಾನಿಕ ಹಾಗೂ ಪರಿಣಾಮಕಾರಿ ಸುರಕ್ಷಿತ ವೈಜಾನಿಕ ಕ್ರಮಗಳನ್ನು ಕೈಗೊಂಡು, ವನ್ಯಜೀವಿಗಳ ಸಂರಕ್ಷಣೆಗೆ ಯಾವುದೇ ಹಾನಿಯಾಗದಂತೆ ನಿಯಮಿತ ಮಾರ್ಗಸೂಚಿಗಳಡಿ ಸಫಾರಿ ಪುನರಾರಂಭಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಎಂ.ನಂದ್ಯಪ್ಪಶೆಟ್ಟಿ, ಶ್ರೀನಿವಾಸ್ ರಾವ್, ಪ್ರತಾಪ್, ಪವನ್ ಇತರರಿದ್ದರು.

ಲಿಂಗರಾಜಣ್ಣ ನಿಧನ



ಬೇಗೂರು(ಗುಂಡ್ಲುಪೇಟೆ), ನ.27– ಇಲ್ಲಿಗೆ ಸಮೀಪದ ಕಮರಹಳ್ಳಿ ಗ್ರಾಮದ ನಿವಾಸಿ, ನಿಟ್ರೆ ಗ್ರಾಪಂ ಮಾಜಿ ಅಧ್ಯಕ್ಷೆ ನಾಗಲಾಂಬಿಕೆ ಅವರ ಪತಿ, ನ್ಯಾಯಬೆಲೆ ಅಂಗಡಿ ಮಾಲೀಕ ಲಿಂಗರಾಜಣ್ಣ(60) ಗುರುವಾರ ನಿಧನರಾದರು.

ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

ಪರಿಸರ ಪ್ರೇಮಿಗಳಿಗೆ ಸಾಲುಮರದ ತಿಮ್ಮಕ್ಕ ಸ್ಫೂರ್ತಿ

ಸಾಲು ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ

ಚಾಮರಾಜನಗರ, ನ.27– ಸಾಲುಮರದ ತಿಮ್ಮಕ್ಕ ಅವರಿಗೆ ಮಕ್ಕಳಿಲ್ಲದಿದ್ದರೂ ಅವರು ಗಿಡಗಳನ್ನೇ ತಮ್ಮ ಮಕ್ಕಳೆಂದು ತಿಳಿದು ಪರಿಸರದ ಮೇಲೆ ಅಪಾರ ಕಾಳಜಿ ಹೊಂದಿ ಸಾಲು ಗಿಡಮರಗಳನ್ನು ನೆಟ್ಟು ಬೆಳೆಸಿದರು. ಅಲ್ಲದೇ ಅನೇಕ ಪರಿಸರ ಪ್ರೇಮಿಗಳಿಗೆ ಸ್ಫೂರ್ತಿಯಾಗಿದ್ದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.



ಚಾಮರಾಜನಗರದಲ್ಲಿ ಗಿಡ ನೆಡುವ ಕಾರ್ಯಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಇತರರು ಚಾಲನೆ ನೀಡಿದರು.

ನಗರದ ಸಂತೇಮರಹಳ್ಳಿ ವೃತ್ತದಿಂದ ನಂಜನಗೂಡಿಗೆ ಸಂಪರ್ಕ ಕಲ್ಪಿಸುವ ರಸ್ತೆ ವಿಭಜಕಕ್ಕೆ ಈಶ್ವರಿ ಸೋಷಿಯಲ್ ಟ್ರಸ್ಟ್ ವತಿಯಿಂದ ಡಾ.ಸಾಲುಮರದ ತಿಮ್ಮಕ್ಕ ಅವರ ಸ್ಮರಣಾರ್ಥ 114 ಸಾಲು ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೆಹಲಿಯಲ್ಲಿ ಕಳಪೆ ಗುಣಮಟ್ಟದ ಗಾಳಿ ದಾಖಲಾಗಿರುವುದರಿಂದ 60 ವರ್ಷ ಮೇಲ್ಪಟ್ಟವರು ನ್ಯಾಯಾಲಯಕ್ಕೆ ಆಗಮಿಸುವ ಅಗತ್ಯವಿಲ್ಲ ಅವರು ವರ್ಚುವೆಲ್ ಮೂಲಕ ಭಾಗವಹಿಸಬಹುದು ಎಂದು ನ್ಯಾಯಾಧೀಶರು ತಿಳಿಸಿದ್ದಾರೆ. ನಮ್ಮೂರಿನಲ್ಲಿ ಶುದ್ಧ ಗಾಳಿ ಪಡೆಯುತ್ತಿರುವ ನಾವೇ ಧನ್ಯರು. ಉತ್ತಮ ಗಾಳಿ ಪಡೆಯಬೇಕಾದರೆ ಹೆಚ್ಚು ಗಿಡಮರಗಳನ್ನು ಬೆಳೆಸಬೇಕು ಎಂದ ಅವರು ಶುದ್ಧ ಗಾಳಿ ಪಡೆಯುವಲ್ಲಿ ಚಾಮರಾಜನಗರ ದೇಶದಲ್ಲೇ ಉತ್ತಮ ಸ್ಥಾನ ಪಡೆದಿದೆ. ವೆಂಕಟೇಶ್ ಅವರ ಪರಿಸರ ಕಾಳಜಿಗೆ ನಾವು ಸಹ ಸಹಾಯ ಮಾಡುತ್ತಿದ್ದೇವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ದೀನಬಂಧು ಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ.ಜಯದೇವ, ಒಳ್ಳೆಯ ಮನುಷ್ಯರು ಇರುವವರೆಗೂ ಒಳ್ಳೆಯ ಕೆಲಸಗಳು ಹಣದ ಕೊರತೆಯಿಂದ ನಿಲ್ಲುವುದಿಲ್ಲ. ವೆಂಕಟೇಶ್ ಅವರಂತಹ ವ್ಯಕ್ತಿಗಳು ಪ್ರಕೃತಿ ಮಾತೆ ಕರೆಗೆ ಓಗೊಟ್ಟು ಸಾಲು ಗಿಡಮರಗಳನ್ನು ನೆಡುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದರಿಂದ ಚಾಮರಾಜನಗರದಲ್ಲಿ ಹಸಿರು ವಾತಾವರಣ ಸೃಷ್ಟಿಯಾಗಿದೆ. ಮರಗಳು ಋಷಿಗಳು ಇದ್ದ ಹಾಗೆ. ಅದು ಕಡಿಯಲು ಕೊಡಲಿ ತಂದವನಿಗೂ ನೆರಳು ಕೊಡುತ್ತವೆ ಎಂದರು.

ಅಳಿವಿನಂಚಿನಲ್ಲಿರುವ ಮಾಗಳಿ ಬೇರು ಮುಂತಾದ ಸಸ್ಯ ಪ್ರಭೇಧಗಳನ್ನು ಸಂರಕ್ಷಣೆ ಮಾಡಿ ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕಿದೆ ಎಂದು ತಿಳಿಸಿದರು.

ಈಶ್ವರಿ ಸೋಷಿಯಲ್ ಟ್ರಸ್ಟ್ ಅಧ್ಯಕ್ಷ ಸಿ.ಎಂ.ವೆಂಕಟೇಶ್ ಮಾತನಾಡಿ, ಸಾಲುಮರದ ತಿಮ್ಮಕ್ಕನವರ ನೆನಪಿಗಾಗಿ ಚಾಮರಾಜನಗರದಲ್ಲಿ 114 ಫಾಕ್ಸ್‌ಟೈಲ್ ಸಸ್ಯ ಪ್ರಭೇದದ ಎತ್ತರದ ಗಿಡಗಳನ್ನು ತೆಲಂಗಾಣದಿಂದ ತಂದು ನೆಡಲಾಗುತ್ತಿದೆ. ನಗರದ ಸೌಂದರ್ಯವನ್ನು ಹೆಚ್ಚಿಸಲು ಈ ಗಿಡಗಳು ಸಹಕಾರಿಯಾಗಿದೆ. ಬಹು ಎತ್ತರದ ಗಿಡಗಳನ್ನು ನೆಡೆವುದು ನನ್ನ ಬಹುದಿನಗಳ ಕನಸಾಗಿತ್ತು ಎಂದರು.

ಈ ವೇಳೆ ಪರಿಸರ ಪ್ರೇಮಿಗಳಾದ ಕರಿಘಟ್ಟ ರಮೇಶ್, ಪಾಂಡವಪುರ ಲವಕುಮಾರ್, ಗಂಟಯ್ಯ(ಕೃಷ್ಣಪ್ಪ) ಹಾಗೂ ಬಂಗಾರ ನಾಯಕ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭ ಬಿಎಸ್‌ವಿ ಪ್ರತಿಷ್ಠಾನದ ವೆಂಕಟನಾಗಪ್ಪಶೆಟ್ಟಿ, ಮುಖಂಡ ವೆಂಕಟರಮಣಸ್ವಾಮಿ, ನಂದಕುಮಾರ್ ಆಭರಣ ಮಾಲೀಕ ಶ್ರೀನಿಧಿ, ಉದ್ಯಮಿ ಶ್ರೀನಿಧಿ ಕುಮಾರ್, ಮಾಜಿ ತಾಪಂ ಸದಸ್ಯ ದಯಾನಿಧಿ ಸೇರಿದಂತೆ ಇತರರಿದ್ದರು.

ಇಂದು ಉಪ ಲೋಕಾಯುಕ್ತರಿಂದ ದೂರು ವಿಚಾರಣೆ

ಚಾಮರಾಜನಗರ, ನ.27– ಕರ್ನಾಟಕ ರಾಜ್ಯ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ನ.28ರಂದು ನಗರದ ಜಿಲ್ಲಾಡಳಿತ ಭವನದಲ್ಲಿರುವ ಕೆಡಿಪಿ ಸಭಾಂಗಣದಲ್ಲಿ ಲೋಕಾಯುಕ್ತ ಸಂಸ್ಥೆಯಲ್ಲಿ ಈಗಾಗಲೇ ದಾಖಲಾಗಿರುವ ದೂರು ಅರ್ಜಿಗಳ ಸಂಬಂಧ ವಿಚಾರಣೆ ನಡೆಸಲಿದ್ದಾರೆ.

ಬೆಳಗ್ಗೆ 9 ಗಂಟೆಗೆ ಕೆಡಿಪಿ ಸಭಾಂಗಣದಲ್ಲಿ ಬಾಕಿ ಇರುವ ದೂರುಗಳ ವಿಚಾರಣೆ ಸಂಬಂಧ ಕಾರ್ಯಕ್ರಮ ಉದ್ಘಾಟಿಸುವರು. ಬಳಿಕ ಬೆಳಗ್ಗೆ 10 ರಿಂದ ಮಧ್ಯಾಹ್ನ 1.30 ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 6 ರವರೆಗೆ ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದಂತೆ ಬಾಕಿ ಇರುವ ದೂರುಗಳ ಸಂಬಂಧ ದೂರುದಾರರು/ ಎದುರುದಾರರ ಸಮ್ಮುಖದಲ್ಲಿ ವಿಚಾರಣೆ ನಡೆಸುವರು. ಈ ಅವಧಿಯಲ್ಲಿ ಸಾರ್ವಜನಿಕರಿಂದ ಹೊಸದಾಗಿ ಯಾವುದೇ ದೂರು ಸ್ವೀಕರಿಸುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.



ಇಂದಿನಿಂದ ಸಂದೇಶ್‌ರ ಜಿಎಸ್‌ಟಿ ತೆರೆಗೆ

ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಯಶಸ್ವಿ ಚಿತ್ರಗಳನ್ನು ನೀಡಿರುವ ರಾಷ್ಟ್ರಪ್ರಶಸ್ತಿ ವಿಜೇತ ಸಂದೇಶ್ ನಾಗರಾಜ್ ಅವರು ಅರ್ಪಿಸುವ, ಸಂದೇಶ್ ಎನ್. ನಿರ್ಮಾಣದ ಹಾಗೂ ಸೃಜನ್ ಲೋಕೇಶ್ ನಾಯಕನಾಗಿ ನಟಿಸಿ, ಪ್ರಥಮ ಬಾರಿಗೆ ನಿರ್ದೇಶನ ಮಾಡಿರುವ 'ಜಿಎಸ್‌ಟಿ' ಚಿತ್ರ ಈವಾರ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಬಿಡುಗಡೆಯಾಗಿದೆ.

ಜಿಎಸ್‌ಟಿ ಚಿತ್ರವು ಹಲವು ವಿಶೇಷತೆಗಳನ್ನು ಒಳಗೊಂಡಿದೆ. ಈ ಚಿತ್ರದಲ್ಲಿ ನಿರ್ಮಾಪಕ ಸಂದೇಶ್ ಅವರು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಅವರ ಪಾತ್ರ ಏನೆಂಬುದನ್ನು ನಿರ್ದೇಶಕ ಸೃಜನ್ ಲೋಕೇಶ್ ಗುಪ್ತವಾಗಿಟ್ಟಿದ್ದಾರೆ. ಇನ್ನು ಈ ಚಿತ್ರದಲ್ಲಿ ಹಿರಿಯನಟಿ ಗಿರಿಜಾ ಲೋಕೇಶ್, ಸೃಜನ್ ಲೋಕೇಶ್ ಹಾಗೂ ಸೃಜನ್‌ರ ಪುತ್ರ ಸುಕೃತ್ ಮೂರೂ ಜನ ಅಭಿನಯಿಸಿದ್ದಾರೆ. ಅಜ್ಜಿ, ಮಗ ಹಾಗೂ ಮೊಮ್ಮಗ ಈ ಮೂವರನ್ನೂ ಒಟ್ಟಿಗೆ ತೆರೆಯಮೇಲೆ ಈ ಚಿತ್ರದಲ್ಲಿ ನೋಡಬಹುದು. ತಮ್ಮ ನಿರ್ದೇಶನದ ಮೊದಲ ಚಿತ್ರದಲ್ಲೇ ಸೃಜನ್ ತಮ್ಮ ತಾಯಿ ಹಾಗೂ ಮಗನಿಗೆ ಆಕ್ಷನ್ ಕಟ್ ಹೇಳಿದ್ದಾರೆ. ಮನರಂಜನೆಯೇ ಪ್ರಧಾನವಾಗಿರುವ ಜಿಎಸ್‌ಟಿ ಚಿತ್ರಕ್ಕೆ 'ಘೋಸ್ಟ್ ಇನ್ ಟ್ರಬಲ್' ಎಂಬ ಅಡಿಬರಹವಿದೆ.



ಈ ಚಿತ್ರದಲ್ಲಿ ಸೃಜನ್ ಲೋಕೇಶ್ ಜತೆ ನಾಯಕಿಯಾಗಿ ರಜನಿ ಭಾರದ್ವಾಜ್ ನಟಿಸಿದ್ದಾರೆ. ಪ್ರಮೋದ್ ಶೆಟ್ಟಿ, ಗಿರಿಜಾ ಲೋಕೇಶ್, ಶೋಭ್‌ರಾಜ್, ಶರತ್ ಲೋಹಿತಾಶ್ವ, ನಿವೇದಿತಾ, ಅರವಿಂದ್‌ರಾವ್, ತಬಲಾನಾಣಿ, ರವಿಶಂಕರ್‌ಗೌಡ, ವಿನೋದ್ ಗೊಬ್ಬರಗಾಲ, ಮಾಸ್ಟರ್ ಸುಕೃತ್ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಚಂದನ್ ಶೆಟ್ಟಿ ಅವರ ಸಂಗೀತ ನಿರ್ದೇಶನ ಹಾಗೂ ಗುಂಡ್ಲುಪೇಟೆ ಸುರೇಶ್ ಅವರ ಛಾಯಾಗ್ರಹಣವಿರುವ ಈ ಚಿತ್ರಕ್ಕೆ ರಾಜಶೇಖರ್ ಸಂಭಾಷಣೆ ಬರೆದಿದ್ದಾರೆ. ತೇಜಸ್ವಿ ಕೆ. ನಾಗ್ ಈ ಚಿತ್ರದ ಸಹ ನಿರ್ದೇಶಕರು.


ಗುಳಿಗಾ ಗುಳಿಗಾ...ಹಾಡು ದೈವಕ್ಕೆ ಖುಷಿ ತಂದಿದೆ

ಜ್ಯೋತಿಷ್ಯದಲ್ಲಿ ಕಂಡುಬಂದ ಸತ್ಯ

ಇತ್ತೀಚೆಗೆ 'ಕೊರಗಜ್ಜ' ಚಿತ್ರದಲ್ಲಿ ಜಾವೆದ್ ಆಲಿ ಮತ್ತು ಸುಧೀರ್ ಅತ್ತಾವರ್ ಅವರು ಹಾಡಿರುವ, ಗೋಪಿಸುಂದರ್ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಗುಳಿಗಾ...ಗುಳಿಗಾ... ಎಂಬ ಹಾಡು ಗುಳಿಗ ದೈವದ ಭಕ್ತರನ್ನು ಸೆಳೆಯುತ್ತಿದೆ. ಈ ಹಾಡಿನ ಅಬ್ಬರ ದೇಶದೆಲ್ಲೆಡೆ ದೊಡ್ಡ ಹವಾ ಎಬ್ಬಿಸುತ್ತಿದೆ. ಅದರ ನಡುವೆಯೇ ಕೆಲ ವಿಕೃತ ಮನಸಿನವರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಭಯಂಕರ ಉಗ್ರರೂಪದ ಕಾರಣಿಕದ ಗುಳಿಗ ದೈವ ಈ ಹಾಡಿನಿಂದ ಕ್ರೋಧಗೊಂಡಿರುಹುದೇ ಅಥವಾ ದೈವಕ್ಕೆ ಅಪಚಾರಾಗಿರಬಹುದೇ ಎಂಬ ಸಂಶಯವನ್ನು ದೂರ ಮಾಡಬೇಕೆಂಬ ಉದ್ದೇಶದಿಂದ ಚಿತ್ರತಂಡ ಇದೀಗ ಜೋತಿಷಿಗಳ ಮೊರೆ ಹೋಗಿ ಪರಿಹಾರ ಕೇಳಿದೆ ನಿರ್ದೇಶಕ ಸುಧೀರ್ ಅತ್ತಾವರ್ ಅವರು ಕೇರಳದ ತ್ರಿಶೂರ್‌ನಲ್ಲಿರುವ ಮಂಗಳೂರು ಮೂಲದ ಜ್ಯೋತಿಷಿ ವರುಣ್‌ಭಟ್ ಅವರಲ್ಲಿ ಈ ಬಗ್ಗೆ ಪ್ರಶ್ನೆ ಇಟ್ಟು ಕೇಳಿದಾಗ ವೃಶ್ಚಿಕರಾಶಿ, ಒಂಭತ್ತರಲ್ಲಿ ಗುರು, ಐದರಲ್ಲಿ ಗುಳಿಗ, ಶನಿ ಎಲ್ಲಾ ಇರುವುದರಿಂದ ಗುಳಿಗನಿಗೆ ಸಂಪೂರ್ಣ ತೃಪ್ತಿಯಾಗಿದೆ, ಸಂತೋಷವೂ ಆಗಿದೆ. ಅಲ್ಲದೆ ಕೊರಗಜ್ಜನಿಗೂ ಸಂತೋಷವಾಗಿದೆ, ದೇವರ ಆಶೀರ್ವಾದವೂ ನಿಮ್ಮ ಮೇಲಿದೆ ಎಂಬ ಉತ್ತರ ಸಿಕ್ಕಿದೆ. ಇತ್ತೀಚೆಗೆ ಗುಳಿಗಾ... ಗುಳಿಗಾ ಹಾಡಿನ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಪರ–ವಿರೋಧ ಚರ್ಚೆಗಳು ಜೋರಾಗಿ ನಡೆಯುತ್ತಿದ್ದವು. ಕೆಲವು ವಿಕೃತ ಮನಸ್ಥಿತಿಯವರು ನಿರ್ದೇಶಕರು ಸೇರಿದಂತೆ ಚಿತ್ರತಂಡವನ್ನು ನಿಂದಿಸಿ ಕೆಟ್ಟದಾಗಿ ಕಮೆಂಟ್‌ಗಳನ್ನು ಹಾಕಿದ್ದಾರೆ. ಅಲ್ಲದೆ ಗುಳಿಗ ದೈವವೇ ನಿಮ್ಮನ್ನು ರಕ್ತಕಾರಿ ಸಾಯಿಸುತ್ತದೆ ಎಂದು ವಿಕೃತ ಮನಸ್ಸಿನಿಂದ ಕಮೆಂಟ್ ಮಾಡಿದ್ದಾರೆ.

ಚಿತ್ರತಂಡ ಇದೀಗ ಚಿತ್ರದ ಪ್ರಚಾರ ಕಾರ್ಯವನ್ನು ಮುಂದುವರೆಸಿದೆ. ಪ್ರಶ್ನೆಯ ಮೂಲಕ ಜ್ಯೋತಿಷ್ಯದಲ್ಲಿ ಗುಳಿಗನಿಗೆ ತೃಪ್ತಿ ಇರುವ ವಿಚಾರ ಕೇಳಿ ನಿರ್ಮಾಪಕ ತ್ರಿವಿಕ್ರಮ ಸಾಪಲ್ಯ ಹಾಗೂ ವಿದ್ಯಾಧರ್ ಶೆಟ್ಟಿ ಅವರುಗಳು ಹರ್ಷಗೊಂಡಿದ್ದಾರೆ. ಯಾರೂ ಅನಗತ್ಯವಾದ ಕೆಟ್ಟ ಕಮೆಂಟ್‌ಗಳನ್ನು ಹಾಕಿ ಕಿರಿಕಿರಿ ಮಾಡದೆ ಒಂದು ದೈವದ ಬಗ್ಗೆ ಮಾಡಿರುವ ಚಿತ್ರದ ಯಶಸ್ಸಿಗೆ ಸಹಕರಿಸಬೇಕು ಎಂದು ನಿರ್ಮಾಪಕರು ಮನವಿ ಮಾಡಿದ್ದಾರೆ.





ನಾಗಸಾಧುಗಳ ಸಮ್ಮುಖದಲ್ಲಿ 'ಮಣಿಕಂಠ' ಮುಹೂರ್ತ

ಶಬರಿಮಲೆಯ ಶ್ರೀ ಅಯ್ಯಪ್ಪ ಸ್ವಾಮಿಯ ಪವಾಡಗಳ ಕುರಿತಂತೆ ಮೂರು ದಶಕಗಳ ನಂತರ 'ಮಣಿಕಂಠ' ಎಂಬ ಹೆಸರಿನ ಚಿತ್ರವೊಂದು ನಿರ್ಮಾಣವಾಗುತ್ತಿದೆ. ನವೆಂಬರ್–ಡಿಸೆಂಬರ್ ಸಮಯದಲ್ಲಿ ಭಕ್ತರು ಮಾಲೆ ಧರಿಸಿ ಸ್ವಾಮಿಯ ದರ್ಶನಕ್ಕೆ ಹೋಗುತ್ತಾರೆ. ಇದೇ ಸಂದರ್ಭದಲ್ಲಿ ಭಕ್ತಿಪ್ರಧಾನ ಕಥಾಹಂದರ ಒಳಗೊಂಡ ಮಣಿಕಂಠ ಚಿತ್ರವೂ ಸೆಟ್ಟೇರಿದೆ. ಮಹಾಲಕ್ಷ್ಮೀಪುರಂನ ಶ್ರೀಧರ್ಮಶಾಸ್ತ್ರ ಆಯ್ಯಪ್ಪ ದೇವಸ್ಥಾನದಲ್ಲಿ ಮಣಿಕಂಠ ಚಿತ್ರದ ಮುಹೂರ್ತ ನಡೆಯಿತು. ಈ ಕಾರ್ಯಕ್ರಮಕ್ಕೆ ಕಾಶಿಯಿಂದ ಎಂಟು ನಾಗಾಸಾಧುಗಳು ಅತಿಥಿಗಳಾಗಿ ಆಗಮಿಸಿದ್ದು ವಿಶೇಷವಾಗಿತ್ತು.

ಅಶ್ವಿನಿ ಪ್ರೊಡಕ್ಷನ್ಸ್ ಅಡಿಯಲ್ಲಿ ಅಶ್ವಿನಿ ಸಂತೋಷ್ ಸಿಂಹ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈವರೆಗೆ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ಸಂತೋಷ್ ಸಿಂಹ ಅವರು ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶಿಸುವುದರೊಂದಿಗೆ ಮೊದಲ ಬಾರಿಗೆ ನಾಯಕನಾಗಿ ನಟಿಸುತ್ತಿದ್ದಾರೆ. ಜತೆಗೆ ಇವರ ಇಬ್ಬರು ಮಕ್ಕಳೂ ಸಹ ಚಿತ್ರದಲ್ಲಿ ಬಣ್ಣ ಹಚ್ಚುತ್ತಿದ್ದಾರೆ. ಹೀಗೆ ಇಡೀ ಕುಟುಂಬವೇ ಈ ಚಿತ್ರದಲ್ಲಿ ತೊಡಗಿಕೊಂಡಿದೆ.




ಮುಹೂರ್ತದ ನಂತರ ಮಾತನಾಡಿದ ನಿರ್ದೇಶಕ ಸಂತೋಷ್ ಸಿಂಹ, ಮಣಿಕಂಠನು ಪ್ರತಿ ಭಕ್ತರ ಜೀವನದಲ್ಲೂ ಪವಾಡ ಮಾಡಿದ್ದಾನೆ. ಅದನ್ನು ಅನುಭವಿಸಿದಾಗ ಮಾತ್ರವೇ ನಮಗೆ ತಿಳಿಯುತ್ತದೆ. ಇಪ್ಪತ್ತೈದು ವರ್ಷಗಳಿಂದ ನಾನು ಶಬರಿಮಲೆಗೆ ಹೋಗಿ ಭಕ್ತಿಯಿಂದ ಸ್ವಾಮಿಯ ದರ್ಶನ ಮಾಡುತ್ತಿದ್ದೇನೆ. ನನ್ನ ಬದುಕಲ್ಲಿ ನಡೆದಂತ ಒಂದಷ್ಟು ಸತ್ಯ ಘಟನೆಗಳು, ಸ್ವಾಮಿಯ ಪವಾಡಗಳನ್ನು ಮಣಿಕಂಠ ಚಿತ್ರದ ಮೂಲಕ ತೋರಿಸುವ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಮಣಿಕಂಠನ ಪಾತ್ರದಲ್ಲಿ ಗುರು ಜೀವನ್ ಸಿಂಹ ತಾಯಿಯಾಗಿ ಬಿ.ಎಸ್.ಮಂಜುಳಾ ಅಲ್ಲದೆ, ತನುಶ್ರೀ ಸಿಂಹ, ವೈಷ್ಣವಿ, ಎಸ್.ಡಿ., ಶರತ್.ಎಸ್.ಎಂ., ಮಮತಾ, ಶಿವಣ್ಣ ಉಳಿದ ಪಾತ್ರಗಳಲ್ಲಿದ್ದಾರೆ. ಚೇತನ್‌ಕುಮಾರ್ ಸಾಹಿತ್ಯದ ಐದು ಹಾಡುಗಳಿಗೆ ಸ್ವರೂಪ್ ಆರ್. ಸಂಗೀತ ಸಂಯೋಜಿಸುತ್ತಿದ್ದಾರೆ. ವರ್ಷಿತ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದ್ದು, ಬೆಂಗಳೂರು, ಶಬರಿಮಲೆ, ಪಂಪ, ದೊಡ್ಡಪಾದ ಮುಂತಾದ ಲೋಕೇಶನ್‌ಗಳಲ್ಲಿ ಚಿತ್ರೀಕರಿಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಸಿನಿಪದಬಂಧ–604



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________________
ವಿಳಾಸ ____________________
____
ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1. ಕೋಡ್ಲು ರಾಮಕೃಷ್ಣ ಬರೆದ ದೀರ್ಘಕಥೆ ! 4
3. ಸಾಯಿಕುಮಾರ್ ಬೆರಳುಗಳ ಸರ ಧರಿಸಿದ್ದಾನೆ 5
6. ಜಗ್ಗೇಶ್ ಚಂದ್ರನಂತಿದ್ದಾನೆ 2
8. ಎಳೆಯ ರೂಪದ ಕೈಲಾಸ ವಾಸಿ 4
10. ಕೆ.ಎಂ.ಶಂಕರಪ್ಪ ನಿರ್ದೇಶನದಲ್ಲಿ ಸಾಧಿಸಿದವರೆಲ್ಲ ಹುತಾತ್ಮರೇ 7
11. ಪರಶುರಾಮನೊಂದಿಗೆ ಬಂದವನು 2
14. ಮನಸು ದೇವಾಲಯವಾಗಲು ಗೃಹ ರಾಘವೇಂದ್ರನ ನೆಲೆ 7
16. ನರನೊಂದಿಗೆ ರಕ್ಕಸನು ಇದ್ದಾನೆ 6
18. ಜೋಸೈಮನ್ ಕ್ಷೀರ ಛಿದ್ರಗೊಂಡಿದೆ 5

ಮೇಲಿನಿಂದ ಕೆಳಕ್ಕೆ

2. ಪಾಂಡವನೊಬ್ಬ ಬೀದಿಯಲ್ಲಿ ಕಾಣಿಸಿಕೊಂಡಿದ್ದಾನೆ 5
4. ಕಲಿಸುವವನ ಜೊತೆ ಕಲಿಯುವವರೂ ಇದ್ದಾರೆ 5
5. _ _ ಕಣ್ಣು ಹೋರಿ ಮ್ಯಾಗೆ 2
7. ರಮೇಶ್ ಅರವಿಂದನ ಸಿಹಿ ತಿಂಗಳು 4
8. ರಾಜೇಶ್,ಅಂಬಿ, ಶಶಿ, ವಿನಯಪ್ರಸಾದ್, ನಿವೇದಿತಾ ಜೈನ್ ಅಭಿನಯದ ಸಾಂಸಾರಿಕ ಚಿತ್ರ 5
9. ಅಂಬರೀಷ್ – ಗೀತಾ ಅಭಿನಯದ ಪ್ರೀತಿಯ ಉಡಿ 7
12. ಪಟ್ಟಾಭಿರಾಮರೆಡ್ಡಿ ಅವರ ಪ್ರಬಲ ಗಾಳಿ 5
13. ವೈಶಾಖದ ದಿನಗಳು ಚಿತ್ರದಲ್ಲಿ ವಿಷ್ಣುವರ್ಧನ್ ಜೊತೆ ಅಭಿನಯಿಸಿದ ನಟ 5
14. 'ಭಗವಂತ ಕೈಕೊಟ್ಟ ದುಡಿಯೋಕಂತ ಭಗವಂತ ಕಾಲ್ಕೊಟ್ಟ...', ಗೀತೆಯ ಚಿತ್ರ 5
15. _ _ ದಾಸ್ 2
17. ಶ್ರೀಗಂಧಕ್ಕೆ ಹೀಗೊಂದು ಹೆಸರು 3

ಸಿನಿ ಪದಬಂಧ 603ರ ಉತ್ತರ

	ಅ	ರ	ಗಿ	ಣಿ		ರೂ	ಪ	ಗಂ	ಗೂ	ಲಿ
			ರಿ				ರೋ		ಗ್ಲಿ	
ಮೌ	ನ		ಮ		ಪ್ರೇ	ಮ	ಪ	ರ್ವ		
	ಮ್ಮ		ಲ್ಲಿ		ಮ		ಕಾ			ಇ
	ಊ	ರಿ	ಗೆ	ಉ	ಪ	ಕಾ	ರಿ		ಅ	ಮ್ಮ
	ರು				ಲ್ಲ					ಡಿ
ಮ		ನಾ		ಸ	ವಿ	ಸ	ವಿ	ನೆ	ನ	ಪು
ತ್ರೇ		ಯಿ		ರ್ವ		ತ್ಯಂ				ಲಿ
ಮುಂ	ಜಾ	ನೆ	ಯ	ಮಂ	ಜು			ಗಾ		ಕೇ
ಗಾ		ರ		ಗ		ವಿ	ಜ	ಯ	ಕಾ	ಶಿ
ರು		ಳು		ಳಾ				ತ್ರಿ		

ವಿಜೇತರು: ಶೋಭ ಕೆ. W/O ಪುಟ್ಟರಾಜು, #1504, ಸಿ.ಹೆಚ್.7, 1ನೇ ತಿರುವು, ಅಶೋಕಪುರಂ, ಮೈಸೂರು-08

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

'ಅಪರಿಚಿತೆ' ಟ್ರೈಲರ್ ಬಿಡುಗಡೆ



ಈ ಹಿಂದೆ 'ತಾಯವ್ವ' ಎಂಬ ಚಿತ್ರದಲ್ಲಿ ನಟಿಸಿದ್ದ ಗೀತಪ್ರಿಯ ಅವರು ಇದೀಗ 'ಅಪರಿಚಿತೆ' ಚಿತ್ರದಲ್ಲಿ ಅಭಿನಯಿಸಿದ್ದಾರೆ. ಆ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಟ್ರೈಲರ್‌ಗೆ ಚಾಲನೆ ನೀಡಿದರು. ಅವರ ಪತ್ನಿ ಡಾಟಿ ಸದಾನಂದಗೌಡ ಹಾಗೂ ನಟಿ ತಾರಾ ಮುಖ್ಯ ಅತಿಥಿಗಳಾಗಿ ಆಗಮಿಸಿ ಶುಭ ಕೋರಿದರು.

ಗೀತಪ್ರಿಯ ಅವರು ಒಂದೊಳ್ಳೆ ಉದ್ದೇಶ ಇಟ್ಟುಕೊಂಡು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ನಾವು ಸಮಾಜಕ್ಕೆ ಏನಾದರೂ ಉತ್ತಮ ಸಂದೇಶ ಕೊಡಬೇಕಾದರೆ ಅದನ್ನು ಸುಲಭವಾಗಿ ತಲುಪಿಸುವ ಮಾರ್ಗ ಎಂದರೆ ಸಿನಿಮಾ. ಅಂತಹ ಸಿನಿಮಾ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿರುವ ಗೀತಪ್ರಿಯ, ಸುರೇಶ್‌ಕುಮಾರ್ ಮತ್ತು ಚಿತ್ರತಂಡಕ್ಕೆ ಶುಭವಾಗಲಿ ಎಂದು ಸದಾನಂದಗೌಡ ಹಾರೈಸಿದರು.

ನಾಯಕಿ ಗೀತಪ್ರಿಯ ಮಾತನಾಡುತ್ತಾ, 1985ರಲ್ಲಿ ನಾನು ಹಾಗೂ ನನ್ನ ಪತಿ ಸೇರಿ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದ್ದೆವು. ಹತ್ತು ಜನರಿಂದ ಆರಂಭವಾದ ಈ ಸಂಸ್ಥೆಯಲ್ಲಿ ಈಗ ಹತ್ತು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಹಿಂದೆ ತಾಯವ್ವ ಎಂಬ ಚಿತ್ರದಲ್ಲಿ ನಟಿಸಿದ್ದೆ. ಈಗ ಅಪರಿಚಿತೆ ಎಂಬ ಚಿತ್ರದಲ್ಲಿ ಅಭಿನಯಿಸಿದ್ದೇನೆ. ನನ್ನ ಪತಿ ಸುರೇಶ್ ಕುಮಾರ್ ಅವರೇ ಈ ಚಿತ್ರ ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ನಾನೊಬ್ಬ ಜವಾಬ್ದಾರಿಯುತ ಶಿಕ್ಷಕಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನಿರ್ದೇಶಕ ವಿಶ್ವನಾಥ್ ಅವರು ಈ ಕಥೆ ಹೇಳಿದಾಗ ಸಮಾಜಕ್ಕೆ ಏನಾದರೂ ಸಂದೇಶ ನೀಡುವ ಕಥೆಯಿದ್ದರೆ ಮಾತ್ರ ನಟನೆ ಮಾಡುವುದಾಗಿ ಹೇಳಿದ್ದೆ. ಇದು ಅಂತಹುದೇ ಕಥೆ. ರಾಮನಗರದಲ್ಲಿ ಚಿತ್ರೀಕರಣ ನಡೆದಿದೆ. ಕ್ರಿಸ್‌ಮಸ್ ವೇಳೆಗೆ ಚಿತ್ರ ಬಿಡುಗಡೆಯಾಗಲಿದೆ ಎಂದರು.

ನಿರ್ದೇಶಕ ವಿಶ್ವನಾಥ್ ಮಾತನಾಡುತ್ತಾ, ನೈಜ ಘಟನೆಯೊಂದನ್ನು ಆಧರಿಸಿ ಈ ಚಿತ್ರ ಮಾಡಿದ್ದೇವೆ. ಚಿತ್ರವೀಗ ಸೆನ್ಸಾರ್ ಅಂಗಳದಲ್ಲಿದೆ. ಗೀತಪ್ರಿಯ, ಸಿಂಧೂ ಲೋಕನಾಥ್, ಆರ್.ಜೆ.ನಿಖಿತಾ, ಹಿರಿಯನಟ ಶ್ರೀನಾಥ್ ಹಾಗೂ ಅವರ ಮಗ ರೋಹಿತ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ ಎಂದರು.

ಮೂವತ್ತೈದು ವರ್ಷಗಳ ನಂತರ ನಾನು ಸಿನಿಮಾದಲ್ಲಿ ನಟಿಸಿದ್ದೇನೆ. ಅದರಲ್ಲೂ ನಮ್ಮ ತಂದೆಯ ಜೊತೆ ತೆರೆ ಹಂಚಿಕೊಳ್ಳುತ್ತಿರುವುದಕ್ಕೆ ಬಹಳ ಖುಷಿಯಾಗಿದೆ ಎಂದು ರೋಹಿತ್ ಶ್ರೀನಾಥ್ ತಿಳಿಸಿದರು.

ಈ ವಾರ ತೆರೆಗೆ 'ಬಿಚ್ಚುಗತ್ತಿಯ ಬಂಟನ ಬಲ್ಲಿರೇನ'

ಚೋಮನ ದುಡಿ ಕಥೆಯ ಮುಂದುವರಿದ ಭಾಗವಾದ 'ಬಿಚ್ಚುಗತ್ತಿಯ ಬಂಟನ ಬಲ್ಲಿರೇನ್' ಚಿತ್ರ ಈ ವಾರ ತೆರೆಗೆ ಬರುತ್ತಿದೆ. ಅನಿಲ್ ದೋರಸಮುದ್ರ ಅವರ ನಿರ್ದೇಶನದ ಈ ಚಿತ್ರದ ಟ್ರೈಲರ್ ಮತ್ತು ಹಾಡುಗಳು ಇತ್ತೀಚೆಗೆ ಬಿಡುಗಡೆಯಾಗಿ ವೈರಲ್ ಆಗಿವೆ. ಹಿರಿಯನಟ ಸುಂದರರಾಜ್ ಅವರು ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿ, ಟ್ರೈಲರ್ ಲಾಂಚ್ ಮಾಡಿ, ಹೊಸ ತಲೆ ಮಾರಿನ ಪ್ರತಿಭೆಗಳು ಇಂತಹ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಮೆಚ್ಚುಗೆ ಸೂಚಿಸಿದರು.



1975ರಲ್ಲಿ ಶಿವರಾಮ ಕಾರಂತರ ರಚನೆಯ ಚೋಮನ ದುಡಿ ಬಿಡುಗಡೆಯಾಗಿತ್ತು. 50 ವರ್ಷಗಳ ನಂತರ ಆ ಚಿತ್ರದ ಮುಂದುವರಿದ ಭಾಗವಾಗಿ 'ಬಿಚ್ಚುಗತ್ತಿಯ ಬಂಟನ ಬಲ್ಲಿರೇನ' ಚಿತ್ರ ರಿಲೀಸಾಗುತ್ತಿದೆ. ದೋರಸಮುದ್ರ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಅನಿಲ್ ದೋರಸಮುದ್ರ ಅವರು ಈ ಚಿತ್ರಕ್ಕೆ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ಚಿತ್ರದ ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ನವೀನ್ ಸಿಂಬಾವಿ ಚಿತ್ರ ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ.

ಚೋಮನ ದುಡಿ ಸಿನಿಮಾದಲ್ಲಿ ಅಭಿನಯಿಸಿದ್ದ ಸುಂದರರಾಜ್ ಅವರು ಬಿಚ್ಚುಗತ್ತಿಯ ಬಂಟನ ಬಲ್ಲಿರೇನ ಚಿತ್ರದ ಟ್ರೈಲರನ್ನು ಬಿಡುಗಡೆಗೊಳಿಸಿ ನಂತರ ಮಾತನಾಡುತ್ತಾ, ಚೋಮನ ದುಡಿ ಸಿನಿಮಾ ಚಿತ್ರೀಕರಣದ ದಿನಗಳನ್ನು ನೆನಪು ಮಾಡಿಕೊಂಡರು. ಈ ಚಿತ್ರದಲ್ಲಿ ಚೆಲುವರಾಜ್‌ಗೌಡ, ಬಾಸುಮ ಕೊಡಗು, ಸ್ವೀಡಲ್ ಡಿಸೋಜಾ, ಶೈಲೇಶ್ ಕೆಂಗೇರಿ, ತಾರಾನಾಥ ಬೋಳಾರ್, ಪುಣ್ಯ ಕೊಟ್ಯಾನ್, ಮುಂತಾದವರು. ನಟಿಸಿದ್ದಾರೆ.

ಶ್ರೀಶಾಸ್ತ ಅವರು ಈ ಚಿತ್ರಕ್ಕೆ ಸಂಗೀತ ಸಂಯೋಜನೆ, ಲ್ಯಾಮರಿಂಚ್ ನಿರ್ಮಲ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದ್ದು, ಕಾರ್ಕಳದ ಸುತ್ತಮುತ್ತಲ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ನ. 28ರಂದು ಈ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ಮೈಸೂರು ಮಿತ್ರ

ಹುಲಿ ದಾಳಿ: ಪವಾಡ ಸದೃಶ ರೀತಿಯಲ್ಲಿ ಪಾರಾದ ರೈತರು

ಗ್ರಾಮಸ್ಥರು, ಅರಣ್ಯ ಸಿಬ್ಬಂದಿಯನ್ನು ಕಂಡು ಘರ್ಜಿಸಿದ ಹುಲಿ



ತಮ್ಮನ್ನು ಕಂಡು ಘರ್ಜಿಸಿದ ಹುಲಿಯನ್ನು ಸೆರೆ ಹಿಡಿಯುವಂತೆ ಸ್ಥಳಕ್ಕೆ ಭೇಟಿ ನೀಡಿದ್ದ ಡಿಸಿಎಫ್ ಮಹಮ್ಮದ್ ಫಯಾಜ್ ಅವರೊಂದಿಗೆ ವಾಗ್ವಾದಕ್ಕಿಳಿದ ಗ್ರಾಮಸ್ಥರು.

ಹನಗೋಡು ನ.27– ಹುಲಿ ದಾಳಿಯಿಂದ ರೈತರಿಬ್ಬರ ಪವಾಡ ಸದೃಶ ರೀತಿಯಲ್ಲಿ ಪಾರಾಗಿರುವ ಘಟನೆ ಹನಗೋಡು ಹೋಬಳಿಯ ನಾಗರಹೊಳೆ ಉದ್ಯಾನದಂಚಿನ ಗುರುಪುರ ಬಳಿಯ ಗೌಡನಕಟ್ಟೆಯಲ್ಲಿ ಸಂಭವಿಸಿದ್ದು, ಸ್ಥಳಕ್ಕೆ ಬಂದ ಗ್ರಾಮಸ್ಥರು ಮತ್ತು ಅರಣ್ಯ ಸಿಬ್ಬಂದಿಯನ್ನು ಕಂಡು ಹುಲಿ ಘರ್ಜಿಸಿದೆ.

ಗ್ರಾಮದ ರೈತರಾದ ಪ್ರಕಾಶ್ ಮತ್ತು ಸ್ವಾಮಿ ಹುಲಿ ದಾಳಿಯಿಂದ ಬಚಾವಾದವರು. ಹುಲಿ ದಾಳಿಯ ವಿಷಯ ತಿಳಿದು ಸ್ಥಳಕ್ಕೆ ಬಂದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡ ಗ್ರಾಮಸ್ಥರು ಹುಲಿ ಸೆರೆ ಹಿಡಿಯಲೇಬೇಕೆಂದು ಒತ್ತಾಯಿಸಿ ದಿಗ್ಬಂದನ ವಿಧಿಸಿದ್ದಾರೆ.

ಹುಲಿ ಸೆರೆಗೆ ಆಗ್ರಹ, ಅರಣ್ಯ ಸಿಬ್ಬಂದಿಗೆ ತರಾಟೆ, ದಿಗ್ಬಂದನ

ಗುರುವಾರ ಬೆಳಿಗ್ಗೆ ರೈತ ಪ್ರಕಾಶ್ ತಮ್ಮ ಜಮೀನಿನಲ್ಲಿ ಬೆಳೆದಿದ್ದ ಮುಸುಕಿನ ಜೋಳದ ಬೆಳೆಗೆ ಸ್ನೇಹಿತ ಸ್ವಾಮಿಯವರೊಂದಿಗೆ ರಸಗೊಬ್ಬರ ಹಾಕುತ್ತಿದ್ದರು. ಈ ವೇಳೆ ಹುಲಿಯು ಜೋಳದ ಹೊಲದಿಂದ ಘರ್ಜಿಸಿ ದಾಳಿ ನಡೆಸಲು ಮುಂದಾಗುತ್ತಿದ್ದಂತೆ ಜೋರಾಗಿ ಕಿರುಚಿಕೊಂಡು ಪೇರಿ ಕಿತ್ತರು. ಅಕ್ಕ ಪಕ್ಕದಲ್ಲಿದ್ದ ರೈತರು ಸಹ ಜೋರಾಗಿ ಕೂಗಿಕೊಂಡಿದ್ದರಿಂದ ಹುಲಿ ಬೆದರಿ ಓಡಿ ಹೋಯಿತು ಎನ್ನಲಾಗಿದೆ.


ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಗ್ರಾಮಸ್ಥರು ಆಗಮಿಸುತ್ತಿದ್ದಂತೆ ಹುಲಿ ಘರ್ಜಿಸಿ ಮೂರ್‍ನಾಲ್ಕು ಬಾರಿ ದಾಳಿ ಮಾಡಲು ಬಂದು ಜನರ ದಂಡು ಕಂಡು ಹೊಲದಲ್ಲಿ ಮರೆಯಾಯಿತು. ನಂತರ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಪರಿಶೀಲನೆ ವೇಳೆಯೂ ಹುಲಿ ದಾಳಿ ನಡೆಸಲು ಮುಂದಾಯಿತು. ಈ ವೇಳೆ ಡ್ರೋಣ್ ಕ್ಯಾಮರಾ ಮೂಲಕವು ಹುಲಿ ಕಾಣಿಸಿಕೊಂಡಿದ್ದು, ಹುಲಿ ಹೊಲದಲ್ಲೇ ಬೀಡು ಬಿಟ್ಟಿದೆ. ಮರಿಗಳು ಇರಬಹುದೆಂದು ಶಂಕಿಸಲಾಗಿದೆ.

ಅರಣ್ಯಾಧಿಕಾರಿಗಳಿಗೆ ತರಾಟೆ: ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ್ದ ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಮಹಮ್ಮದ್ ಫಯಾಜುದ್ದೀನ್, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಹರ್ಷಕುಮಾರ್, ಆರ್‌ಎಫ್‌ಓ ನಂದಕುಮಾರ್ ಮತ್ತವರ ಸಿಬ್ಬಂದಿಯನ್ನು ತರಾಟೆ ತೆಗೆದುಕೊಂಡ ಗ್ರಾಮಸ್ಥರು ಹುಲಿ ಇಲ್ಲೇ ಇದ್ದು ಸೆರೆ ಹಿಡಿಯಬೇಕೆಂದು ಪಟ್ಟುಹಿಡಿದರು.

ಈ ವೇಳೆ ಹುಲಿ ಸೆರೆ ಹಿಡಿಯಲು ಕ್ರಮ ವಹಿಸುತ್ತೇವೆಂದು ಅಧಿಕಾರಿಗಳ ಮಾತಿಗೆ ಆಕ್ರೋಶಿತರಾದ ಗ್ರಾಮಸ್ಥರು ಹುಲಿ ಸೆರೆ ಹಿಡಿದು ನಂತರ ತೆರಳಿ, ಹುಲಿ ಹಿಡಿಯದೆ ಇಲ್ಲಿಂದ ತೆರಳುವಂತಿಲ್ಲವೆಂದು ಹೋಗಲು ಅನುವಾಗಿದ್ದ ಅರಣ್ಯಾಧಿಕಾರಿಗಳಿಗೆ ರಸ್ತೆಗೆ ಟ್ರ್ಯಾಕ್ಟರ್ ಅಡ್ಡಗಟ್ಟಿ ದಿಗ್ಬಂದನ ವಿಧಿಸಿದರು. ಸ್ಥಳದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಮುನಿಸ್ವಾಮಿ, ಎಸ್.ಐಗಳಾದ ರಾಮು, ರಾಧ, ಶ್ರೀನಿವಾಸಲು ಹಾಗೂ ಡಿಎಆರ್ ತಂಡ ಸ್ಥಳದಲ್ಲಿ ಬೀಡು ಬಿಟ್ಟು ಉದ್ರಿಕ್ತ ಜನರನ್ನು ನಿಯಂತ್ರಿಸುತ್ತಿದ್ದಾರೆ.

ರಾತ್ರಿಯೇ ಹುಲಿ ಸೆರೆಗೆ ಕ್ರಮ: ಗ್ರಾಮಸ್ಥರ ಆಕ್ರೋಶಕ್ಕೆ ಮಣಿದ ಅರಣ್ಯಾಧಿಕಾರಿಗಳು ರಾತ್ರಿ ವೇಳೆಯೇ ಹುಲಿ ಸೆರೆ ಹಿಡಿಯುವ ಸಲುವಾಗಿ ಕಾರ್ಯಾಚರಣೆ ನಡೆಸಲು ಸ್ಥಳಕ್ಕೆ ನಾಲ್ಕು ಸಾಕಾನೆಗಳನ್ನು ಕರೆಸಲಾಗಿದೆ. ಇಬ್ಬರು ಪಶು ವೈದ್ಯರು ಡ್ರೋಣ್ ಕ್ಯಾಮರಾದೊಂದಿಗೆ ಕಾರ್ಯಾಚರಣೆ ನಡೆಸಲು ಮುಂದಾಗಿದ್ದಾರೆ. ವನ್ಯಜೀವಿ ವಿಭಾಗದ ಎಸಿಎಫ್ ಲಕ್ಷ್ಮಿಕಾಂತ್, ಆರ್‌ಎಫ್‌ಓ ವಿನೋದ್‌ಗೌಡ, ಆನೆ, ಚಿರತೆ ಟಾಸ್ಕ್ ಫೋರ್ಸ್ ಹಾಗೂ ಸಿಬ್ಬಂದಿ ಸಹ ಆಗಮಿಸಿದ್ದು, ರಾತ್ರಿಯೇ ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಶಾಸಕ ಜಿಟಿಡಿಗೆ ಹುಟ್ಟು ಹಬ್ಬದ ಶುಭಾಶಯ



75ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಸಹಕಾರ ಧುರೀಣ ಶಾಸಕ ಜಿ.ಟಿ.ದೇವೇಗೌಡರನ್ನು ವಿಧಾನಪರಿಷತ್ ಸದಸ್ಯ ವಿವೇಕಾನಂದ, ಮುಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ವಿಜಯ್, ಉದ್ಯಮಿಗಳಾದ ಎಂ.ಪಿ.ಮಧು, ಎಂ.ಸಿದ್ದರಾಜು ಹಾಗೂ ಜೆಡಿಎಸ್ ಯುವ ಮುಖಂಡ ಗಗನ್ ಅಭಿನಂದಿಸಿ ಶುಭಾಶಯ ಕೋರಿದರು.

ಆವರ್ತಿ ಗ್ರಾಮದಲ್ಲಿ ಕನ್ನಡ ರಾಜ್ಯೋತ್ಸವ ಅಚರಣೆ



ಬೆಟ್ಟದಪುರ: ಕನ್ನಡ ಭಾಷೆಗೆ ತನ್ನದೇ ಆದ ಅಸ್ತಿತ್ವವಿದ್ದು, ಇದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರದಾಗಿದೆ ಎಂದು ಸಾಹಿತಿ ಕೃಪಾದೇವರಾಜ್ ಕರೆ ನೀಡಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಆವರ್ತಿ ಗ್ರಾಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಗ್ರಾಮ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಡೆ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಮಾತನಾಡಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಆವರ್ತಿ ಚಂದ್ರಶೇಖರ್, ಗ್ರಾಮ ಘಟಕದ ಅಧ್ಯಕ್ಷ ಎ.ಬಿ.ಶೇಖರ್ ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ಶಾಲಾ ಮಕ್ಕಳು ಮತ್ತು ಗ್ರಾಮಸ್ಥರು ಕನ್ನಡ ಗೀತೆ ಹಾಗೂ ವಾದ್ಯಗಳೊಂದಿಗೆ ಕನ್ನಡಾಂಬೆಯ ಭಾವಚಿತ್ರವನ್ನು ಮೆರವಣಿಗೆ ನಡೆಸಿದರು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಮಡಿಕೆ ಹೊಡೆಯುವ ಸ್ಪರ್ಧೆ, ಮ್ಯೂಸಿಕಲ್ ಚೇರ್ ಸ್ಪರ್ಧೆ ಹಾಗೂ ಕನ್ನಡ ನಾಡು ನುಡಿಯ ವಿಚಾರವಾಗಿ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಂಡು ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕೆಎಸ್.ಮಹದೇವಪ್ಪ ಸೇರಿದಂತೆ ಇತರರನ್ನು ಅಭಿನಂದಿಸಲಾಯಿತು

ಕೃಷಿ ಇಲಾಖೆ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

ನಂಜನಗೂಡು: ಕೃಷಿ ಇಲಾಖೆಯ ವತಿಯಿಂದ ತುಂತುರು ಹನಿ ನೀರಾವರಿ ಸಲಕರಣೆಗಳು, ವಿವಿಧ ಸೌಲಭ್ಯಗಳನ್ನು ಪಡೆಯಲು ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ರವಿ ತಿಳಿಸಿದ್ದಾರೆ.

ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಯೋಜನೆಯಡಿ ರೈತರಿಗೆ ಬೇಕಾಗುವ ಜೈವಿಕ ಪದಾರ್ಥಗಳು, ಮತ್ತು ನೈಸರ್ಗಿಕ ಕೃಷಿಗೆ ಬೇಕಾಗುವ ಜೀವಾಮೃತ ಗನಜೀವಾಮೃತ, ದಶಪರ್ಣಿ ಕಷಾಯ, ನೀಮಾಸ್ತ್ರ, ಬ್ರಹ್ಮಾಸ್ತ್ರ ಅಗ್ನಿ ಅಸ್ತ್ರ ಇತ್ಯಾದಿ ಪರಿಕರಗಳನ್ನು ಉತ್ಪಾದಿಸಿ ಸರಬರಾಜು ಮಾಡುವ ಸಲುವಾಗಿ ಜೈವಿಕ ಪರಿಕರ ಉತ್ಪಾದನಾ ಘಟಕ (ಬಿಆರ್‌ಸಿ) ಘಟಕಗಳ ಸ್ಥಾಪನೆಗೆ ಅವಕಾಶವಿದ್ದು ಘಟಕಗಳ ನಿರ್ಮಾಣಕ್ಕೆ ಒಂದು ಲಕ್ಷದವರೆಗೆ ಸಹಾಯಧನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕೃಷಿ ಇಲಾಖೆ ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಬನ್ನಿಕುಪ್ಪೆ ಕೃಷಿ ಪತ್ತಿನ ಸಹಕಾರ ಸಂಘದ ಬ್ಯಾಂಕಿನ ನೂತನ ಕೌಂಟರ್‌ಗಳ ಉದ್ಘಾಟನೆ



ಬ್ಯಾಂಕ್ ಕೌಂಟರ್ ಉದ್ಘಾಟಿಸಿ ಮಾತನಾಡುತ್ತಿರುವ ಶಾಸಕ ಜಿ.ಡಿ.ಹರೀಶ್‌ಗೌಡ.

ಹುಣಸೂರು, ನ.27– ತಾಲೂಕಿನ ಬನ್ನಿಕುಪ್ಪೆ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಹಕಾರ ಸಂಘದ ನೂತನ ಕಟ್ಟಡ ಬ್ಯಾಂಕ್ ಕೌಂಟರ್‌ಗಳನ್ನು ಶಾಸಕ ಜಿ.ಡಿ.ಹರೀಶ್ ಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ಸಹಕಾರ ಸಂಘಗಳು ರೈತರ ಮತ್ತು ಗ್ರಾಮೀಣ ಜನರ ಅಶೋತ್ತರಗಳಿಗೆ ಸ್ಪಂದಿಸುವ ಮೂಲಕ ಕೃಷಿ ಮತ್ತು ಅರ್ಥಿಕ ಸ್ವಾವಲಂಬನೆಯತ್ತ ಅಭಿವೃದ್ದಿಯಾಗಲು ಬೆನ್ನೆಲುಬಾಗಿ ನಿಲ್ಲಬೇಕು. ಅಲ್ಲದೆ ರೈತರಿಗೆ ಕೃಷಿ ಚಟುವಟಿಕೆಗಳಿಗೆ ಸಹಾಯವಾಗುವಂತಹ ಕಾರ್ಯಮ್ರಮಗಳನ್ನು ರೂಪಿಸಿಕೊಂಡು ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ, ರಸಗೊಬ್ಬರಗಳು ಮತ್ತು ಕೃಷಿ ಉಪಕರಣಗಳನ್ನು ಒದಗಿಸುವಂತಹ ಕಾರ್ಯಕ್ರಮಗಳನ್ನು ಮಾಡಿ ಎಂದರು.

ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಿ.ಮಂಜುನಾಥ್ ಮಾತನಾಡಿ ಶಾಸಕರು ರಾಜ್ಯ ಅಪೇಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗಿ ನಮ್ಮ ಸಹಕಾರ ಸಂಘಕ್ಕೆ ನೂತನ ಕಟ್ಟಡ ಹಾಗೂ ಬ್ಯಾಂಕಿಂಗ್ ವ್ಯವಸ್ಥೆಗೆ ಕೌಂಟರ್‌ಗಳ ಕಾಮಗಾರಿಗಾಗಿ 15 ಲಕ್ಷ ರೂಪಾಯಿಗಳನ್ನು ನೀಡಿದ್ದಾರೆ. ಅವರ ಅವಧಿಯಲ್ಲಿ 380ಕ್ಕೂ ಹೆಚ್ಚು ರೈತರಿಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಸಾಲ ಕೊಡುವುದರ ಮುಖಾಂತರ ರೈತರಿಗೆ ಸಹಾಯ ಮಾಡಿದ್ದಾರೆ ಎಂದರು.

ನಮ್ಮ ಸಂಘದಲ್ಲಿ ಈಗ 1200 ಷೇರುದಾರರಿದ್ದು 350 ಜನ ರೈತರಿಗೆ ಸುಮಾರು ಐದು ಕೋಟಿಗೂ ಹೆಚ್ಚು ಸಾಲ ನೀಡಲಾಗಿದೆ. ಅಲ್ಲದೆ ಈ ಬಾರಿ ಹೊಸದಾಗಿ 100 ಜನ ರೈತರಿಗೆ ಒಂದು ಕೋಟಿ ಸಾಲ ನೀಡಲು ಮುಂದಾಗಿದ್ದು ನಮ್ಮ ಸಹಕಾರ ಸಂಘಕ್ಕೆ ಈ ಸಾಲಿನಲ್ಲಿ 3.20 ಲಕ್ಷ ಲಾಭ ಬಂದಿದೆ ಎಂದರು

ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡರವರನ್ನು ಸನ್ಮಾನಿಸಲಾಯಿತು ಸಂಘದ ಅಧ್ಯಕ್ಷ ಜಯರಾಮ, ಉಪಾಧ್ಯಕ್ಷ ಚೌಡನಾಯಕ, ನಿರ್ದೇಶಕರಾದ ಗೋವಿಂದೇಗೌಡ, ಚೆಲುವರಾಜು, ಜ್ಯೋತಿಕುಮಾರ್, ಪುಟ್ಟನಾಯ್ಕ, ಅಣ್ಣಯ್ಯನಾಯ್ಕ, ಅಶೋಕ್.ವಿ, ಈಶ್ವರಗೌಡ, ಚಿಕ್ಕತಾಯಮ್ಮ, ಲಲಿತಮ್ಮ ಸಂಘದ ಸಿಬ್ಬಂದಿಗಳಾದ ನಾಗೇಶ್, ನಿಂಗಯ್ಯ ಮತ್ತು ಊರಿನ ಮುಖಂಡರು ಗ್ರಾಮಸ್ಥರು ಭಾಗವಹಿಸಿದ್ದರು.

ಜುಬಿಲಿಯೆಂಟ್ ಕಾರ್ಖಾನೆಯಲ್ಲಿ ರಾಜ್ಯೋತ್ಸವ ಆಚರಣೆ



ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ರಾಜ್ಯೋತ್ಸವ ಉದ್ಘಾಟಿಸಿದರು.


ನಂಜನಗೂಡು: ಜಗತ್ತಿನೆಲ್ಲೆಡೆ ಲಿಪಿಗಳು ಅಂಬೆಗಾಲಿಡುತ್ತಿದ್ದ ಸಮಯದಲ್ಲಿಯೇ ಕನ್ನಡ ಭಾಷೆಯಲ್ಲಿ ಮಹಾಕಾವ್ಯಗಳು ರಚನೆಯಾಗಿದ್ದವು. ಇದು ಕನ್ನಡ ಭಾಷೆಗಿರುವ ಶಕ್ತಿ ಎಂದು ಮೈಸೂರಿನ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ನಗರದ ಕೈಗಾರಿಕಾ ಪ್ರದೇಶದಲ್ಲಿರುವ ಜುಬಿಲಿಯೆಂಟ್ ಓಯಸಿಸ್ ಕಾರ್ಖಾನೆಯಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಕನ್ನಡಿಗರು ಸ್ವಾಭಿಮಾನಿಗಳಾಗಿದ್ದು ನಮ್ಮ ರಕ್ತದಲ್ಲಿಯೇ ಆ ಗುಣವನ್ನು ಮೈಗೂಡಿಸಿಕೊಂಡಿದ್ದೇವೆ. ಕನ್ನಡಕ್ಕಾಗಿ ನಾವು ಮಾಡುವ ಕೆಲಸ ಕಾರ್ಯಗಳನ್ನು ತಾಯಿಯ ಸೇವೆ ಎಂದೇ ಪರಿಗಣಿಸಬೇಕು. ಜೀವ ರಕ್ಷಕ ಔಷಧಿಗಳನ್ನು ಉತ್ಪಾದಿಸುವ ಜುಬಿಲಿಯೆಂಟ್ ಕಾರ್ಖಾನೆಯಲ್ಲಿ ರಾಜ್ಯೋತ್ಸವದ ಮೂಲಕ ಕನ್ನಡದ ಮನಸ್ಸುಗಳನ್ನು ಬೆಸೆಯುವ ಕಾರ್ಯ ನಡೆಯುತ್ತಿರುವುದು ಸಂತಸದ ಸಂಗತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜುಬಿಲಿಯೆಂಟ್ ಕಾರ್ಖಾನೆ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಸುಬ್ರಹ್ಮಣ್ಯ, ಜನಪದ ಗಾಯಕ ಮಳವಳ್ಳಿ ಮಹದೇವಸ್ವಾಮಿ ಮಾತನಾಡಿದರು. ಕನ್ನಡದಲ್ಲಿ ಉತ್ತಮ ಸಾಧನೆ ತೋರಿರುವ ಸರಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಪ್ರಾಣೇಶ್ ಪ್ರಭಾಕರ್ ಹೊನ್ನವಾಡ್, ಬಸವರಾಜು ಉಪಸ್ಥಿತರಿದ್ದರು.

ತಿ.ನರಸೀಪುರ ಪುರಸಭೆಗೆ ನೂತನ ಮುಖ್ಯಾಧಿಕಾರಿ



ತಿ.ನರಸೀಪುರ ಪುರಸಭೆ ನೂತನ ಮುಖ್ಯಾಧಿಕಾರಿಯಾಗಿ ಶ್ರೀನಿವಾಸ್ ಅಧಿಕಾರ ವಹಿಸಿಕೊಂಡರು. ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಅಭಿನಂದಿಸಿದರು. ಆರ್.ಚೇತನ್, ಜೋಗಿ ನಾಗರಾಜು, ಶ್ರೀಕಾಂತ್ ರಾಜೆ ಅರಸ್ ಇದ್ದರು.

ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಡಾ.ವೀರೇಂದ್ರ ಹೆಗ್ಗಡೆಯವರ ಕೊಡುಗೆ ಅಪಾರ

ಹೆಚ್.ಡಿಕೋಟೆ ಮಹಿಳೆಯರನ್ನು ಆರ್ಥಿಕ ಸಬಲೀಕರಣ ಮಾಡುವುದರ ಜೊತೆಗೆ ಸರ್ವರ ಏಳಿಗೆಗಾಗಿ ಅನೇಕ ಯೋಜನೆಗಳನ್ನು ಸಮಾಜಕ್ಕೆ ನೀಡಿದ ಕೀರ್ತಿ ಡಾ.ಡಿ.ವಿರೇಂದ್ರ ಹೆಗ್ಗಡೆಯವರಿಗೆ ಸಲ್ಲುತ್ತದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಭಾಸ್ಕರ್ ತಿಳಿಸಿದರು.

ತಾಲೂಕಿನ ಬೋಚಿಕಟ್ಟೆ ಗ್ರಾಮದಲ್ಲಿರುವ ಮಾನಸಿಕ ಅಸ್ವಸ್ಥರ ಪುನರ್ವಸತಿ ಕೇಂದ್ರದ ಚಿತ್ತಧಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಆಯೋಜಿಸಿದ್ದ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವಿರೇಂದ್ರ ಹೆಗ್ಗಡೆಯವರ 78ನೇ ಹುಟ್ಟುಹಬ್ಬ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ರಾಜ್ಯ ವ್ಯಾಪಿ ಅನ್ನದಾನದ ಮೂಲಕ ಇದೇ ಮೊದಲ ಬಾರಿಗೆ ಹೆಗ್ಗಡೆಯವರ ಜನ್ಮದಿನವನ್ನು ಆಚರಿಸಲಾಗುತ್ತಿದೆ ಎಂದರು.

ಮಾನಸಿಕ ಅಸ್ವಸ್ಥರ ಪುನರ್ವಸತಿ ಕೇಂದ್ರದ ವ್ಯವಸ್ಥಾಪಕ ಮಹದೇವಸ್ವಾಮಿ ಮಾತನಾಡಿ ತಾಲೂಕಿನಲ್ಲಿ ಚಿತ್ತಧಾಮವನ್ನು 14 ಮನೋವೈದ್ಯರ ತಂಡವು ಸ್ಥಾಪಿಸಿ ನಿರಂತರವಾಗಿ ಮೂರು ಮಂದಿ ವೈದ್ಯರ ತಂಡ ಇಲ್ಲಿನ ಒಳರೋಗಿಗಳು ಮತ್ತು ಹೊರರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ ಎಂದರು.

ಇನ್ಫೋಸಿಸ್‌ನ ಸುಧಾಮೂರ್ತಿಯವರು ಚಿತ್ತಸಂಜೀವಿನಿ ಎಂಬ ಟ್ರಸ್ಟ್ ನಿರ್ಮಿಸಿ ಟ್ರಸ್ಟ್ ಮೂಲಕ 3 ಕೋಟಿ ಹಣ ಡೆಪಾಸಿಟ್ ಮಾಡಿ ಅದರಿಂದ ಬಂದ ಬಡ್ಡಿಯ ಹಣದಿಂದ ಇಲ್ಲಿನ ರೋಗಿಗಳಿಗೆ ಮಾತ್ರೆಯ ವೆಚ್ಚವನ್ನು ಭರಿಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ವಿರೇಂದ್ರ ಹೆಗ್ಗಡೆಯವರ ಜನ್ಮದಿನದ ಅಂಗವಾಗಿ ಕೇಂದ್ರ ಒಳವಾಸಿಗಳಿಗೆ ಹಣ್ಣು ಹಂಪಲು ನೀಡಿ, ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು



ಡಾ.ಡಿ.ವಿರೇಂದ್ರ ಹೆಗ್ಗಡೆಂಯವರ 78ನೇ ಹುಟ್ಟುಹಬ್ಬ ಕಾರ್ಯಕ್ರಮ.

ಸರಗೂರು ಪಪಂಗೆ ಚೈತ್ರಸ್ವಾಮಿ ಅಧ್ಯಕ್ಷೆ



ಸರಗೂರು ಪಟ್ಟಣ ಪಂಚಾಯಿತಿ ನೂತನ ಅಧ್ಯಕ್ಷೆ ಚೈತ್ರಸ್ವಾಮಿ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಅಭಿನಂದಿಸಿದರು.

ಸರಗೂರು: ಪಟ್ಟಣ ಪಂಚಾಯಿತಿಯ ನೂತನ ಅಧ್ಯಕ್ಷೆಯಾಗಿ ಕಾಂಗ್ರೆಸ್ ಪಕ್ಷದ ಚೈತ್ರಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷರ ಸ್ಥಾನ ಹಿಂದುಳಿದ ವರ್ಗದ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ ಚೈತ್ರಸ್ವಾಮಿ ನಾಮಪತ್ರ ಸಲ್ಲಿಸಿದ್ದರು. ಬಿಜೆಪಿಯ ಯಾವ ಸದಸ್ಯರು ಚುನಾವಣಾ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಹಾಗೂ ತಹಸೀಲ್ದಾರ್ ಮೋಹನಕುಮಾರಿ ಹಾಗೂ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಂತೋಷ್ ಕುಮಾರ್ ಚೈತ್ರಸ್ವಾಮಿ ಅವರ ಅವಿರೋಧ ಆಯ್ಕೆ ಘೋಷಿಸಿದರು.

ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಚೈತ್ರಸ್ವಾಮಿ ಅವರನ್ನು ಅಧ್ಯಕ್ಷೆ ಎಂದು ಘೋಷಣೆ ಮಾಡುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಪಕ್ಷದ ಬಾವುಟ ಹಿಡಿದು ಕಾಂಗ್ರೆಸ್ ಪಕ್ಷಕ್ಕೆ ಜೈಕಾರ ಹಾಕಿ ಸಂಭ್ರಮಿಸಿದರು,

ಕಾಂಗ್ರೆಸ್ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಚಂದ್ರಕಲಾ ರಾಜಣ್ಣ, ಸಣ್ಣತಾಯಮ್ಮ, ಹೇಮಾವತಿ ರಮೇಶ್, ಕೋಟೆ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಏಜಾಜ್ ಪಾಷಾ, ಸರಗೂರು ತಾಲೂಕು ಬ್ಲಾಕ್ ಅಧ್ಯಕ್ಷ ಮಾದಪ್ಪ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಪಿ.ರವಿ. ಜಿಲ್ಲಾ ಮೈಮೂಲ್ ಅಧ್ಯಕ್ಷ ಕೆ.ಈರೇಗೌಡ, ಟೌನ್ ಅಧ್ಯಕ್ಷ ಎಸ್.ಎನ್.ನಾಗರಾಜು, ಗ್ಯಾರಂಟಿ ಸಮಿತಿ ಅಧ್ಯಕ್ಷ ಚಲುವರಾಜ್, ಚಾಮರಾಜು, ಕಂಥೇಗಾಲ ಶಿವರಾಜು, ಡಿಸಿಸಿ ಸದಸ್ಯ ಪರಶಿವಮೂರ್ತಿಕೋಟೆ, ಅಕ್ರಮ ಸಕ್ರಮ ಸಮಿತಿ ಸದಸ್ಯೆ ಶಿವಶಂಕರನ್, ಕಾಂಗ್ರೆಸ್ ಮುಖಂಡರಾದ ಶಂಭುಲಿಂಗನಾಯಕ, ಮಂಜುನಾಥ್, ಸೌಮ್ಯ ಮಂಜುನಾಥ್, ಎಸ್.ಎನ್.ನಾಗರಾಜು, ರಂಗನಾಥ್, ಕುರ್ಣಗಾಲ ಬೆಟ್ಟಸ್ವಾಮಿ, ಚನ್ನಿಪುರ ನಾಗರಾಜು, ಗುತ್ತಿಗೆದಾರ ಎಸ್.ಎಸ್.ಬಸವರಾಜು, ರಮೇಶ್, ಬಿಲ್ಲಯ್ಯ, ಜಲೀಲ್, ಮುಳ್ಳೂರು ಮಂಜು, ಕಳಸೂರು ಬಸವರಾಜು, ಪ್ರಭಾಕರ, ಮಹೇಶ್ ಆರ್ಯ, ನವೀನ್, ತ್ರಿಶಂಭು, ಸುಹೇಲ್, ಯಾಸೀನ್, ಮಫಿರುಲ್ಲಾ, ಅಯೂಬ್, ಸರ್ಫಉದೀನ್, ಗೋಪಾಲ್, ಹಾಗೂ ಪಕ್ಷದ ಕಾರ್ಯ ಕರ್ತರು ಇದ್ದರು,

ಪಿಎಸ್‌ಐ ಕಿರಣ್, ಗೋಪಾಲ್, ಸಿಬ್ಬಂದಿಗಳಾದ ಆನಂದ್, ಇಮ್ರಾನ್ ಮಹಮದ್, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿದ್ದರು.

ಹುಳಿಮಾವಿನಲ್ಲಿ ವಾಲ್ಮೀಕಿ ಭವನ ಉದ್ಘಾಟನೆ



ಸುತ್ತೂರು: ಪ್ರತಿ ಗ್ರಾಮಗಳಲ್ಲಿ ಸಮುದಾಯ ಭವನಗಳನ್ನು ಗ್ರಾಮಸ್ಥರು ಸದುಪಯೋಗಪಡಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸಲಹೆ ನೀಡಿದರು.

ವರುಣ ಕ್ಷೇತ್ರದ ಹುಳಿಮಾವು ಗ್ರಾಮದಲ್ಲಿ ನೂತನ ವಾಲ್ಮೀಕಿ ಭವನವನ್ನು ಉದ್ಘಾಟಿಸಿ ಮಾತನಾಡಿದ ಅವರು ವರುಣಾ ಕ್ಷೇತ್ರ ವ್ಯಾಪ್ತಿಯ ಪ್ರತಿಯೊಂದು ಗ್ರಾಮಗಳಲ್ಲೂ ಸಿಎಂ ಸಿದ್ದರಾಮಯ್ಯನವರ ಅನುದಾನದಡಿ ಸಮುದಾಯ ಭವನಗಳನ್ನು ನಿರ್ಮಿಸಲಾಗಿದ್ದು, ಸ್ಥಳೀಯರು ಎಲ್ಲಾ ಶುಭ ಸಮಾರಂಭಗಳಿಗೆ, ಮಕ್ಕಳ ಕಲಿಕಾ ಕಾರ್ಯ ಸೇರಿದಂತೆ ಇನ್ನಿತರ ಉಪಯುಕ್ತ ಚಟುವಟಿಕೆಗಳಿಗೆ ಬಳಸಿ ಕೊಳ್ಳಬೇಕೆಂದರು.

ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿ ವರುಣಾ ಕ್ಷೇತ್ರವನ್ನು ರೂಪಿಸಲು ಅಗತ್ಯವಿರುವ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದ್ದು, ಮಕ್ಕಳ ವಿದ್ಯಾಭ್ಯಾಸ, ಗ್ರಾಮದ ರಸ್ತೆ ಅಭಿವೃದ್ಧಿ, ಶಾಲಾ–ಕಾಲೇಜುಗಳ ಉನ್ನತೀಕರಣ, ಆರೋಗ್ಯ ಸೇವೆಗಾಗಿ ಸುಸಜ್ಜಿತ ಆಸ್ಪತ್ರೆ ನಿರ್ಮಾಣ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜ್, ಮೃಗಾಲಯ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಗ್ರಾಪಂ ಅಧ್ಯಕ್ಷೆ ಮಂಜುಳಾ, ನಾಯಕ ಜನಾಂಗದ ಮುಖಂಡ ಮಹದೇವ ನಾಯಕ, ಕುಮಾರ್ ನಾಯ್ಕ, ವಾಲ್ಮೀಕಿ ಸಂಘದ ಅಧ್ಯಕ್ಷ ಕುಮಾರ್ ನಾಯ್ಕ, ಖಜಾಂಚಿ ರಘು, ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ಶ್ರೀಕಂಠೇಶ್ವರ ದೇವಸ್ಥಾನದ ಧರ್ಮದರ್ಶಿ ಮಂಡಳಿ ಅಧ್ಯಕ್ಷ ಇಂಧನ್ ಬಾಬು, ಕಾರ್ಯದರ್ಶಿ ಅನಿಲ್ ಉಮೇಶ್, ಪ್ರತಾಪ್, ರೇವಣ್ಣ ನಾಯಕ, ಎಪಿಎಂಸಿ ಉಪಾಧ್ಯಕ್ಷ, ಹದಿನಾರು. ಎಲ್ ಸಿದ್ದರಾಜು, ಹಾಲುತ್ತೂರು ಮಹೇಶ್, ಪರಶಿವಮೂರ್ತಿ, ಬೊಕ್ಕಳ್ಳಿ ಮಾದಪ್ಪ ಇದ್ದರು.

ಶಿವಶರಣರ ವಚನಗಳ ಅಧ್ಯಯನದಿಂದ ಭವಿಷ್ಯ ಉಜ್ವಲ

ತಿ.ನರಸೀಪುರ, ನ.27– ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನಿಂದ ಶಾಲೆಗಳಲ್ಲಿ ವಚನಗಳ ನಡುವೆ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹೇಳವರಹುಂಡಿ ಸಿದ್ದಪ್ಪ ತಿಳಿಸಿದರು.

ತಾಲೂಕಿನ ಬಿಲಿಗೆರೆ ಹುಂಡಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ ಶಿವಶರಣರ ವಚನಗಳ ಅಧ್ಯಯನವು ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಉತ್ತಮ ನಾಗರೀಕರಾಗಿ ಜೀವನ ಸಾಗಿಸಲು ಅತ್ಯಂತ ಸಹಕಾರಿ ಎಂದರು.

ಬಸವಣ್ಣನವರು ಹೇಳಿದಂತೆ ನಿತ್ಯ ಕಾಯಕವನ್ನು ಮಾಡುವ ಎಲ್ಲ ಸಮುದಾಯದ ಪ್ರತಿಯೊಬ್ಬರು ಜೀವನದಲ್ಲಿ ಬಸವಣ್ಣನವರ ಆದರ್ಶಗಳು ನೆಲೆಗೊಂಡಿದ್ದು ಅವರ ತತ್ವ ಅನುಸಾರವಾಗಿ ದೇಶದ ಉದ್ದಗಲದಲ್ಲೂ ಬಸವಣ್ಣನವರ ಆದರ್ಶಗಳು ಇಂದಿಗೂ ಜೀವಂತವಾಗಿವೆ. ಆದರಿಂದ ಬಸವಣ್ಣನವರನ್ನು ಎಲ್ಲಾ ಸಮುದಾಯಗಳ ಸಾಂಸ್ಕೃತಿಕ ನಾಯಕರಾಗಿದ್ದಾರೆ ಎಂದು ಸಭೆಗೆ ಬಸವಣ್ಣರ ಆದರ್ಶವನ್ನು ತಿಳಿಸಿ ಕಾಯಕ, ದಾಸೋಹ ತತ್ವಗಳ ಮೂಲಕ ಸಮಾನತೆಯನ್ನು ಸಾರುತ್ತಾ, ಸಕಲ ಜೀವರಾಶಿಗಳಿಗೂ ಲೇಸನ್ನು ಬಯಸಿದ ಮಹಾನ್ ಮಾನವತಾವಾದಿ ಅಣ್ಣ ಬಸವಣ್ಣನವರ ವಚನಗಳ ತತ್ವ, ಆದರ್ಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳೋಣ ದತ್ತಿ ಕಾರ್ಯಕ್ರಮದಲ್ಲಿ ತಿಳಿಸಿದರು.

ಸಾಹಿತಿಗಳಾದ ಮು.ನಾ.ರಮೇಶ ಉಪನ್ಯಾಸ ನೀಡಿ ಮಾತನಾಡಿ 12ನೇ ಶತಮಾನದಲ್ಲಿ ರಚಿತವಾದ ಶಿವ ಶರಣರ ವಚನಗಳು ನೈತಿಕತೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಆಧುನಿಕ ಕಾಲದ ಹಲವಾರು ಸಾಮಾಜಿಕ ಸಮಸ್ಯೆಗಳಿಗೆ ದರೋಡೆ ಸುಲಿಗೆ ಅತ್ಯಾಚಾರಗಳಂತಹ ಕೃತ್ಯಗಳಲ್ಲಿ ತೊಡಗಿರುವ ವಿಕೃತ ಮನಸ್ಥಿತಿಯ ಜನರು ವಚನವನ್ನು ಅಧ್ಯಯನ ಮಾಡಿದರೆ ಬದಲಾಗುತ್ತಾರೆ ಎಂದು ತಿಳಿಸಿದರು.



ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹೆಳವರಹುಂಡಿ ಸಿದ್ದಪ್ಪ ಉದ್ಘಾಟಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಚಂದ್ರಶೇಖರ್ ಅವರು ದತ್ತಿ ಉಪನ್ಯಾಸಗಳ ಮಾಹಿತಿಯನ್ನು ನೀಡಿದರು. ದಿವ್ಯ ಸಾಹಿತ್ಯವನ್ನು ವಾಟಾಳು ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ವಹಿಸಿದ್ದರು. ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕೆಬ್ಬೆ ಹುಂಡಿ ಸೋಮಶೇಖರ್,ಪುರಸಭಾ ಸದಸ್ಯ ಎಸ್ ಕೆ.ಕಿರಣ್, ಮುಖ್ಯ ಉಪಾಧ್ಯಾಯ ನಂಜುಂಡಸ್ವಾಮಿ, ಎಸ್ಡಿಎಂಸಿ ಅಧ್ಯಕ್ಷ ಪಿ ಮಹದೇವಸ್ವಾಮಿ, ಡೈರಿ ಅಧ್ಯಕ್ಷ ಬಿ ಮಹದೇವಸ್ವಾಮಿ, ವಕೀಲ ಜ್ಞಾನೇಂದ್ರ ಮೂರ್ತಿ, ಆಡಿಟರ್ ಮಂಜುನಾಥ್, ಡಣಾ ನಾಯಕನಪುರ ಚಿನ್ನಬುದ್ಧಿ, ಮಹಾದೇವಪ್ಪ ಕೆ.ಎನ್ ಅಶೋಕ್, ದತ್ತಿ ದಾಸೋಹ ಸಿದ್ದಲಿಂಗಸ್ವಾಮಿ, ಗಿರಿಸ್ವಾಮಿ, ಶ್ರೀನಿವಾಸ್, ಸಿದ್ದರಾಜು.ಬಿ, ನಟರಾಜು, ಗ್ರಾಮಸ್ಥರು ಹಾಜರಿದ್ದರು.

ಜೆಡಿಎಸ್ ಮುಖಂಡ ರಾಮಲಿಂಗೇಗೌಡ ನಿಧನ

ಭೇರ್ಯ: ಸಾಲಿಗ್ರಾಮ ತಾಲೂಕಿನ ವಡ್ಡರಕೊಪ್ಪಲು ಗ್ರಾಮದ ಜೆಡಿಎಸ್ ಹಿರಿಯ ಮುಖಂಡ ರಾಮಲಿಂಗೇಗೌಡ (78) ಗುರುವಾರ ನಿಧನರಾದರು.



ದಿವಂಗತರು ಮುಖ್ಯ ಪೇದೆ ಶಶಿಕುಮಾರ್, ಗುತ್ತಿಗೆದಾರ ವಡ್ಡರಕೊಪ್ಪಲು ಶ್ರೀಧರ್ ಸೇರಿದಂತೆ ಇಬ್ಬರು ಪುತ್ರರು ಮತ್ತು ಪುತ್ರಿಯರು ಹಾಗು ಅಪಾರ ಬಂದು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಸ್ವಗ್ರಾಮ ವಡ್ಡರಕೊಪ್ಪಲು ಗ್ರಾಮದ ತೋಟದಲ್ಲಿ ನೆರವೇರಿಸಲಾಯಿತು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಸಾ.ರಾ.ಮಹೇಶ್, ಜಿ.ಪಂ.ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್, ಮಾಜಿ ಸದಸ್ಯರಾದ ಅಮಿರ್ ವಿ.ದೇವರಹಟ್ಟಿ, ಎಂ.ಟಿ.ಕುಮಾರ್, ತಾ.ಪಂ.ಮಾಜಿ ಸದಸ್ಯೆ ಶೋಭಾಕೋಟೆಗೌಡ, ಬಿಜೆಪಿ ಮಾಜಿ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್, ತಾ.ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ, ಎಸ್.ಪಿ.ತಮ್ಮಯ್ಯಣ್ಣ, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ತಂಬಾಕು ಮಂಡಳಿ ನಿವೃತ್ತ ಅಧೀಕ್ಷಕ ಕೆ.ಎನ್.ದಿನೇಶ್ ನಂಜಪ್ಪ, ಹುಣಸೂರು ತಹಸೀಲ್ದಾರ್ ಎಂ.ಎಸ್.ಯಧುಗಿರೀಶ್, ಆರ್‌ಟಿಓ ಮಲ್ಲಿಕಾರ್ಜುನ, ನಿವೃತ್ತ ರಾಜಸ್ವ ನಿರೀಕ್ಷಕ ಸಾಲಿಗ್ರಾಮ ಪ್ರಭಾಕರ್, ಜೆಡಿಎಸ್ ಮುಖಂಡ ಮು.ರಾ.ಹರ್ಷಕುಮಾರ್ ಗೌಡ, ಎಸ್.ಪಿ.ಆನಂದ್, ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಳ್ಳಿ ಸೋಮು, ಮೆಡಿಕಲ್ ರಾಜಣ್ಣ, ವಡ್ಡರವಿ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಹರಿಚಂದರ್, ಅನೀಲ್, ಬೆಂಗಳೂರು ಸಂಜಯ್, ಪತ್ರಕರ್ತ ಭೇರ್ಯ ಮಹೇಶ್ ಸೇರಿದಂತೆ ಅನೇಕರು ತೀವ್ರ ಸಂತಾಪ ಸೂಚಿಸಿದರು.

ಎಂಡಿಎಯಿಂದ ಪಂಜಿನ ಕವಾಯಿತು ಮೈದಾನಕ್ಕೆ

ಶಾಶ್ವತ ಛಾವಣಿ, ಫ್ಲಡ್‌ಲೈಟ್

ವರ್ಷವಿಡೀ ಚಟುವಟಿಕೆ ತಾಣವಾಗಿಸುವ ಉದ್ದೇಶ



ಮೈಸೂರಿನ ಬನ್ನಿಮಂಟಪದ ಟಾರ್ಚ್‌ಲೈಟ್ ಪೆರೇಡ್ ಮೈದಾನ

ಮೈಸೂರು, ನ. 27 (ಆರ್‌ಕೆ)– ಕೇವಲ ದಸರಾ ಪಂಜಿನ ಕವಾಯಿತು ಕಾರ್ಯಕ್ರಮಕ್ಕೆ ಮಾತ್ರ ವರ್ಷಕ್ಕೊಮ್ಮೆ ಬಳಕೆಯಾಗುತ್ತಿದ್ದ ಮೈಸೂರಿನ ಬನ್ನಿಮಂಟಪದ ಟಾರ್ಚ್‌ಲೈಟ್ ಪೆರೇಡ್ ಮೈದಾನದ ಆಸನಗಳಿಗೆ ಶಾಶ್ವತ ಮೇಲ್ಛಾವಣಿ ಹಾಗೂ ಫ್ಲಡ್‌ಲೈಟ್ ಅಳವಡಿಸುವುದು ಸೇರಿದಂತೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಮುಂದಾಗಿದೆ.

ಇದುವರೆಗೆ ವರ್ಷದಲ್ಲಿ ದಸರಾ ವಿಜಯದಶಮಿ ಮೆರವಣಿಗೆಯಂದು ಸಂಜೆ ಪಂಜಿನ ಕವಾಯಿತು ಪ್ರದರ್ಶನ, ವೈಮಾನಿಕ ಪ್ರದರ್ಶನ, ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಗಳು ಈ ಮೈದಾನದಲ್ಲಿ ನಡೆಯುತ್ತಿದ್ದವು. ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಈ ಮೈದಾನವನ್ನು ಉಚಿತವಾಗಿ ಈ ನಾಲ್ಕೂ ಸರ್ಕಾರಿ ಕಾರ್ಯಕ್ರಮಗಳಿಗೆ ನೀಡಲಾಗುತ್ತಿತ್ತು. ಅವುಗಳಿಂದ ಪ್ರಾಧಿಕಾರಕ್ಕೆ ಯಾವುದೇ ವರಮಾನ ಬರುತ್ತಿರಲಿಲ್ಲ. ಆದರೆ ವರ್ಷವಿಡೀ ಅದರ ಸ್ವಚ್ಛತೆ, ಭದ್ರತೆ, ಸುಣ್ಣ ಬಣ್ಣ ಬಳಿಯುವುದು, ಮೈದಾನದ ಸಮರ್ಪಕ ನಿರ್ವಹಣೆಗೆ ಎಂಡಿಎಯಿಂದ ಭಾರೀ ಹಣ ಖರ್ಚಾಗುತ್ತಿತ್ತು.

ಅಲ್ಲಿ ಕುಳಿತು ಕಾರ್ಯಕ್ರಮ ವೀಕ್ಷಿಸುವವರಿಗೆ ಮಳೆ, ಬಿಸಿಲು, ಗಾಳಿಯಿಂದ ರಕ್ಷಣೆಗೆ ಮೇಲ್ಛಾವಣಿ ಇಲ್ಲದ ಕಾರಣ ಮಹಿಳೆಯರು, ವೃದ್ಧರು ಹಾಗೂ ಮಕ್ಕಳಿಗೆ ತೀವ್ರ ತೊಂದರೆಯಾಗುತ್ತಿದೆ. ಗಣ್ಯಾತಿಗಣ್ಯರು ಆಗಮಿಸಿದಾಗ ಅವರಿಗೆ ಸೂಕ್ತ ರಕ್ಷಣೆ ಹಾಗೂ ಭದ್ರತೆ ಒದಗಿಸುವುದು ಸಹ ಪೊಲೀಸರಿಗೆ ಸವಾಲಾಗುತ್ತಿದೆ. ಸೂಕ್ತ ವಾಹನ ನಿಲುಗಡೆ ಹಾಗೂ ಶೌಚಾಲಯ ಸೌಲಭ್ಯದ ಕೊರತೆ ಎದ್ದು ಕಾಣುತ್ತಿದ್ದು, ಇದೀಗ ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಿ ಮೈದಾನದಿಂದ ಒಂದಿಷ್ಟು ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಚಿಂತನೆ ನಡೆಸಿದೆ.

ನಿರ್ಲಕ್ಷಿತ ಬಾಲಭವನಕ್ಕೆ ಮುಕ್ತಿ

ತೀವ್ರ ನಿರ್ಲಕ್ಷಕ್ಕೊಳಗಾಗಿರುವ ಬನ್ನಿ ಮಂಟಪದ ಪಂಜಿನ ಕವಾಯಿತು ಮೈದಾನಕ್ಕೆ ಹೊಂದಿಕೊಂಡಂತಿರುವ ಜವಾಹರ್ ಬಾಲಭವನಕ್ಕೆ ಮುಕ್ತಿ ಸಿಗಬೇಕಿದೆ. ಮಕ್ಕಳ ಮನರಂಜನೆಗಾಗಿ ಇರುವ 10 ಎಕರೆ ವಿಸ್ತಾರ ಪ್ರದೇಶದ ಬಾಲಭವನದಲ್ಲಿ ಮೂಲ ಸೌಕರ್ಯ ಕಲ್ಪಿಸಿ ಪುನರುಜ್ಜೀವನಗೊಳಿಸುವ ಯೋಜನೆಗೆ ಈ ಹಿಂದೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ಡಿಪಿಆರ್ ತಯಾರಿಸಲಾಗಿತ್ತಾದರೂ ಅನುಮೋದನೆ ದೊರೆಯದ ಕಾರಣ ಕಾಮಗಾರಿ ನೆನೆಗುದಿಗೆ ಬಿದ್ದಿದೆ. ಇದೀಗ ಪ್ರಾಧಿಕಾರವು ಪಂಜಿನ ಕವಾಯಿತು ಮೈದಾನಕ್ಕೆ ಶಾಶ್ವತ ಶೆಲ್ಟರ್ ಮತ್ತು ಫ್ಲಡ್‌ಲೈಟ್ ಅಳವಡಿಸಲು ಮುಂದಾಗಿರುವುದರಿಂದ ಅದೇ ಆವರಣದಲ್ಲಿರುವ ಬಾಲಭವನದ ಅಭಿವೃದ್ಧಿಗೂ ಅಧಿಕಾರಿಗಳು ಗಮನಹರಿಸಬೇಕಿದೆ.

ವರ್ಷದಲ್ಲಿ ಕೇವಲ ಮೂರ್‍ನಾಲ್ಕು ಸರ್ಕಾರಿ ಕಾರ್ಯಕ್ರಮಗಳನ್ನು ಹೊರತುಪಡಿಸಿದಲ್ಲಿ ಇಡೀ ವರ್ಷ ಮೈದಾನವು ಖಾಲಿ ಇರುತ್ತದೆ. ಪರಿಣಾಮ ಪುಂಡರು ಅಲ್ಲಿ ಅನೈತಿಕ ಚಟುವಟಿಕೆಗಳ ತಾಣವಾಗಿಸಿಕೊಂಡಿದ್ದಾರೆ. ಸುತ್ತಲಿನ ಕಾಂಪೌಂಡನ್ನು ಜಖಂಗೊಳಿಸುತ್ತಿದ್ದರು. ಅದರ ನಿರ್ವಹಣೆಗೆ ಪ್ರಾಧಿಕಾರದಿಂದ ಅನಗತ್ಯ ಹಣ ಖರ್ಚು ಮಾಡಲಾಗುತ್ತಿತ್ತು. ಇದೆಲ್ಲವನ್ನೂ ಗಮನದಲ್ಲಿರಿಸಿಕೊಂಡು ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್ ಅವರು ಟಾರ್ಚ್‌ಲೈಟ್ ಪೆರೇಡ್ ಮೈದಾನಕ್ಕೆ ಶಾಶ್ವತ ಮೂಲಸೌಕರ್ಯ ಕಲ್ಪಿಸುವ ಮೂಲಕ ಪುನರುಜ್ಜೀವನಗೊಳಿಸಿ ವರ್ಷವಿಡೀ ಕಾರ್ಯ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಮಾಡಲು ಮುಂದಾಗಿದ್ದಾರೆ. ಸರ್ಕಾರಿ ಕಾರ್ಯಕ್ರಮಗಳನ್ನು ಹೊರತುಪಡಿಸಿ ಕೆಲ ಷರತ್ತುಗಳೊಂದಿಗೆ ಖಾಸಗಿ ಸಂಸ್ಥೆಗಳಿಗೂ ಕಾರ್ಯಕ್ರಮ ನಡೆಸಲು ಬಾಡಿಗೆಗೆ ನೀಡುವ ಮೂಲಕ ಪ್ರಾಧಿಕಾರಕ್ಕೂ ವರಮಾನ ಬರುವಂತೆ ಮಾಡುವುದು ಅವರ ಉದ್ದೇಶವಾಗಿದೆ.

ಈ ನಿಟ್ಟಿನಲ್ಲಿ ಇಂಜಿನಿಯರ್‌ಗಳ ಮೂಲಕ ಅಭಿವೃದ್ಧಿ ಬಗ್ಗೆ ಡಿಪಿಆರ್ ತಯಾರಿಸಿ ಸಾಧ್ಯ–ಅಸಾಧ್ಯತೆಗಳ ವರದಿ ತರಿಸಿಕೊಂಡು ಅಧ್ಯಯನ ಮಾಡಿ ಒಂದು ವೇಳೆ ಅದು ಪೂರಕವಾಗಿದೆ ಎಂದು ದೃಢಪಟ್ಟಲ್ಲಿ ಸಾರ್ವಜನಿಕರು ಹಾಗೂ ಪ್ರಾಧಿಕಾರದ ಹಿತದೃಷ್ಟಿಯಿಂದ ಪುನರುಜ್ಜೀವನ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರಕ್ಷಿತ್ ಚಿಂತನೆ ನಡೆಸಿದ್ದಾರೆ. ಒಂದು ವೇಳೆ ಈ ಯೋಜನೆ ಸಾಕಾರಗೊಂಡಲ್ಲಿ ಮುಂದಿನ ದಿನಗಳಲ್ಲಿ ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನವು ಸದಾ ಚಟುವಟಿಕೆಯ ತಾಣವಾಗಲಿದೆ.

ಇದೀಗ ಅದರ ಪಕ್ಕದಲ್ಲೇ ಇರುವ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಆವರಣದಲ್ಲಿ ಗ್ರಾಮಾಂತರ ಬಸ್ ನಿಲ್ದಾಣ ನಿರ್ಮಾಣವಾಗುತ್ತಿರುವುದರಿಂದ ಭವಿಷ್ಯದಲ್ಲಿ ಬನ್ನಿಮಂಟಪ ಸುತ್ತಮುತ್ತ ವಾಣಿಜ್ಯ ಚಟುವಟಿಕೆಗಳು ಹೆಚ್ಚಾಗಲಿವೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರೇ ಇಷ್ಕ್ ಮೇ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಓಎಲ್‌ಸಿ (ಕ)	4 ಪ್ರದರ್ಶನಗಳು
ಲಿಡೋ	
ಫ್ಲರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು

ಅಮೆರಿಕಾದಿಂದ ಮೆಕ್ಕೆ ಜೋಳ, ಹಾಲಿನ ಉತ್ಪನ್ನ, ಸೋಯಾ ಬಿನ್ ಖರೀದಿ

ರೈತರಿಗೆ ಹೊಡೆತ ಬೀಳುವ ಒಪ್ಪಂದ ಕೈ ಬಿಡಲು ರೈತ ಸಂಘ ಆಗ್ರಹ

ಮೈಸೂರು,ನ.27(ಜಿಎ)–ಅಮೇರಿಕಾದಿಂದ ಮೆಕ್ಕೆ ಜೋಳ, ಹಾಲಿನ ಉತ್ಪನ್ನ ಹಾಗೂ ಸೋಯಾಬೀನ್ ಆಮದು ಮಾಡಿಕೊಳ್ಳಲು ಭಾರತ ಅಮೇರಿಕಾದೊಂದಿಗೆ ಮುಕ್ತ ವ್ಯಾಪಕ ಒಪ್ಪಂದಕ್ಕೆ ಮುಂದಾಗಿರುವುದರಿಂದ ದೇಶದ ರೈತರು ಮತ್ತು ಗ್ರಾಹಕರಿಗೂ ಹೊಡೆತ ಬೀಳಲಿದ್ದು, ಇದನ್ನು ಕೈಬಿಡುವಂತೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷೆ ಚುಕ್ಕಿ ನಂಜುಂಡಸ್ವಾಮಿ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮೇರಿಕಾದಲ್ಲಿ ಬಿಲ್‌ಗೇಟ್ಸ್ ಕಾರ್ಪೋರೇಟ್ ಸಂಸ್ಥೆಯಂತೆ ಕೃಷಿ ನಡೆಸುತ್ತಿದ್ದಾರೆ. ಅವರ ಮಟ್ಟಕ್ಕೆ ನಮ್ಮ ರೈತರು ಪೈಪೋಟಿ ನಡೆಸಲು ಸಾಧ್ಯವಿಲ್ಲ. ಶೂನ್ಯ ಸುಂಕದಲ್ಲಿ ಖರೀದಿಸಲು ಮುಂದಾಗಿದ್ದಾರೆ ಎಂಬ ಮಾಹಿತಿ ಇದೆ. ಈ ಒಪ್ಪಂದದಿಂದ ರೈತರಿಗೆ ಮಾತ್ರವಲ್ಲದೇ ಗ್ರಾಹಕರ ಮೇಲೂ ಪರಿಣಾಮ ಬೀಳಲಿದೆ ಎಂದು ತಿಳಿಸಿದರು.

ಈ ಹಿಂದೆ 1980ರಲ್ಲಿ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವೇದಿಕೆಗಳಲ್ಲಿ ಕೃಷಿ ಕ್ಷೇತ್ರವನ್ನು ವಿಶ್ವವಾಣಿಜ್ಯ ಒಪ್ಪಂದದ ಹೊರಗಡೆ ಇಡಬೇಕು ಎಂದು ಪ್ರತಿಪಾದಿಸಿದ್ದಾರೆ. ಆಹಾರ ಎಂಬುದು ದೇಶದ ನಾಗರಿಕರ ಸಾಂವಿಧಾನಿಕ ಹಕ್ಕಾಗಿದ್ದು, ಅದು ವ್ಯಾಪಾರದ ಸರಕಲ್ಲ ಎಂಬುದನ್ನು ಪ್ರತಿಪಾದಿಸಿದ್ದಾರೆ. ಅದನ್ನು ಎಲ್ಲರೂ ಪಾಲಿಸಬೇಕಿದೆ ಎಂದರು.

ಸರ್ಕಾರದ ಎಥೆನಾಲ್ ನೀತಿಗಳು, ಕೋಳಿ ಮತ್ತು ಹೈನುಗಾರಿಕೆ ಉದ್ಯಮಗಳಿಂದ ಬಲವಾದ ದೇಶೀಯ ಬೇಡಿಕೆಯಿಂದಾಗಿ ರೈತರ ಸಂಖ್ಯೆ ಗಮನಾರ್ಹವಾಗಿ ಹೆಚ್ಚುತ್ತಿದೆ. ಆದರೆ ಮುಕ್ತ ವ್ಯಾಪಾರ ಒಪ್ಪಂದದಿಂದಾಗಿ ಹಲವಾರು ಮೆಟ್ರಿಕ್ ಟನ್‌ಗಳಷ್ಟು ಮೆಕ್ಕೆಜೋಳವನ್ನು ಸುಂಕವಿಲ್ಲದೇ ಇಲ್ಲಿಗೆ ತಂದು ಸುರಿದರೆ ಭಾರತ ಮೆಕ್ಕೆಜೋಳ ಬೆಳೆಯುವ ರೈತರ ಪರಿಸ್ಥಿತಿ ಏನಾಗಬಹುದೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಇದೇ ವೇಳೆ ಹಾಲಿನ ಪುಡಿ, ಚೀಸ್, ಪ್ರೋಟೀನ್, ಹಾಲಿನ ಘನ ವಸ್ತುಗಳಂತಹ ಡೈರಿ ಉತ್ಪನ್ನಗಳನ್ನು ಅಮೇರಿಕಾದಿಂದ ಸುಂಕ ರಹಿತವಾಗಿ ಇಲ್ಲಿಗೆ ತರಿಸಿಕೊಂಡರೆ ಇಲಿನ ಹೈನೋದ್ಯಮ ನೆಲ ಕಚ್ಚುತ್ತದೆ. ಭಾರತದಲ್ಲಿ ಪ್ರಮುಖವಾಗಿ ಮಹಿಳೆಯರೇ ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದು, ಇವರೆಲ್ಲರೂ ಬೀದಿ ಪಾಲಾಗಬೇಕಾಗುತ್ತದೆ ಎಂದು ವಿವರಿಸಿದರು.

ಭಾರತ ಸರ್ಕಾರವು ಈ ಒಪ್ಪಂದಕ್ಕೆ ಸಹಿ ಹಾಕಬಾರದು ಮತ್ತು ಅಕ್ರಮ ಸುಂಕಗಳ ಮೂಲಕ ಹೇರಲಾಗುವ ಅಮೇರಿಕ ಒತ್ತಡಗಳಿಗೆ ಮಣಿಯಬಾರದು ಹಾಗೂ ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿ ವಲಯಕ್ಕೆ ಧಕ್ಕೆ ತರಬಾರದು. ಈ ಬಗ್ಗೆ ರಾಜ್ಯ ಸರ್ಕಾರ ನಮಗೆ ಸಂಬಂಧ ಇಲ್ಲ ಎಂದು ಸುಮ್ಮನೆ ಇರಬಾರದು ಕೇಂದ್ರಕ್ಕೆ ಪತ್ರ ಬರೆದು ಈ ಒಪ್ಪಂದವನ್ನು ವಿರೋಧಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಂಜು ಕಿರಣ್, ಹೊನ್ನೂರು ಪ್ರಕಾಶ್, ಶಿರಮಳ್ಳಿ ಮಂಜಣ್ಣ, ಕಣ್ಣಯ್ಯನ್ ಉಪಸ್ಥಿತರಿದ್ದರು.

ಅಂಬೇಡ್ಕರ್ ಯುವಕರ ಸಂಘದ ಸಿಎ ನಿವೇಶನ ಅನ್ಯರ ಪಾಲಾಗಬಾರದು

ಅಧಿಕಾರಿಗಳಿಗೆ ಶಾಸಕ ಶ್ರೀವತ್ಸ ಸೂಚನೆ



ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, 48ನೇ ವಾರ್ಡ್‌ನಲ್ಲಿ ಪಾದಯಾತ್ರೆ ನಡೆಸಿದರು.

ಮೈಸೂರು, ನ27– ಅಂಬೇಡ್ಕರ್ ಯುವಕರ ಸಂಘಕ್ಕೆ ಮಂಜೂರಾಗಿರುವ ಸಿಎ ನಿವೇಶನ ಅನ್ಯರ ಪಾಲಾಗದಂತೆ ಕೂಡಲೇ ಕ್ರಮ ವಹಿಸುವಂತೆ ಶಾಸಕ ಟಿ.ಎಸ್.ಶ್ರೀವತ್ಸ, ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೃಷ್ಣರಾಜ ಕ್ಷೇತ್ರದ 48ನೇ ವಾರ್ಡ್ ಮಳಲವಾಡಿಯಲ್ಲಿ ಇಂದು ಪಾದಯಾತ್ರೆ ನಡೆಸಿದ ವೇಳೆ, ಮುಡಾದಿಂದ 1994ರಲ್ಲಿ ಅಂಬೇಡ್ಕರ್ ಯುವಕರ ಸಂಘಕ್ಕೆ ಮಂಜೂರಾಗಿರುವ ಸಿಎ ನಿವೇಶನವನ್ನು ಅನ್ಯರು ಕಬಳಿಸಲು ಯತ್ನಿಸುತ್ತಿರುವುದಾಗಿ ಸಂಘದ ಅಧ್ಯಕ್ಷ ಪ್ರಶಾಂತ್ ದೂರಿದರು. ಈ ವೇಳೆ ಸ್ಥಳದಲ್ಲಿದ್ದ ಅಧಿಕಾರಿಗಳನ್ನು ವಿಚಾರಿಸಿದ ಶಾಸಕ ಶ್ರೀವತ್ಸ, ಯಾವುದೇ ಕಾರಣಕ್ಕೂ ಸಿಎ ನಿವೇಶನವನ್ನು ಅನ್ಯರು ಅತಿಕ್ರಮಿಸಿಕೊಳ್ಳದಂತೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಮಳೆ ನೀರು ಚರಂಡಿ, ಸ್ಮಶಾನದ ರಸ್ತೆಗೆ ಹೈಮಾಸ್ಟ್ ವಿದ್ಯುತ್ ದೀಪದ ವ್ಯವಸ್ಥೆ ಸೇರಿದಂತೆ ಸ್ಥಳೀಯರ ಹಲವು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು. ವಾಹನಗಳಲ್ಲಿ ಬಂದು ಸ್ಮಶಾನದ ರಸ್ತೆಗೆ ಕಸ ಎಸೆದು ಹೋಗುತ್ತಾರೆ. ಕತ್ತಲಾಗುತ್ತಿದ್ದಂತೆ ಮದ್ಯ, ಗಾಂಜಾ ಸೇವನೆ ಮಾಡುವವರ ಉಪಟಳ ಹೆಚ್ಚಾಗುತ್ತಿದೆ. ಪುಂಡರ ಹಾವಳಿಯಿಂದ ನೆಮ್ಮದಿ ಹಾಳಾಗಿದೆ ಎಂಬ ಜನರ ದೂರಿಗೆ ಸ್ಪಂದಿಸಿದ ಶಾಸಕರು, ಕಸ ಎಸೆಯುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ವಹಿಸಿ, ಪೊಲೀಸ್ ಗಸ್ತು ಹೆಚ್ಚಿಸಿ ಪುಂಡರಿಗೆ ಚುರುಕು ಮುಟ್ಟಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ವಿಶ್ವೇಶ್ವರಯ್ಯ, ಶೈಲೇಂದ್ರ ಕುಮಾರ್, ರಾಕೇಶ್ ಗೌಡ, ಪ್ರಶಾಂತ್ ಮಳಲವಾಡಿ, ಮಧು, ರಾಜು, ಜಯರಾಮ್, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕೇಂದ್ರದ ಮುದ್ರಾ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ 2.5 ಲಕ್ಷ ಫಲಾನುಭವಿಗಳು

ಹೋಟೆಲು ಉದ್ಯಮಿಗಳ ಅಭಿನಂದನಾ ಸಮಾರಂಭ ಉದ್ಘಾಟಿಸಿ ಶಾಸಕ ಟಿ.ಎಸ್.ಶ್ರೀವತ್ಸ ಮಾಹಿತಿ

ಮೈಸೂರು,ನ.27(ಪಿಎಂ)– ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ 3 ಸಾವಿರ ಕೋಟಿ ರೂ. ಸಾಲ ಸೌಲಭ್ಯ ನೀಡಲಾಗಿದೆ ಎರಡೂವರೆ ಲಕ್ಷ ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದು, ಈ ಪೈಕಿ ಸಣ್ಣ ಹೋಟೆಲ್ ಉದ್ಯಮಿಗಳು ಮತ್ತು ರಸ್ತೆಬದಿ ವ್ಯಾಪಾರಿಗಳು ಸೇರಿದಂತೆ 300 ಫಲಾನುಭವಿಗಳೂ ಅನುಕೂಲ ಪಡೆದಿದ್ದಾರೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಮೈಸೂರಿನ ಯಾದವಗಿರಿಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸಹಕಾರ ವಿಜಯೋತ್ಸವ (ಸದರಿ ಸಂಘಕ್ಕೆ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ ಲಭಿಸಿರುವ ಹಿನ್ನೆಲೆಯಲ್ಲಿ) ಹಾಗೂ ಸಾಧಕ ಹೋಟೆಲು ಉದ್ಯಮಿಗಳಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಮೈಸೂರು ಜಿಪಂ ಸಭಾಂಗಣದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ದಿಶಾ ಸಮಿತಿ ಸಭೆ ನಡೆಯಿತು. ಸಭೆಯಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಹ ಪಾಲ್ಗೊಂಡಿದ್ದರು. ಇಲಾಖಾವಾರು ಪ್ರಗತಿ ಪರಿಶೀಲನೆ ನಡೆಸಿದಾಗ, 2025ರ ಏಪ್ರಿಲ್‌ನಿಂದ ಅಕ್ಟೋಬರ್ 31ರವರೆಗೆ ಮುದ್ರಾ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ ಸುಮಾರು 3 ಸಾವಿರ ಕೋಟಿ ರೂ. ಸಾಲಸೌಲಭ್ಯ ನೀಡಿರುವ ಅಂಕಿ ಅಂಶ ತಿಳಿಯಿತು. ಇದರಿಂದ ಮೈಸೂರು ಜಿಲ್ಲೆಯ ಎರಡೂವರೆ ಲಕ್ಷ ಮಂದಿ ಪ್ರಯೋಜನ ಪಡೆದಿದ್ದಾರೆ. ಆಹಾರೋದ್ಯಮಗಳು ಸಹ ತಮ್ಮ ಪರಿಶ್ರಮದ ಮೂಲಕ ಮೈಸೂರಿಗೆ ಹೆಸರು ತಂದುಕೊಟ್ಟಿದ್ದಾರೆ ಎಂದು ತಿಳಿಸಿದರು.



ಮೈಸೂರಿನ ಯಾದವಗಿರಿಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ಸಾಧಕ ಹೋಟೆಲು ಉದ್ಯಮಿಗಳು ಹಾಗೂ ಇತರರನ್ನು ಅಭಿನಂದಿಸಲಾಯಿತು.

ಇದೇ ವೇಳೆ ಸದರಿ ಪತ್ತಿನ ಸಹಕಾರ ಸಂಘದ ಬೆಳವಣಿಗೆಗೆ ಕೊಡುಗೆ ನೀಡಿದ ಹೋಟೆಲ್ ಉದ್ಯಮಿಗಳಾದ ಕೆ.ಪ್ರಕಾಶ ಶೆಟ್ಟಿ, ಎನ್.ಜಿ.ಚಂದ್ರೇಗೌಡ, ಓ.ಹೆಚ್. ಸಿದ್ದಿಕಿ, ಸುಬ್ರಮಣಿ ಅವರನ್ನು ಅಭಿನಂದಿಸಲಾಯಿತು. ಅಲ್ಲದೆ, ಹಿರಿಯ ಟ್ರಾಫಿಕ್ ವಾರ್ಡನ್ ಮಹೇಶ್ ಹಾಗೂ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹೋಟೆಲ್ ಉದ್ಯಮಿ ಎ.ಸಿ.ರವಿ ಅವರನ್ನು ಸನ್ಮಾನಿಸಲಾಯಿತು.

ಶ್ರೀ ರಾಮಕೃಷ್ಣ ವಿದ್ಯಾಶಾಲಾ ಕರಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜಿ ಸಾನಿಧ್ಯ ವಹಿಸಿದ್ದರು. ಗೋಪಾಲಗೌಡ ಸ್ಮಾರಕ ನ್ಯೂರೋ ಕೇರ್ ಸೆಂಟರ್ ಮುಖ್ಯಸ್ಥ ಡಾ.ಶುಶ್ರುತ್‌ಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಸದರಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಸಂಸ್ಥಾಪಕ ಅಧ್ಯಕ್ಷ ಎಂ.ಕೃಷ್ಣದಾಸ ಪುರಾಣಿಕ್, ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಮತ್ತಿತರರು ಹಾಜರಿದ್ದರು.

ಯುದ್ಧ ಸ್ಮಾರಕದ ಮುಂದುವರೆದ ಅಭಿವೃದ್ಧಿ ಕಾಮಗಾರಿ ಸಂಬಂಧ

ಅಧಿಕಾರಿಗಳಿಂದ ಸ್ಥಳ ಪರಿಶೀಲನೆ

ಮೈಸೂರು, ನ.27(ಎಂಟಿವೈ)– ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಯುದ್ಧ ಸ್ಮಾರಕದ ಕಾಮಗಾರಿ ಪೂರ್ಣಗೊಳಿಸಲು ಮೈಸೂರು ಮಹಾನಗರ ಪಾಲಿಕೆಯ ಅಮೃತ್ ಯೋಜನೆಯಡಿ 1.5 ಕೋಟಿ ರೂ. ಮಂಜೂರಾಗಿರುವುದರಿಂದ ಮುಂದುವರೆದ ಕಾಮಗಾರಿಗೆ ಸ್ಥಳ ಪರಿಶೀಲನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಸಮೀಪದ ಎನ್‌ಸಿಸಿ ಕವಾಯತ್ ಮೈದಾನದಲ್ಲಿ ಈಗಾಗಲೇ ಬೃಹತ್ ಗಾತ್ರದ ಕಲ್ಲಿನ ಸ್ಲಾಬ್‌ಗಳನ್ನು ಜೋಡಣೆ ಮಾಡಿ ಸ್ಮಾರಕದ ಸ್ತಂಬ ಸ್ಥಾಪಿಸಲಾಗಿದ್ದು, ಅದನ್ನು ಅಂತರ ರಾಷ್ಟ್ರೀಯ ಗುಣಮಟ್ಟದ ಸ್ಮಾರಕವಾಗಿ ರೂಪಿಸಲು ಮೈದಾನದಲ್ಲಿ ಅಲಂಕಾರಿಕ ಗಿಡ ನೆಡುವುದೂ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿ ನಡೆಸುವುದಕ್ಕಾಗಿ ಪರಿಶೀಲನೆ ನಡೆಸಲಾಯಿತು.

ಮುಂದುವರೆದ ಕಾಮಗಾರಿ: ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಮೈದಾನದಲ್ಲಿ ನಿರ್ಮಿಸಿರುವ ಸ್ಮಾರಕದ ಸುತ್ತಲೂ ಗ್ರೀನ್ ಸ್ಟೋನ್ ಅಳವಡಿಕೆ ಸೇರಿದಂತೆ ಇನ್ನಿತರ ಕಾಮಗಾರಿ ನಡೆಸಬೇಕಾಗಿರುವುದರಿಂದ ಅಭಿವೃದ್ಧಿ ಕಾಮಗಾರಿಯ ನೀಲನಕ್ಷೆ ಪರಿಶೀಲಿಸಿ, ಮೈದಾನದ ಸ್ಥಳವನ್ನು ಪರಿಶೀಲಿಸಲಾಯಿತು. ನಿವೃತ್ತ ಸೇನಾಧಿಕಾರಿ, ಚಿಕ್ಕಬಳ್ಳಾಪುರದ ವೈದ್ಯಕೀಯ ಕಾಲೇಜಿನ ಸಿಎಓ ಸಿ.ಎಲ್.ಆನಂದ, ನಿವೃತ್ತ ಬ್ರಿಗೇಡಿಯರ್ ವಿನೋದ್ ಹಡಪ್ವಾಡ್, ನಿವೃತ್ತ ಕರ್ನಲ್ ವಿಜಯ್ ಕುಮಾರ್, ಮೈಸೂರು ಮಹಾನಗರ ಪಾಲಿಕೆಯ ಅಧೀಕ್ಷಕ ಅಭಿಯಂತರ ಸಿ.ಮಂಜುನಾಥ್, ಎಇಇ ಸತ್ಯಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಡಿ.ಸುದರ್ಶನ್, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಕೆ.ಪಿ.ದಿವಾಕರ್ ಹಾಗೂ ಇನ್ನಿತರರು ಸ್ಥಳ ಪರಿಶೀಲಿಸಿದರು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಜಾಗದಲ್ಲಿ ನಿರ್ಮಿಸುತ್ತಿರುವ ಯುದ್ಧ ಸ್ಮಾರಕದ ಮುಂದುವರೆದ ಕಾಮಗಾರಿ ಕೈಗೊಳ್ಳುವ ಸಂಬಂಧ ಅಧಿಕಾರಿಗಳ ತಂಡ ಸ್ಥಳ ಪರಿಶೀಲಿಸಿತು.

ಈ ವೇಳೆ ನಿವೃತ್ತ ಸೇನಾಧಿಕಾರಿ ಸಿ.ಎಲ್.ಆನಂದ್ ಪತ್ರಕರ್ತರೊಂದಿಗೆ ಮಾತನಾಡಿ, ಯುದ್ಧ ಸ್ಮಾರಕ ನಿರ್ಮಾಣ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಯುದ್ಧ ಸ್ಮಾರಕ ಅಂತರ ರಾಷ್ಟ್ರೀಯ ಗುಣಮಟ್ಟದಲ್ಲಿರಬೇಕೆಂಬ ಉದ್ದೇಶದಿಂದ ಮೈದಾನವನ್ನು ಅಭಿವೃದ್ಧಿಪಡಿಸಲು ಬೇಕಾದ ಅನುದಾನ ಬಿಡುಗಡೆ ಮಾಡುವಂತೆ ಈ ಹಿಂದೆ ಮೈಸೂರು ಮಹಾನಗರ ಪಾಲಿಕೆಗೆ ಮನವಿ ಮಾಡಲಾಗಿತ್ತು ಇದೀಗ ಅಮೃತ್ ಯೋಜನೆಯಲ್ಲಿ 1.5 ಕೋಟಿ ರೂ. ಬಿಡುಗಡೆಯಾಗಿದ್ದು, ಆ ಅನುದಾನದಲ್ಲಿ ಸ್ಮಾರಕದ ಮುಂದುವರೆದ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದರು.

ಯುದ್ಧ ಸ್ಮಾರಕದಲ್ಲಿ ಯುದ್ಧ ಟಾಂಕರ್, ಬಳಕೆಯಾದ ಗನ್ ಸೇರಿದಂತೆ ಶಸ್ತ್ರಾಸ್ತ್ರಗಳನ್ನು ಇಡಲಾಗುತ್ತದೆ. ಈಗಾಗಲೇ ಕೇಂದ್ರ ರಕ್ಷಣಾ ಸಚಿವರು ಮೈಸೂರಿನಲ್ಲಿ ನಿರ್ಮಿಸಲಾಗುತ್ತಿರುವ ಯುದ್ಧ ಸ್ಮಾರಕಕ್ಕೆ ಯುದ್ಧ ಟಾಂಕರ್ ಸೇರಿದಂತೆ ಇನ್ನಿತರ ಪರಿಕರಗಳನ್ನು ನೀಡಲು ಸಮ್ಮತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮೈದಾನದ ಅಭಿವೃದ್ಧಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಕಾಮಗಾರಿ ತ್ವರಿತ ಗತಿಯಲ್ಲಿ ನಡೆಯಲಿದೆ ಎಂದು ತಿಳಿಸಿದರು.

ಅಭಿವೃದ್ಧಿ ಕಾಮಗಾರಿ ಆರಂಭಕ್ಕೂ ಮುನ್ನ ಸ್ಮಾರಕದ ಸಮೀಪವಿರುವ ನೀರಿನ ಟ್ಯಾಂಕ್ ತೆರವು, ಮಳೆ ಮಾಪನ ಕೇಂದ್ರದ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಆ ನಂತರವಷ್ಟೇ ಸ್ಮಾರಕದ ಸುತ್ತಲೂ ವಾಕಿಂಗ್ ಪಾತ್ ಸೇರಿದಂತೆ ವಿವಿಧ ಕಾಮಗಾರಿ, ಅಲಂಕಾರಿಕ ಗಿಡ ನೆಡಲಾಗುವುದು ಎಂದರು.

ಜೆಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಪದವೀಧರರ ದಿನಾಚರಣೆ

- ದೇಶದಲ್ಲಿ ಶೇ.20 ರಿಂದ 30 ರಷ್ಟು ಯುವ ಸಮೂಹ ಮಾದಕ ವಸ್ತು ವ್ಯಸನಿಗಳು
- ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಆತಂಕ
- ಆರೋಗ್ಯ ವಿವಿಯ ಪ್ರತಿ ಅಂಗಸಂಸ್ಥೆ ಮಾದಕ ದ್ರವ್ಯ ಮುಕ್ತ ವಲಯ ಮಾಡುವ ಧ್ಯೇಯ



ಜೆಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಪದವೀಧರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮೈಸೂರು, ನ.27(ವಿವಿಹೆಚ್)– ಭಾರತವು ದಿನೇ ದಿನೇ ಹೆಚ್ಚುತ್ತಿರುವ ಮಾದಕ ವಸ್ತು ಹಾವಳಿ ವಿರುದ್ಧ ಹೋರಾಡುತ್ತಿದ್ದರೆ, ಶೇ. 20 ರಿಂದ 30 ರಷ್ಟು ಯುವ ಸಮೂಹ ಮಾದಕ ವ್ಯಸನಿಗಳಾಗಿದ್ದಾರೆ. ಇದು ಶೈಕ್ಷಣಿಕ ಪರಿಸರಕ್ಕೆ ಗಂಭೀರ ಅಪಾಯವನ್ನು ಉಂಟುಮಾಡುತ್ತಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ (ಆರ್‌ಜಿಯುಹೆಚ್‌ಎಸ್) ಕುಲಪತಿ ಡಾ. ಬಿ.ಸಿ.ಭಗವಾನ್ ಕಳವಳ ವ್ಯಕ್ತಪಡಿಸಿದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದ ಆವರಣದ ಸಭಾಂಗಣದಲ್ಲಿ ಗುರುವಾರ ನಡೆದ ಜೆಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಪದವೀಧರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ನಾರ್ಕೋಟಿಕ್ಸ್ ಬ್ಯೂರೋದ ವರದಿಗಳನ್ನು ಉಲ್ಲೇಖಿಸಿ ಮಾತನಾಡಿದ ಡಾ. ಭಗವಾನ್, ಕರ್ನಾಟಕದಾದ್ಯಂತ ಕಾಲೇಜು ಕ್ಯಾಂಪಸ್‌ಗಳಲ್ಲಿ ಮಾದಕ ದ್ರವ್ಯ ಪ್ರಕರಣಗಳು ಹೆಚ್ಚುತ್ತಿವೆ. ಇದಕ್ಕೆ ಕಡಿವಾಣ ಹಾಕಲು, ಆರ್‌ಜಿಯುಎಚ್‌ಎಸ್ ಪ್ರತಿಯೊಂದು ಅಂಗ ಸಂಸ್ಥೆಯನ್ನು ಮಾದಕ ದ್ರವ್ಯ ಮುಕ್ತ ಕ್ಯಾಂಪಸ್ ಮಾಡುವ ಧ್ಯೇಯವನ್ನು ಹೊಂದಿದ್ದು, ಕಠಿಣ ಮಾರ್ಗಸೂಚಿಗಳನ್ನು ಹೊರಡಿಸಲು ವಿಶೇಷ ಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿಸಿದರು.

ವೇದಗಳ ಕಾಲದ ಹಲವಾರು ಪ್ರಾಚೀನ ಆಯುರ್ವೇದ ಹಸ್ತಪ್ರತಿಗಳು ಪರಕೀಯರ ಆಕ್ರಮಣದಿಂದ ನಾಶವಾಗಿದ್ದು, ಉಳಿದಿರುವ ಸಾಂಪ್ರದಾಯಿಕ ಜ್ಞಾನವನ್ನು ಡಿಜಿಟಲ್ ಆರ್ಕೈವಿಂಗ್ ಮೂಲಕ ಸಂರಕ್ಷಿಸುವುದು ಅತ್ಯಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಭವಿಷ್ಯದ ಪೀಳಿಗೆಗೆ ಪ್ರಾಚೀನ ಆಯುರ್ವೇದ ಗ್ರಂಥಗಳನ್ನು ರಕ್ಷಿಸಲು ಮತ್ತು ದಾಖಲಿಸಲು ಆರ್‌ಜಿಯುಹೆಚ್‌ಎಸ್ ಪ್ರಮುಖ ಪ್ರಯತ್ನಗಳ ಪ್ರಾರಂಭಿಸಿದೆ. ಆಳವಾದ ವಿಷಯ ಜ್ಞಾನ, ಸಂಶೋಧನಾ ಮನೋಭಾವ ಮತ್ತು ಕೃತಕ ಬುದ್ಧಿಮತ್ತೆ, ಸೈಬರ್ ಕೌಶಲ್ಯಗಳು ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಅತ್ಯಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಪ್ರತಿ ವರ್ಷ ಸಾವಿರಾರು ಜನರು ಆರೋಗ್ಯ ಕ್ಷೇತ್ರಕ್ಕೆ ಪ್ರವೇಶಿಸುತ್ತಿದ್ದಾರೆ. ಕಲಿಕೆ ಮತ್ತು ಸೇವೆಗೆ ಅವಕಾಶಗಳು ಹೇರಳವಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ವೈದ್ಯರು ಮುಂದಾಗಬೇಕು. ಅಲ್ಲಿನ ಜನರಿಗೆ ಆರೋಗ್ಯ ರಕ್ಷಣೆಯನ್ನು ಒದಗಿಸಬೇಕು. ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಅಂಗಾಂಗ ದಾನಕ್ಕೆ ಮುಂದಾಗಿ, ಆ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ವಿವಿಯ ಆಡಳಿತಾತ್ಮಕ ಕ್ಯಾಂಪಸ್ ಅನ್ನು ರಾಮನಗರದ ಬಳಿ 250 ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಇದಲ್ಲದೇ ಭೀಮನಕುಪ್ಪೆ ಬಳಿ 50 ಎಕರೆ ಪ್ರದೇಶದಲ್ಲಿ ಕ್ಯಾನ್ಸರ್ ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡಲಾಗುತ್ತಿದೆ ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್ ಮಠ್, ಜೆಎಸ್‌ಎಸ್ ಮಹಾ ವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ.ಶರ್ಬೇಶ್ವರ್‌ಕರ್, ಉಪ ಪ್ರಾಂಶುಪಾಲರಾದ ಡಾ.ಶಿವಪ್ರಸಾದ್ ಹುಡೆದ, ಡಾ.ಎಸ್.ಶ್ರೀಹರಿ, ಡಾ.ವಿಶಾಲ್ ಎಸ್.ಕುಮಾರ್ ಉಪಸ್ಥಿತರಿದ್ದರು.

ಪದವಿ ಪ್ರದಾನ: ಈ ಸಂದರ್ಭದಲ್ಲಿ 98 ವಿದ್ಯಾರ್ಥಿಗಳು ಪದವಿ, 43 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆದುಕೊಂಡರು. ಪದವಿಯಲ್ಲಿ ನಾಲ್ಕು ಮಂದಿ ವಿದ್ಯಾರ್ಥಿಗಳು ರ್‍ಯಾಂಕ್ ಪಡೆದುಕೊಂಡಿದ್ದಾರೆ. ಸ್ನಾತಕೋತ್ತರ ಪದವಿಯಲ್ಲಿ 3 ಮಂದಿ ವಿದ್ಯಾರ್ಥಿಗಳು ರ್‍ಯಾಂಕ್ ಗಳಿಸಿದ್ದಾರೆ. ಇನ್ನು ಡಾ.ಅಶ್ಮಿತಾ ಯು, ಡಾ.ಶ್ರುತಿ. ಟಿ.ಪಿ, ಡಾ.ಸುಮೇಧಾ ಭಟ್ ಅವರಿಗೆ ಆರ್‌ಜಿಯುಎಚ್‌ಎಸ್ ವಿಶ್ವವಿದ್ಯಾಲಯದ ಟಾಪರ್ ಪ್ರಶಸ್ತಿಗಳ ನೀಡಲಾಯಿತು.

ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಭಾಗಗಳಲ್ಲಿ ರ್‍ಯಾಂಕ್ ಪಡೆದ ಕಾಯಚಿಕಿತ್ಸಾ ವಿಭಾಗದ ಡಾ.ನವ್ರತ.ಎಂ ಮತ್ತು ಡಾ.ಪಲ್ಲವಿ.ಎಸ್.ಎಲ್ ಸ್ವಸ್ಥವೃತ್ತ ವಿಭಾಗದ ಡಾ.ಪಲ್ಲವಿ.ಎಸ್.ಎಲ್. ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

331ನೆಯ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು, ನ. 27– ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ನಡೆಯುವ ಶಿವಾನುಭವ ದಾಸೋಹ ಮಾಲಿಕೆಯ 331ನೆಯ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಆಶೀರ್ವಾದಗಳೊಂದಿಗೆ ನ. 29 ರಂದು ಸಂಜೆ 6ಕ್ಕೆ ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದ ಇಡ್ಲಿಕಟ್ಟೆ ಹತ್ತಿರದ 2ನೇ 80 ಅಡಿ ರಸ್ತೆಯಲ್ಲಿ ಏರ್ಪಡಿಸಲಾಗಿದೆ.

ಆಕಾಶವಾಣಿಯ ನಿವೃತ್ತ ಹಿರಿಯ ಉದ್ಘೋಷಕರಾದ ಪ್ರಭುಸ್ವಾಮಿ ಚ. ಮಳಿಮಠ ಅವರು ವಚನಕಾರರ ದೃಷ್ಟಿಯಲ್ಲಿ ಮಾಯೆ ಕುರಿತು ಉಪನ್ಯಾಸ ನೀಡಲಿದ್ದಾರೆ. ನಿವೃತ್ತ ಆರಕ್ಷಕ ಉಪನಿರೀಕ್ಷಕ ಹೆಚ್.ಪಿ. ದೇವಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

COUTIONARY PUBLIC NOTICE

FOR THE ATTENTION OF THE GENERAL PUBLIC

Under the Instructions of my client Col CP Muthanna [Retd] Founder and Hon Secretary, Environment and Health Foundation [India] Notify as follows:

1. This cautionary public notice is to inform the General Public and all concerned agencies that conversion of Jamma, Bane, Sagu, Wetlands and Coffee Plantations in Kodagu District is illegal and constitutes a serious violation of the provisions of the Karnataka Land Revenue Act 1964.
2. This has been upheld by the Honorable High Court of Karnataka vide its order dated 23rd April 2025 with regard to WRIT PETITION No: 9903/2020 [KLR RES PIL].
3. Any Government official, member of Gram Panchayat or any other agency found to have violated the provisions of Karnataka Land Revenue Act 1964 with regard to commercial conversions of the above mentioned categories of lands in Kodagu District will be liable for prosecution under the relevant sections of the Law.

Sd/- Ravi.C., B.A.L., LL.B.,
ADVOCATE, KAR-914/2013
#30, 1st Cross, Hebbal Main Road,
Lokanayaka Nagar, Metagalli,
Mysore-16
Mob : 8746869691, 8660494255

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರಿಗೆ ನನ್ನ ಕಕ್ಷಿದಾರರಾದ ಶ್ರೀ.ಹೆಚ್.ಶ್ರೀನಿವಾಸ ಬಿನ್ ಕೆ.ಎಸ್.ಹನುಮೇಗೌಡ ವಯಸ್ಸು ಸುಮಾರು 63 ವರ್ಷ, ವಾಸ : ನಂ. 147, 10ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ಎ2ಬಿ ಹೋಟೆಲ್ ಹತ್ತಿರ, ಗೋವಿಂದರಾಜ ನಗರ, ವಿಜಯನಗರ, ಬೆಂಗಳೂರು ಉತ್ತರ ತಾಲ್ಲೂಕು ಬೆಂಗಳೂರು–560040 ರವರು ಈ ಕೆಳಕಂಡಂತೆ ಷೆಡ್ಯೂಲ್ ನಲ್ಲಿ ವಿವರಿಸಿರುವ ಸ್ವತ್ತನ್ನು ಶ್ರೀ ಕೆ.ಎಸ್.ಲಕ್ಷ್ಮಿ ನಾರಾಯಣ ಬಿನ್ ದಿವಂಗತ ಡಿ.ಶೇಷಯ್ಯ ವಯಸ್ಸು ಸುಮಾರು 62 ವರ್ಷ, ವಾಸ: ನಂ.14/ಬಿ, 2ನೇ ಮುಖ್ಯರಸ್ತೆ, ಧನಲಕ್ಷ್ಮಿ ಲೇಔಟ್, ವಿರೂಪಾಕ್ಷಪುರ, ಬೆಂಗಳೂರು–560097. ಇವರಿಂದ ಈ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ತೀರ್ಮಾನಿಸಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವಿಧವಾದ ಹಕ್ಕು, ತಕರಾರು ವಗೈರೆಗಳು ಇದ್ದ ಪಕ್ಷದಲ್ಲಿ ಸೂಕ್ತ ದಾಖಲೆಗಳೊಂದಿಗೆ ಈ ಪ್ರಕಟಣೆ ಪ್ರಕಟವಾದ 10 ದಿನಗಳೊಳಗಾಗಿ ನನ್ನ ಕಛೇರಿಗೆ ಖುದ್ದು ಬಂದು ಆಕ್ಷೇಪಣೆಯನ್ನು ಸಲ್ಲಿಸುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಅಂಚ್ಯ ಗ್ರಾಮದ ಸರ್ವೆ ನಂಬರ್ ಗಳಾದ 162/1,2,3, 163/1,2,3,4, 164/1, 165/2, 166/1,4,5,6,7,8,9, 167/12, 168, 169/1,2,3, ಒಟ್ಟು ವಿಸ್ತೀರ್ಣ 26 ಎಕರೆ 16 1/2 ಗುಂಟೆ ಜಮೀನುಗಳಲ್ಲಿ ದಿ. ಕೆ.ಎಸ್.ಎಫ್.ಸಿ ನೌಕರರ ಮತ್ತು ನೌಕರೇತರ ಗೃಹ ನಿರ್ಮಾಣ ಸಹಕಾರ ಸಂಘ [ರಿ] ರವರು ಸದರಿ ಮೇಲ್ಕಂಡ ಜಮೀನುಗಳನ್ನು ಅಭಿವೃದ್ಧಿಪಡಿಸಿ ಸದರಿ ಜಮೀನುಗಳಲ್ಲಿ "ಕೆಎಸ್ಎಫ್ಸಿ ಬಡಾವಣೆಯನ್ನು ನಿರ್ಮಿಸಿದ್ದು, ಸದರಿ ಬಡಾವಣೆಯಲ್ಲಿ ನಿವೇಶನಗಳನ್ನು ವಿಂಗಡಿಸಿದ್ದು, ಸದರಿ ನಿವೇಶನಗಳ ಪೈಕಿ ನಿವೇಶನ ಸಂಖ್ಯೆ 127[ಸಿ] ರ ವಿಸ್ತೀರ್ಣ ಪೂರ್ವ ಪಶ್ಚಿಮ 12 ಮೀಟರ್‌ಗಳು ಉತ್ತರ ದಕ್ಷಿಣ [8.40+5.50]/2 ಒಟ್ಟು 83.40 ಚದರ ಮೀಟರ್‌ವುಳ್ಳ ಖಾಲಿ ನಿವೇಶನದ ಸ್ವತ್ತಿಗೆ ಚಕ್ಕುಬಂಧಿ :

ಪೂರ್ವಕ್ಕೆ : ರಸ್ತೆ
ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 96
ಉತ್ತರಕ್ಕೆ : ನಿವೇಶನ ಸಂಖ್ಯೆ 126
ದಕ್ಷಿಣಕ್ಕೆ : ರಸ್ತೆ

ಎಲ್. ಸಿದ್ದೇಶ ಉಮ್ಮತ್ತೂರು, ವಕೀಲರು
ನಂ. 781, 1ನೇ ಮಹಡಿ, 60ನೇ ಕ್ರಾಸ್,
17ನೇ 'ಬಿ' ಮೈನ್, 5ನೇ ಬ್ಲಾಕ್, (ಡಾ॥ ಲಕ್ಷ್ಮಣ ರಾವ್ ಕ್ಲಿನಿಕ್ ಹತ್ತಿರ) ರಾಜಾಜಿನಗರ, ಬೆಂಗಳೂರು–560010

PUBLIC NOTICE

That our client Lalith Kumar s/o Late Rameshwar Lal 62 years residing at 704/6, 4th cross, Pararam Street, Nazarbad mohalla, Mysuru-570010 is intending to purchase and has entered sale agreement dated 20.11.2025 of immovable house property bearing house no.5, HIG-B, hudco, 4th stage, Kanthamanhalli, Kalyanigiri, Nazarbad Mohalla, Mysuru measuring east to west 16.40 meter, North to South 8.70 meter, totally 142.68 sq. meters more fully described in schedule property mentioned here in below, from its owners Muyeez Ahmed S/o Aijaz Ahmad, 46 years, resident of Muslim block Pet, ward no.15, Malvalli, Mandya-571430 and Suhail Ahmed s/o M Nazire Ahmed, 47 years, resident of House no 822, near Dar-us-Salman Mosque, 1st stage, Rajiv Nagar, Mysuru-570019, for valuable consideration, anybody having any objections to the purchase of the said property may contact the undersigned advocate or the intending purchaser in the address shown below with their written objection within a week from the date of this publication. If no objections are received, our client will proceed to materialise the sale without any further reference. In no circumstances any objections after the notice period will be entertained in the matter

SCHEDULE PROPERTY

The part and parcel of immovable house property bearing no.5, HIG-B, hudco, 4th stage, Kanthamanhalli, Kalyanigiri, Nazarbad Mohalla, Mysuru measuring east to west 16.40 meters, north to south 8.70 meters, totally 142.68 sq. meter, (As per Mysore Metropolitan Corporation e-Account Record No.-24454896, Property No.65-7-51-121) bounded by: East by: Road, West by: Property no.24, North by: Property no.04, south by: Property no.06

Sd/- C.BHARATH KUMAR
AAGAM LAW ASSOCIATES
Advocate, 685, 5th Cross Paparam Street Nazarbad Mysore-570010;

CLIENT: LALITH KUMAR
S/o Rameshwar Lal
No 704/6, 4th Cross, Paparam-Street, Nazarbad Mohalla, Mysore-570010, Mob: 9845861751
Dated: 27.11.2025

ಎರಡನೇ ವರ್ಷದ ಪುಣ್ಯಸ್ಮರಣೆ



ನಿಧನ : 28-11-2023

ಶ್ರೀಮತಿ ರಾಣಿ ಮತ್ತು ಶ್ರೀ ರಾಜಣ್ಣ

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ
ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಮೃತರ ಮಗನಾದ ಆರ್. ಅಭಿಷೇಕ್ ಗೌಡ, ಸಿಂಚನ ಅಭಿಷೇಕ್ ಗೌಡ, ಶ್ರೀಮತಿ ಶ್ವೇತ ಮತ್ತು ಶ್ರೀ ಮಹೇಶ್, ಶ್ರೀಮತಿ ಶಾಂತ ಮತ್ತು ಶ್ರೀ ಎಸ್. ಮಹದೇವು, ಆರ್.ಎಂ.ಸಿ. ಶ್ರೀಮತಿ ಆರ್. ಲಕ್ಷ್ಮಿ ಮತ್ತು ಶ್ರೀ ವೈ ಎಸ್. ಬಸವರಾಜು, ಆರ್.ಎಂ.ಸಿ. ಶ್ರೀಮತಿ ಮಮತ ಮತ್ತು ಶ್ರೀ ಎಸ್. ನಿಂಗರಾಜು, ಆರ್‌ಎಂಸಿ, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ದಿ॥ ಈರಮ್ಮ ಶಿವಪ್ಪ ಕುಟುಂಬವರ್ಗದವರು ಹಾಗೂ ಯರಗನಹಳ್ಳಿ ಗ್ರಾಮಸ್ಥರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಮಾಲೇಗೌಡರು

ಇವರು ದಿ: 18-11-2025 ನೇ ಮಂಗಳವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿ: 28-11-2025ನೇ ಶುಕ್ರವಾರ ಬೆಳಿಗ್ಗೆ 10-30 ರಿಂದ 12-30 ರವರೆಗೆ ಉತ್ತರ ಕ್ರಿಯಾದಿ ಕಾರ್ಯವನ್ನು ನಮ್ಮ ಸ್ವಗೃಹ : ಮೈಸೂರು ತಾ॥, ಜಯಪುರ ಹೋ॥, ದೊಡ್ಡಹುಂಡಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನ ಎಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀಮತಿ ಮಹದೇವಮ್ಮ (ಮಹದೇವಿ), ಗಂಡು ಮಕ್ಕಳು, ಸೊಸೆ, ಮಗಳು, ಅಳಿಯ, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಗ್ರಾಮಸ್ಥರು

ಭೋಜನ: ಮಧ್ಯಾಹ್ನ 1-00 ಗಂಟೆಗೆ

ಹರಿಕಥೆ: ದೊಡ್ಡಹುಂಡಿ ಶ್ರೀ ರೇವಣ್ಣ ಸಿದ್ದೇಶ್ವರ ಗುರು ಭಕ್ತ ಮಂಡಳಿ ಅವರಿಂದ ತತ್ವಚಿಂತನೆ, ರಾತ್ರಿ 9-00 ಗಂಟೆಗೆ



ಹಸಿರು ನಮ್ಮ ಉಸಿರು

ಹೊಸಕೋಟೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಹೊಸಕೋಟೆ (ಹಳೇ ಕೆಂಪಯ್ಯನಹುಂಡಿ-571110)
ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಪ್ರಕಟಣೆ

ಮೈಸೂರು ಜಿಲ್ಲೆ ಟಿ. ನರಸೀಪುರ ತಾ॥ ಹೊಸಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಬೀದಿ ದೀಪಗಳಿಗೆ ಡಿಜಿಟಲ್ ಟೈಮರ್ ಸ್ವಿಚ್ ಅಳವಡಿಸಲು ದಿನಾಂಕ: 31-10-2025 ರಂದು ನಡೆದ ಸಾಮಾನ್ಯ ಸಭೆಯ ನಿರ್ಣಯದಂತೆ ಬೀದಿ ದೀಪಗಳ 50 ಟೈಮರ್ ಹ್ಯಾವೆಲ್ಸ್ ದರ ಪಟ್ಟಿಯನ್ನು ಕರೆದಿದ್ದು ಆಸಕ್ತರು ಜಿ ಎಸ್ ಟಿ ಇರುವ ಆಸಕ್ತ ಸರಬರಾಜುದಾರರು 7 ದಿನಗಳೊಳಗೆ ದರಪಟ್ಟಿಯನ್ನು ಗ್ರಾಮ ಪಂಚಾಯಿತಿ ಕಛೇರಿಗೆ ತಲುಪಿಸಲು ಸೂಚಿಸಿದೆ.

Contact : 8147403660
PDO, Hosakote, Kasaba Hobli,
T.N.Pura

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ದಿನಾಂಕ: 24-11-2025 ಹೊಸಕೋಟೆ ಗ್ರಾಮ ಪಂಚಾಯಿತಿ, ತಿ.ನರಸೀಪುರ ತಾಲ್ಲೂಕು

ಸ್ಥಾಪನೆ:1923 ದೂರವಾಣಿ: 0821-2442864
ಮೊಬೈಲ್ : 9972039899

ದಿ ಗ್ರ್ಯಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು – 570004

ನಂ.143/2025-26 ದಿನಾಂಕ : 26.11.2025

ಪ್ರಕಟಣೆ

ಬ್ಯಾಂಕಿನ ಮಾನ್ಯ ಸದಸ್ಯರುಗಳು ಹಾಗೂ "ಸದಸ್ಯರಲ್ಲದವರಿಗೂ" ಕೂಡಲೇ ಕಡಿಮೆ ಬಡ್ಡಿದರದಲ್ಲಿ ಹಾಗೂ ಮಾಸಿಕ ಬಡ್ಡಿ ಕಡಿಮೆಗೊಳಿಸುವ (Reducing Balancing System) ವಿಧಾನದಲ್ಲಿ

1) ಮನೆ ಕಟ್ಟಿಸಲು, ಅಭಿವೃದ್ಧಿ ಪಡಿಸಲು, ಮನೆ ಆಧಾರ ಮಾಡಿಕೊಂಡು ಗರಿಷ್ಠ ಸಾಲ : ಒಂದು ಕೋಟಿ
2) ಚಿನ್ನದಾಭರಣ ಸಾಲಕ್ಕೆ ಯಾವುದೇ ಶುಲ್ಕ ವಿಧಿಸದೇ ನೀಡುವ ಸಾಲ ಬಡ್ಡಿದರ ಶೇ::9% : ಹತ್ತು ಲಕ್ಷ
3) ಇತರೆ ಹಣಕಾಸು ಸಂಸ್ಥೆಗಳಲ್ಲಿ / ಬ್ಯಾಂಕುಗಳಲ್ಲಿ ಇರುವ ಚಿನ್ನದಾಭರಣ ಸಾಲಗಳನ್ನು ಕಡಿಮೆ ಬಡ್ಡಿದರ ವಿಧಿಸಿ, ಈ ಸಾಲಕ್ಕೆ ಯಾವುದೇ ರೀತಿಯಾದ ಶುಲ್ಕ ವಿಧಿಸದೆ ನಮ್ಮ ಬ್ಯಾಂಕಿಗೆ ಟೇಕ್ ಓವರ್‌ಮಾಡಿ ಸಾಲ ತೀರಿಸುವ ಸೌಲಭ್ಯ ಇರುತ್ತದೆ.

ಬ್ಯಾಂಕಿನ ವ್ಯವಹಾರದ ವೇಳೆಯನ್ನು ದಿನಾಂಕ 01-12-2025 ರಿಂದ ಬೆಳಿಗ್ಗೆ 10.00 ರಿಂದ 1.00 ಗಂಟೆ ಸಂಜೆ 4.30 ರಿಂದ 7.00 ಗಂಟೆ ನಿಗಧಿಪಡಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಬ್ಯಾಂಕಿನ ವ್ಯವಸ್ಥಾಪಕರನ್ನು ಸಂಪರ್ಕಿಸಲು ಕೋರಲಾಗಿರುತ್ತೆ.

ಸಹಿ/– ವ್ಯವಸ್ಥಾಪಕರು



ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸುಪ್ರೀಮ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಶುಭಾರಂಭ



ಮೈಸೂರು: ಸುಪ್ರೀಮ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಭವ್ಯ ಉದ್ಘಾಟನಾ ಸಮಾರಂಭವು ಭಾನುವಾರ, ದಿನಾಂಕ 23 ನವೆಂಬರ್ 2025, ಬೆಳಗ್ಗೆ 10:30ರಿಂದ 11:30ರ ವೇಳೆಗೆ ಶ್ರದ್ಧೆ ಮತ್ತು ಸಾಂಸ್ಕೃತಿಕ ಗೌರವದಿಂದ ನೆರವೇರಿತು. ಮೈಸೂರಿನ ಆರೋಗ್ಯ ಕ್ಷೇತ್ರಕ್ಕೆ ಮತ್ತೊಂದು ಮೌಲ್ಯವನ್ನೂ, ಜನರ ಆರೋಗ್ಯಕ್ಕೆ ಮತ್ತೊಂದು ಭರವಸೆಯನ್ನೂ ನೀಡುವ ಸಂಸ್ಥೆಯಾಗಿ ಈ ಆಸ್ಪತ್ರೆ ತನ್ನ ಹೆಜ್ಜೆಯನ್ನು ಪ್ರಾರಂಭಿಸಿದೆ.

ಈ ಸಂದರ್ಭದಲ್ಲಿ ಸಂಸ್ಥಾಪಕರು ಹಾಗೂ ನಿರ್ದೇಶಕರು ಉಪಸ್ಥಿತರಿದ್ದು ಆಸ್ಪತ್ರೆಯ ಸ್ಥಾಪನೆಯ ಹಿನ್ನೆಲೆ, ಜನಸೇವೆಯ ಉದ್ದೇಶ ಮತ್ತು ಭವಿಷ್ಯದ ಆರೋಗ್ಯ ಸೇವಾ ಯೋಜನೆಗಳ ಕುರಿತು ಮಾತನಾಡಿದರು. "ಮೈಸೂರಿನ ಸಾಮಾನ್ಯ ಜನರಿಗೆ ಅತ್ಯಾಧುನಿಕ ಮತ್ತು ಕೈಗೆಟಕುವ ಚಿಕಿತ್ಸೆಯನ್ನೇ ಈ ಆಸ್ಪತ್ರೆ ನೀಡಲಿದೆ" ಎಂದರು.

ಅತಿಥಿಗಳು ಆಸ್ಪತ್ರೆಯ ಮೂಲ ಸೌಕರ್ಯ, ವೈದ್ಯಕೀಯ ತಂಡದ ತಾಂತ್ರಿಕ ಸಾಮರ್ಥ್ಯ ಮತ್ತು ಜನಪರ ಸೇವಾ ಮನೋಭಾವವನ್ನು ಶ್ಲಾಘಿಸಿದರು. ನೂತನ ಕಟ್ಟಡದಲ್ಲಿ 24x7 ತುರ್ತು ಸೇವೆಗಳು, ICU, NICU, ಅಲ್ಟ್ರಾಸೌಂಡ್, ಲ್ಯಾಬ್ ಸೌಲಭ್ಯ, ಶಸ್ತ್ರಚಿಕಿತ್ಸಾ ಘಟಕಗಳು, ಹಾಗೂ ವಿವಿಧ ವಿಶೇಷ ವಿಭಾಗಗಳ ಚಿಕಿತ್ಸೆಗಳು ಲಭ್ಯವಿರುವುದಾಗಿ ಆಸ್ಪತ್ರೆಯ ನಿರ್ವಹಣಾ ಮಂಡಳಿ ಪರಿಚಯಿಸಿತು.


ಕಾರ್ಯಕ್ರಮಕ್ಕೆ ಗಣ್ಯ ಅತಿಥಿಗಳಾಗಿ
ಶ್ರೀ ಜಿ.ಟಿ. ದೇವೇಗೌಡರು, ಶಾಸಕರು,
ಶ್ರೀ ಟಿ.ಎಸ್. ಶ್ರೀವತ್ಸರು, ಶಾಸಕರು,
ಶ್ರೀ ಜಿ.ಡಿ. ಹರೀಶ್‌ಗೌಡರು, ಶಾಸಕರು
ಶ್ರೀ ಚಂದ್ರೇಗೌಡರು, ಮಾಲೀಕರು,
ಶ್ರೀ ಎಂ. ಮಹೇಶ್ ಶೆಟ್ಟಿ, ಟ್ರಸ್ಟಿ, ಕಾಮಾಕ್ಷಿ ಆಸ್ಪತ್ರೆ,
ಶ್ರೀ ಕೆ. ಆರ್ ಕಾಮತ್, ಆಡಳಿತಾಧಿಕಾರಿಗಳು, ಕಾಮಾಕ್ಷಿ ಆಸ್ಪತ್ರೆ,
ಪ್ರಖ್ಯಾತ ವೈದ್ಯರಾದ ಡಾ. ರೂಪ ಪ್ರಕಾಶ್ ಮತ್ತು ಡಾ. ಪ್ರಕಾಶ್ ಪ್ರಭು ರವರು ಹಾಜರಾಗಿ ಶುಭ ಕೋರಿದರು.



ಕಾರ್ಯಕ್ರಮದಲ್ಲಿ ಮಾತನಾಡಿದ ಅತಿಥಿಗಳು, "ಆಧುನಿಕ ತಾಂತ್ರಿಕತೆ ಮತ್ತು ಮಾನವೀಯ ಸೇವೆಯ ಸಂಯೋಜನೆ ಹೊಂದಿದ ಆಸ್ಪತ್ರೆಗಳು ಸಮಾಜದ ಆರೋಗ್ಯ ಮಟ್ಟವನ್ನು ಸುಧಾರಿಸುತ್ತವೆ. ಸುಪ್ರೀಮ್ ಆಸ್ಪತ್ರೆ ಮೈಸೂರಿಗೆ ನಿಜವಾದ ಆರೋಗ್ಯ ಭದ್ರತೆ ನೀಡಲಿದೆ" ಎಂದು ಅಭಿಪ್ರಾಯ ಪಟ್ಟರು.

ಉದ್ಘಾಟನಾ ಸಮಾರಂಭದಲ್ಲಿ ನಗರದಲ್ಲಿನ ವಿವಿಧ ಸಂಸ್ಥೆಗಳ ಪ್ರತಿನಿಧಿಗಳು, ವೈದ್ಯರು, ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರು ಮತ್ತು ಸ್ಥಳೀಯ ನಾಗರಿಕರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಅಂತಿಮವಾಗಿ ಆಸ್ಪತ್ರೆಯ ಪರವಾಗಿ ಮತ್ತು ಸಹ-ಸಂಸ್ಥಾಪಕರು



ಎಲ್ಲರಿಗೂ ಕೃತಜ್ಞತೆ ಸಲ್ಲಿಸಿ, ಜನಸಾಮಾನ್ಯರಿಗೆ ಸದಾ ಉತ್ತಮ, ವಿಶ್ವಾಸಾರ್ಹ ಮತ್ತು ಗುಣಮಟ್ಟದ ಆರೋಗ್ಯ ಸೇವೆ ನೀಡುವ ಬದ್ಧತೆಯನ್ನು ಪುನರುಚ್ಚರಿಸಿದರು.

"ಮೈಸೂರಿನ ಸಾಮಾನ್ಯ ಜನರಿಗೆ ಅತ್ಯಾಧುನಿಕ ಮತ್ತು ಕೈಗೆಟಕುವ ಚಿಕಿತ್ಸೆಯನ್ನು ನೀಡುವುದೇ ನಮ್ಮ ಆಸ್ಪತ್ರೆಯ ಧ್ಯೇಯ"

ನಂ.3398, 3ನೇ ಹಂತ, ದಟ್ಟಗಳ್ಳಿ, ನೇತಾಜಿ ಸರ್ಕಲ್, ಸಾರಾ ಕಲ್ಯಾಣಮಂಟಪ, ರಿಂಗ್ ರಸ್ತೆ, ಮೈಸೂರು – 570022,
70223 62366
0821- 4519616
supremehosp.aastahealth@gmail.com